ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 16 ಗುರುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 269 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ವರದಿ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸದಿರಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ

- ಪಕ್ಷದ ವರಿಷ್ಠರ ಭೇಟಿ ನಂತರ ಕಡೇ ಗಳಿಗೆಯಲ್ಲಿ ನಿರ್ಧಾರ ಬದಲಾವಣೆ
- ಇದಕ್ಕೂ ಮೊದಲು ವರಿಷ್ಠರಿಗೆ ಪರಿಸ್ಥಿತಿ ಮನವರಿಕೆ ಮಾಡಿಕೊಟ್ಟ ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಜ.15(ಕೆಎಂಶಿ)–ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯನ್ನು ಗುರುವಾರ ನಡೆಯುವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸದಿರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಕಡೇ ಗಳಿಗೆಯಲ್ಲಿ ತಮ್ಮ ನಿರ್ಧಾರವನ್ನು ಬದಲಿಸಿದ್ದಾರೆ.

ಗುರುವಾರ ಬೆಳಗ್ಗೆ ನಡೆಯಲಿರುವ ಸಂಪುಟ ಸಭೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ವರದಿ ಮಂಡಿಸುವ ವಿಷಯ ಕಲಾಪ ಪಟ್ಟಿಯಲ್ಲಿ ಸೇರ್ಪಡೆಗೊಂಡಿತ್ತು. ದೆಹಲಿಯಲ್ಲಿ ನಡೆದ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪಕ್ಷದ ವರಿಷ್ಠರ ಸಲಹೆಯಂತೆ ತಮ್ಮ ನಿರ್ಧಾರವನ್ನು ಮುಂದೂಡಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಗೆ ಒಕ್ಕಲಿಗ ಮತ್ತು ಲಿಂಗಾಯತ ಸೇರಿದಂತೆ ಹಲವು ಸಮುದಾಯಗಳು ವಿರೋಧ ವ್ಯಕ್ತಪಡಿಸಿವೆ. ವರದಿ ಅನುಷ್ಠಾನಗೊಂಡರೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುವ ಜೊತೆಗೆ ಮೇಲ್ಜಾತಿಯವರನ್ನು ಪೂರ್ಣವಾಗಿ ಎದುರು ಹಾಕಿಕೊಳ್ಳಬೇಕಾಗುತ್ತದೆ ಎಂದು ಉಪಮುಖ್ಯ



ಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಕ್ಷದ ವರಿಷ್ಠರಿಗೆ ಮಾಹಿತಿ ನೀಡಿದ್ದರು.

ಕಾಂಗ್ರೆಸ್ ನೂತನ ಭವನ ಉದ್ಘಾಟನೆಗೆಂದು ದೆಹಲಿಯಲ್ಲೇ ಬಿಡಾರ ಹೂಡಿದ್ದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ, ಪ್ರತ್ಯೇಕವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಸೇರಿದಂತೆ ಪಕ್ಷದ ಮುಖಂಡರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರದೇಶ ಕಾಂಗ್ರೆಸ್ ಮತ್ತು ಸರ್ಕಾರದಲ್ಲಿ ಪರ–ವಿರೋಧ ನಿಲುವುಗಳು, ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ರಣದೀಪ್ ಸಿಂಗ್ ಸುರ್ಜೇವಾಲ ವರಿಷ್ಠರಿಗೆ ವರದಿ ಸಲ್ಲಿಸಿದ್ದಾರೆ. ಇದರ ಬೆನ್ನಲ್ಲೇ ಶಿವಕುಮಾರ್ ನಿನ್ನೆ ರಾತ್ರಿ ಎಐಸಿಸಿ ಅಧ್ಯಕ್ಷರನ್ನು ಭೇಟಿ ಮಾಡಿ, ಮುಖ್ಯಮಂತ್ರಿಗಾದಿ ಸಂಬಂಧದ ವಿವಾದ, ಔತಣಕೂಟ ಸಭೆಗಳು ಹಾಗೂ ಸಿದ್ದರಾಮಯ್ಯ ಗುರುವಾರ ಸಂಪುಟ ಸಭೆಯಲ್ಲೇ ಶೈಕ್ಷಣಿಕ ವರದಿ ಮಂಡನೆಗೆ ಮುಂದಾಗಿರುವುದು ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಲಿದೆ ಎಂಬ ಮಾಹಿತಿಯನ್ನು ವಿವರಿಸಿದ್ದರು. ವರದಿ ಅನುಷ್ಠಾನದಿಂದ ಪಕ್ಷದ ಮೇಲೆ ಪರಿಣಾಮ ಬೀರಲಿದೆ. ಅದರಲ್ಲಿ ಕೆಲವು ಬದಲಾವಣೆ ಮಾಡಿ ನಂತರ ಅನುಷ್ಠಾನಗೊಳಿಸಲಿ. ಆದರೆ, ತರಾತುರಿ ಬೇಡ, ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಸಲಹೆ ನೀಡುವಂತೆ ಖರ್ಗೆ ಅವರಿಗೆ ಮನವಿ ■6ನೇ ಪುಟಕ್ಕೆ

ಮುಖ್ಯಮಂತ್ರಿಗಳ ಕುಟುಂಬ ಮುಡಾದಿಂದ 14 ನಿವೇಶನ ಪಡೆದ ಪ್ರಕರಣ; ಸಿಬಿಐ ತನಿಖೆ ಕೋರಿ ರಿಟ್ ಅರ್ಜಿ

ಜ.27ಕ್ಕೆ ವಿಚಾರಣೆ ಮುಂದೂಡಿಕೆ; ಅದಕ್ಕೂ ಮುನ್ನ ಲೋಕಾಯುಕ್ತ ತನಿಖೆ ವರದಿ ಸಲ್ಲಿಕೆಗೆ ಆದೇಶ

- ನ್ಯಾಯಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಏಕಸದಸ್ಯ ಪೀಠ ಸೂಚನೆ
- ಮುಂದಿನ ವಿಚಾರಣೆವರೆಗೂ ಲೋಕಾಯುಕ್ತ ಎಡಿಜಿಪಿ ತನಿಖೆ ಮುಂದುವರೆಸಲು ಸಲಹೆ





ನ್ಯಾಯಮೂರ್ತಿ ಎಂ.ನಾಗಪ್ರಸನ್ನ



ಮುಡಾ ಕಚೇರಿ

ಬೆಂಗಳೂರು, ಜ.15(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ಪಡೆದಿರುವ 14 ಬಿಡಿ ನಿವೇಶನ ಹಗರಣ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಕೋರಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು ರಾಜ್ಯ ಹೈಕೋರ್ಟ್ ಜನವರಿ 27ಕ್ಕೆ ಮುಂದೂಡಿದೆ.

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ಮುಂದುವರಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ, ಮುಂದಿನ ವಿಚಾರಣೆ ಕೈಗೆತ್ತಿಕೊಳ್ಳುವುದಕ್ಕೂ ಮುನ್ನ ಲೋಕಾಯುಕ್ತ ಇಲ್ಲಿಯವರೆಗಿನ ತನ್ನ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಆದೇಶಿಸಿದರು. ಮುಂದಿನ ವಿಚಾರಣೆವರೆಗೂ ಲೋಕಾಯುಕ್ತ ಎಡಿಜಿಪಿ ಪ್ರಕರಣಕ್ಕೆ ಸಂಬಂಧಿಸಿದ ತನಿಖೆ ಮುಂದುವರಿಸಲು ನ್ಯಾಯಾಲಯ ಅವಕಾಶ ಮಾಡಿಕೊಟ್ಟಿತು. ವಿಚಾರಣೆ ಕೈಗೆತ್ತಿಕೊಳ್ಳುವುದಕ್ಕೂ ಮುನ್ನ ಎರಡೂ ಕಡೆಯ ವಕೀಲರುಗಳಿಗೆ, ಪ್ರಕರಣವನ್ನು ಸಿಬಿಐಗೆ ವಹಿಸಬೇಕೇ, ಬೇಡವೇ ಎಂಬಷ್ಟಕ್ಕೆ ಸೀಮಿತವಾಗಿ ವಾದ ಮಂಡಿಸುವಂತೆ ನ್ಯಾಯಮೂರ್ತಿ ಸೂಚಿಸಿದರು. ಇದಕ್ಕೂ ಮುನ್ನ ಸ್ನೇಹಮಯಿ ಕೃಷ್ಣ ಪರ ಸುಪ್ರೀಂಕೋರ್ಟ್ ವಕೀಲ ಮಣೀಂದರ್ ಸಿಂಗ್ ವಾದ ಮಂಡಿಸಿ, ತನಿಖೆ ನಿಷ್ಪಕ್ಷವಾಗಿರಬೇಕು ಎಂಬ ವಿಶ್ವಾಸ ಜನರಲ್ಲಿ ಮೂಡುವಂತಿರಬೇಕು. ಆಡಳಿತದಲ್ಲಿ ಇರುವ ರಾಜಕಾರಣಿಗಳ ■6ನೇ ಪುಟಕ್ಕೆ

ಕೆಪಿಸಿಸಿಗೆ ವರ್ಚಸ್ವೀ ನಾಯಕರ ನೇಮಕ ಮಾಡಿ

ವರಿಷ್ಠರಲ್ಲಿ ಸಚಿವ ಸತೀಶ್ ಜಾರಕಿಹೊಳಿ ಮನವಿ

ಬೆಂಗಳೂರು, ಜ.15(ಕೆಎಂಶಿ)–ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹುದ್ದೆಯಿಂದ ಡಿ.ಕೆ.ಶಿವಕುಮಾರ್ ಅವರನ್ನು ಬದಲಾಯಿಸಿ, ಅವರ ಸ್ಥಾನಕ್ಕೆ ವರ್ಚಸ್ವೀ ನಾಯಕರೊಬ್ಬರನ್ನು ಪೂರ್ಣ ಪ್ರಮಾಣದ ಅಧ್ಯಕ್ಷರನ್ನಾಗಿ ನೇಮಿಸುವಂತೆ ಪಕ್ಷದ ವರಿಷ್ಠರಿಗೆ ಮನವಿ ಮಾಡಿರುವುದಾಗಿ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ, ತಮ್ಮ ಅಭಿಪ್ರಾಯವನ್ನು ತಿಳಿಸಿದ್ದೇನೆ. ಪಕ್ಷ ಸಂಘಟನೆ ದೃಷ್ಟಿಯಿಂದ ಪೂರ್ಣ ಪ್ರಮಾಣದ ಅಧ್ಯಕ್ಷರ ಅಗತ್ಯ ಇದೆ. ನೀವು ಯಾರನ್ನಾದರೂ ಮಾಡಿ, ತಕ್ಷಣ ಮಾಡಿ. ನೀವು ತೆಗೆದುಕೊಳ್ಳುವ ನಿರ್ಧಾರವನ್ನು ನಮಗೆ ತಿಳಿಸಿ ಎಂದಿದ್ದೇನೆ. ನಾನು ಆ ಹುದ್ದೆಯ ಆಕಾಂಕ್ಷಿ ಅಲ್ಲ, ನಮಗೆ ಪಕ್ಷ ಸಂಘಟನೆ ಮುಖ್ಯ. ಶಿವಕುಮಾರ್ ಉಪಮುಖ್ಯಮಂತ್ರಿಯಾಗಿ ಎರಡು–ಮೂರು ಅಧಿಕಾರ ಹುದ್ದೆಗಳನ್ನು ಇಟ್ಟುಕೊಂಡು ಪಕ್ಷದ ಹೊಣೆ ನಿಭಾಯಿಸುವುದು ಕಷ್ಟ, ಪಕ್ಷದ ನಿಯಮಾವಳಿಯಂತೆ ಒಬ್ಬರಿಗೆ ಒಂದೇ ಹುದ್ದೆ. ಕರ್ನಾಟಕದಲ್ಲಿ ಸರ್ಕಾರ ರಚನೆ ಸಂದರ್ಭದಲ್ಲಿ, ನೀವು ಶಿವಕುಮಾರ್ ಅವರಿಗೆ ನೀಡಿದ ಭರವಸೆಯಂತೆ ಲೋಕಸಭೆ ಚುನಾವಣೆವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರೆಯುವಂತೆ ಸೂಚಿಸಿದ್ದೀರಿ. ಚುನಾವಣೆ ಮುಗಿದು 6 ತಿಂಗಳು ಮುಗಿದಿದೆ ಆದರೆ, ಬದಲಾವಣೆ ಆಗಿಲ್ಲ. ನನಗೆ ಅವರ ಬಗ್ಗೆ ವೈಯಕ್ತಿಕ ದ್ವೇಷವಿಲ್ಲ, ಬೇಕಾದರೆ ಅವರೇ ಮುಂದುವರೆಯಲಿ. ಆದರೆ, ಒಂದು ಸ್ಥಾನದಲ್ಲಿ ಮಾತ್ರ, ನೀವು ಈ ಬಗ್ಗೆ ನಮಗೆ ಸ್ಪಷ್ಟ ಸಂದೇಶ ನೀಡಬೇಕು ಎಂದು ತಿಳಿಸಿದ್ದೇನೆ ಎಂದರು.



ಸತೀಶ್ ಜಾರಕಿಹೊಳಿ

ಪರ ಪುರುಷನ ಸಹವಾಸ; ಕೌಟುಂಬಿಕ ಕಲಹ

ಪತ್ನಿಯನ್ನ ಕೊಚ್ಚಿ ಕೊಂದು ಪೊಲೀಸರಲ್ಲಿ ಶರಣಾದ ಪತಿ

ಹೆಚ್.ಡಿ.ಕೋಟೆ, ಜ.15– ಪರ ಪುರುಷನೊಂದಿಗೆ ಸಂಬಂಧ ಹೊಂದಿದ್ದ ಪತ್ನಿಯ ವರ್ತನೆಯಿಂದ ರೊಚ್ಚಿಗೆದ್ದ ರೈತ, ಆಕೆಯನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿ, ಪೊಲೀಸರಿಗೆ ಶರಣಾದ ಘಟನೆ ತಾಲೂಕಿನ ಕಣಿಯನಹುಂಡಿ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ಸಂಭವಿಸಿದೆ. ಗ್ರಾಮದ ರೈತ ದೇವರಾಜ್, ತನ್ನ ಪತ್ನಿ ತೇಜಸ್ವಿನಿ (26)ಯನ್ನು ಕೊಲೆ ಮಾಡಿ, ಪೊಲೀಸರ ಅತಿಥಿಯಾಗಿದ್ದಾನೆ.



ತೇಜಸ್ವಿನಿ

ವಿವರ: ಮೈಸೂರು ತಾಲೂಕು ಕುಟ್ವಾಡಿ ಗ್ರಾಮದ ತೇಜಸ್ವಿನಿ ಮತ್ತು ಕಣಿಯನಹುಂಡಿ ಗ್ರಾಮದ ವಾಸಿ ದೇವರಾಜ್ ವಿವಾಹ 8 ವರ್ಷದ ಹಿಂದೆ ನಡೆದಿದ್ದು, ದಂಪತಿ ಕಣಿಯನಹುಂಡಿ ಗ್ರಾಮದ ತೋಟದ ಮನೆಯಲ್ಲಿ ವಾಸವಿದ್ದು, ಬೇಸಾಯ ಮಾಡಿಕೊಂಡಿದ್ದಾರೆ. ಪ್ರಾರಂಭದಲ್ಲಿ ಅನ್ಯೋನ್ಯವಾಗಿದ್ದ ಈ ದಂಪತಿಗೆ 5 ವರ್ಷದ ■6ನೇ ಪುಟಕ್ಕೆ

ಫೈನಾನ್ಸ್‌ಗಳ ಕಿರುಕುಳ; ಮನೆಗೆ ಬೀಗ ಹಾಕಿಕೊಂಡು ಗ್ರಾಮಸ್ಥರು ನಾಪತ್ತೆ!

ಮನೆಗಳ ಮೇಲೆ ನೋಟಿಸ್ ಅಂಟಿಸುವುದು, ಗೋಡೆ ಬರಹಗಳ ಮೂಲಕ ಸಾಲದ ಶೂಲ ಹಾಕುತ್ತಿರುವ ಫೈನಾನ್ಸ್‌ಗಳು: ಗ್ರಾಮಸ್ಥರ ಆರೋಪ



ಸಾಲಗಾರರ ಮನೆ ಬಾಗಿಲಿಗೆ 'ಈ ಮನೆಯನ್ನು ಜಪ್ತಿ ಮಾಡಲಾಗಿದೆ' ಎಂದು ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳು ಎಚ್ಚರಿಕೆ ನೋಟೀಸ್ ನಮೂದಿಸಿರುವುದು.

> ರೈತರ ಸಾಮರ್ಥ್ಯಾನುಸಾರ ಸಾಲ ನೀಡಬೇಕು. ಆದರೆ ಫೈನಾನ್ಸ್‌ನವರು ಬೇಕು ಬೇಕಾದಂತೆ ಸಾಲ ನೀಡಿ, ರೈತ ಕುಟುಂಬಗಳ ಸಾಲದ ಶೂಲಕ್ಕೇರಿಸಿವೆ.
> –ಗ್ರಾಮಸ್ಥರ ಆರೋಪ

ನಂಜನಗೂಡು, ಜ.15–ಪಡೆದ ಸಾಲ ಮರುಪಾವತಿಸುವಂತೆ ಮೈಕ್ರೋ ಫೈನಾನ್ಸ್ ಕಂಪನಿಗಳ ಪ್ರತಿನಿಧಿಗಳು ನೀಡುತ್ತಿರುವ ಕಿರುಕುಳದಿಂದಾಗಿ ಹಲವು ಕುಟುಂಬಗಳು ಗ್ರಾಮ ತೊರೆಯುತ್ತಿರುವ ಪ್ರಕರಣ ಚಾಮರಾಜನಗರ ಜಿಲ್ಲೆ ನಂತರ ಇದೀಗ ನಂಜನಗೂಡು ತಾಲೂಕಿನಿಂದಲೂ ವರದಿಯಾಗಿದೆ.


ಹೆಚ್ಚಾಗಿ ಬಡ ಮಹಿಳೆಯರಿಗೆ ಸಾಲ ನೀಡುವ ಮೈಕ್ರೋ ಫೈನಾನ್ಸ್ ಕಂಪನಿಗಳು ವಸೂಲಾತಿಗಾಗಿ ತಮ್ಮ ಪ್ರತಿನಿಧಿಗಳನ್ನು ಗ್ರಾಮಗಳಿಗೆ ಕಳುಹಿಸುತ್ತಿದ್ದು, ಅವರು ತೀವ್ರ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಹಗಲು–ರಾತ್ರಿ ಎನ್ನದೇ ಯಾವಾಗಲೆಂದರೆ ಆವಾಗ ಸಾಲ ವಸೂಲಾತಿಗಾಗಿ ಮನೆಗೆ ಬರುವ ಪ್ರತಿನಿಧಿಗಳು ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ ಎಂಬ ಆಪಾದನೆಗಳೂ ಕೂಡ ಕೇಳಿ ಬಂದಿವೆ. ಇವರ ಕಿರುಕುಳ ತಾಳಲಾರದೆ ಹಲವು ಗ್ರಾಮಗಳಲ್ಲಿ ಗ್ರಾಮಸ್ಥರು ಮನೆಗಳಿಗೆ ಬೀಗ ಹಾಕಿಕೊಂಡು ಗ್ರಾಮ ತೊರೆದಿದ್ದು, ಹಾಗೆ ಗ್ರಾಮ ತೊರೆದ ಸಾಲಗಾರರ ಮನೆ ಬಾಗಿಲಿನಲ್ಲಿ 'ಈ ಮನೆಯನ್ನು ಜಪ್ತಿ ಮಾಡಲಾಗಿದೆ' ಎಂದು ಮೈಕ್ರೋ ಫೈನಾನ್ಸ್ ಪ್ರತಿನಿಧಿಗಳು ಬರೆದಿರುವುದು ಕಂಡುಬಂದಿದೆ. ತಾಲೂಕಿನ ಹುಲ್ಲಹಳ್ಳಿ, ರಾಂಪುರ, ಕುರಿಹುಂಡಿ, ಶಿರಮಳ್ಳಿ, ಕಗ್ಗಲೂರು, ಹೆಗ್ಗಡಹಳ್ಳಿ, ಮುದ್ದಹಳ್ಳಿ ಸೇರಿದಂತೆ ಹಲವು ಗ್ರಾಮಗಳ ಬಡ ಕುಟುಂಬದವರು ಮೈಕ್ರೋ ಫೈನಾನ್ಸ್ ಕಂಪನಿಗಳ ಸಾಲದ ಸುಳಿಗೆ ಸಿಲುಕಿ ನಲುಗಿದ್ದಾರೆ. ಹಾಗೂ ಕಿರುಕುಳದಿಂದ ತಪ್ಪಿಸಿಕೊಳ್ಳಲು ಮನೆ ಖಾಲಿ ಮಾಡಿಕೊಂಡು ಕುಟುಂಬ ಸಮೇತರಾಗಿ ಬೇರೆ ಊರುಗಳಿಗೆ ವಲಸೆ ಹೋಗಿದ್ದಾರೆ. ಅವರು ಎಲ್ಲಿದ್ದಾರೆ ಎಂಬ ಮಾಹಿತಿಯೂ ಕೂಡ ಗ್ರಾಮಸ್ಥರಿಗೆ ತಿಳಿಸುತ್ತಿಲ್ಲ. ವಿಚಿತ್ರವೆಂದರೆ ಗ್ರಾಮ ತೊರೆದಿರುವ ಸಾಲಗಾರರು ಎಲ್ಲಿದ್ದಾರೆ ಎಂಬುದರ ಬಗ್ಗೆಯೂ ಕೂಡ ಮೈಕ್ರೋ ಫೈನಾನ್ಸ್ ಕಂಪನಿ ಪ್ರತಿನಿಧಿಗಳು ಗ್ರಾಮಸ್ಥರಲ್ಲಿ ವಿಚಾರಿಸುತ್ತಿದ್ದಾರಂತೆ.

ರಾಂಪುರ ಗ್ರಾಮದ ಭೈರರಾಜು–ಪುಟ್ಟಮ್ಮ ದಂಪತಿ, ದುಂಡಮ್ಮ, ನಿಂಗಮಣಿ, ದೇವಣ್ಣ, ಶಿರಮಳ್ಳಿ ಗ್ರಾಮದ ಸಿದ್ದಶೆಟ್ಟಿ–ಪುಟ್ಟೀರಮ್ಮ ದಂಪತಿ, ಶಾಂತಮ್ಮ, ಶಶಿ, ಸಿದ್ದಶೆಟ್ಟಿ–ಗೌರಮ್ಮ ದಂಪತಿ, ಭಾಗ್ಯ, ಪ್ರಭು, ಹುಲ್ಲಹಳ್ಳಿ ಗ್ರಾಮದ ಚಾಪೆ ಮಹೇಶ ಹಾಗೂ ಕಗ್ಗಲೂರು ಗ್ರಾಮದ 7 ಕುಟುಂಬಗಳು ಗ್ರಾಮವನ್ನು ತೊರೆದು, ವಲಸೆ ಹೋಗಿವೆ ಎಂದು ಹೇಳಲಾಗಿದೆ.

ಗ್ರಾಮ ಶಕ್ತಿ, ಬಿಎಸ್‌ಎಸ್ ಮೈಕ್ರೋ ಫೈನಾನ್ಸ್, ಗ್ರಾಮೀಣ ಕೂಟ, ಜೀವನ ಬಂಧನ್ ಸೇರಿದಂತೆ ಹಲವಾರು ಮೈಕ್ರೋ ಫೈನಾನ್ಸ್ ■2ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 16 ಜನವರಿ 2025

ಜ್ಞಾನ ದೇಗುಲವೇ ಶಿಥಿಲ!; ಓದುಗರು ಸದಾ ಭಯದಲ್ಲಿರಬೇಕಾದ ದುಸ್ಥಿತಿ




ಶಿಥಿಲಗೊಂಡಿರುವ ಗ್ರಂಥಾಲಯ ಕಟ್ಟಡದ ಗೋಡೆ ಮತ್ತು ಹಾಳಾಗಿರುವ ಶೌಚಾಲಯವನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜ.15(ಎಂಕೆ)– ಮೈಸೂರಿನ ಸರಸ್ವತಿಪುರಂನ ಶ್ರೀರಾಮ ಉದ್ಯಾನವನದಲ್ಲಿರುವ ಗ್ರಂಥಾಲಯ ಕಟ್ಟಡ ಶಿಥಿಲಗೊಂಡಿದ್ದು, ಓದುಗರು ಭಯದಲ್ಲಿಯೇ ಅಕ್ಷರ ಜ್ಞಾನ ಪಡೆಯಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ನಗರದ ಕೇಂದ್ರಭಾಗದಲ್ಲಿರುವ ಸರಸ್ವತಿಪುರಂನ ವಿಶಾಲ ಶ್ರೀರಾಮ ಉದ್ಯಾನವನದಲ್ಲಿ ವಾಯುವಿಹಾರಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರ ನೆಚ್ಚಿನ ಅಧ್ಯಯನ ತಾಣವಾಗಿರುವ ಗ್ರಂಥಾಲಯದ ಕಟ್ಟಡ ಶಿಥಿಲಗೊಂಡಿದ್ದು, ದಿನಪತ್ರಿಕೆಗಳು, ಪುಸ್ತಕಗಳನ್ನು ಭಯದಲ್ಲೇ ಓದಬೇಕಾದ ಅನಿವಾರ್ಯತೆ ಉಂಟಾಗಿದೆ.

ಅಲ್ಲದೆ, ಗ್ರಂಥಾಲಯದಲ್ಲಿರುವ ಏಕೈಕ ಶೌಚಾಲಯವೂ ಹಾಳಾಗಿದ್ದು, ನಿರ್ವಹಣೆ ಇಲ್ಲದೆ ದುರ್ವಾಸನೆಗೆ ಉಸಿರಿಡಿದು ಕೊಂಡು ಓದಬೇಕಾದ ಶೋಚನೀಯ ಸ್ಥಿತಿಯನ್ನು ಅನುಭವಿಸುವಂತಾಗಿದೆ. ಪ್ರತಿನಿತ್ಯ ಸಾವಿರಾರು ಮಂದಿ ಭೇಟಿ ನೀಡುತ್ತಿದ್ದ ಗ್ರಂಥಾಲಯ, ನಿರ್ವಹಣೆ ಇಲ್ಲದೆ ದಿನೇದಿನೆ ಪಾಳು ಬಿದ್ದಂತಾಗುತ್ತಿದೆ ಎಂದು ಸ್ಥಳೀಯ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗಂತೂ ಉದ್ಯಾನವನದಲ್ಲಿ ಪುಂಡರ ಹಾವಳಿಯೂ ಹೆಚ್ಚಾಗುತ್ತಿದ್ದು, ವಾಯುವಿಹಾರಕ್ಕೂ ತೊಂದರೆಯಾಗುತ್ತಿದೆ. ಅಲ್ಲಲ್ಲಿ ಮದ್ಯದ ಬಾಟಲ್‌ಗಳು ಬಿದ್ದಿರಲಿವೆ. ಗ್ರಂಥಾಲಯದ ಕಟ್ಟಡ ಶಿಥಿಲಗೊಂಡು ಗೋಡೆಗಳಿಗೆ ಹಾನಿಯಾಗಿದೆ. ಬಡ ವಿದ್ಯಾರ್ಥಿಗಳ ನೆಚ್ಚಿನ ಅಧ್ಯಯನ ತಾಣವಾಗಿದ್ದ ಸ್ಥಳವಿಂದು ಪುಂಡರ ಆವಾಸಸ್ಥಾನವಾಗಿದೆ. ಗ್ರಂಥಾಲಯ ದುರಸ್ತಿಗಾಗಿ ಈಗಾಗಲೇ ಸಂಬಂಧಪಟ್ಟ ನಗರಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾಧ್ಯಕ್ಷ ಎಲ್.ರಂಗಯ್ಯ, ಯುವ ಘಟಕದ ಅಧ್ಯಕ್ಷ ಅನಂತರಾಜ್ ಸೂರ್ಯ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಡ ವಿದ್ಯಾರ್ಥಿಗಳ ಓದಿಗೆ ಅನುಕೂಲ ಮಾಡಿಕೊಡಬೇಕಾದ ಪಾಲಿಕೆ ಅಧಿಕಾರಿಗಳ ಅಸಡ್ಡೆಯಿಂದಾಗಿ ಜ್ಞಾನ ದೇಗುಲಗಳು ಹಾಳಾಗುತ್ತಿವೆ. ವಾಯುವಿಹಾರಿಗಳು ಪ್ರಚಲಿತ ವಿದ್ಯಮಾನ ತಿಳಿಯಲು ಇರುವ ಹಾಗೂ ನೂರಾರು ವಿದ್ಯಾರ್ಥಿಗಳು ಅಧ್ಯಯನಕ್ಕೆ ಅನುಕೂಲವಾಗಿರುವ ಗ್ರಂಥಾಲಯವನ್ನು ಕೂಡಲೇ ದುರಸ್ತಿಗೊಳಿಸಿ ಓದುಗರಿಗೆ ಅನುಕೂಲ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಆದಿಯೋಗಿ ಸನ್ನಿಧಿಯಲ್ಲಿ 54 ಅಡಿ ಎತ್ತರದ ಮಹಾಶೂಲ ಅನಾವರಣ



54 ಅಡಿ ಎತ್ತರದ ಶಿವನ ತ್ರಿಶೂಲವಾದ ಮಹಾಶೂಲ ಅನಾವರಣ

ಮೈಸೂರು,ಜ.15–ಸುಮಾರು 2 ಲಕ್ಷ ಜನರ ಸಮ್ಮುಖದಲ್ಲಿ, ಮಕರ ಸಂಕ್ರಾಂತಿಯಂದು ಸದ್ಗುರು ಸನ್ನಿಧಿಯಲ್ಲಿ ಸದ್ಗುರುಗಳು 54 ಅಡಿ ಎತ್ತರದ ಶಿವನ ತ್ರಿಶೂಲವಾದ ಮಹಾಶೂಲವನ್ನು ಅನಾವರಣಗೊಳಿಸಿದರು. ಈ ಪ್ರದೇಶದಲ್ಲಿ ತನ್ನದೇ ಆದ ವೈಶಿಷ್ಟ್ಯತೆ ಹೊಂದಿರುವ ಭವ್ಯ ಮಹಾಶೂಲವು ಅಸ್ತಿತ್ವದ ಮೂರು ಪ್ರತ್ಯೇಕ ಅಂಶಗಳಾದ–ಸೃಷ್ಟಿ, ಸ್ಥಿತಿ ಮತ್ತು ಲಯದ ಏಕತ್ವ ಪ್ರತಿನಿಧಿಸುವ ಏಕೈಕ ಪ್ರತಿರೂಪವಾಗಿದೆ.

ಕರ್ನಾಟಕ ಲೋಕಾಯುಕ್ತರಾದ ಬಿ.ಎಸ್.ಪಾಟೀಲ್, ಮಾಜಿ ಇಸ್ರೋ ನಿರ್ದೇಶಕ ಕಿರಣ್‌ಕುಮಾರ್, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯದ ಕಾರ್ಯದರ್ಶಿ ರಂದೀಪ್.ಡಿ ಉಪಸ್ಥಿತರಿದ್ದರು. ಸ್ಥಳೀಯ ಪಂಚಾಯತಿಗಳ ಹಲವಾರು ಸದಸ್ಯರು, ಆಡಳಿತ ಮಂಡಳಿಗಳ ಪ್ರತಿನಿಧಿಗಳು ಮತ್ತು ಸಮುದಾಯಗಳು ಸಂಕ್ರಾಂತಿ ಹಬ್ಬವನ್ನು ಆಚರಿಸಲು ಸಾರ್ವಜನಿಕರೊಂದಿಗೆ ಸೇರಿಕೊಂಡರು. ಭಕ್ತರಿಗೆ ಆದಿಯೋಗಿ ದಿವ್ಯ ದರ್ಶನ ಮತ್ತು ದೇಶೀಯ ಜಾನುವಾರುಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಕಳೆದ ನಾಲ್ಕು ದಿನಗಳಿಂದ ಸದ್ಗುರು ಸನ್ನಿಧಿಯಲ್ಲಿ ನಡೆಯುತ್ತಿದ್ದ ಜಾತ್ರೆ ನಿನ್ನೆಯಂದು ದೊಡ್ಡ ಸಂಖ್ಯೆಯ ಜನರನ್ನು ಆಕರ್ಷಿಸಿತು. ಸ್ಥಳೀಯ ರೈತರು, ಕುಶಲಕರ್ಮಿಗಳು ಮತ್ತು ಕಲಾವಿದರು ಜಾತ್ರೆಯಲ್ಲಿ ಭಾಗವಹಿಸಿದ್ದು, ಅದರಲ್ಲಿ ಆಹಾರ, ಸ್ಥಳೀಯ ನೇಯ್ಗೆಗಳು, ತಾಜಾ ಕೃಷಿ ಉತ್ಪನ್ನಗಳು ಮತ್ತು ಕರಕುಶಲ ವಸ್ತುಗಳ ಮಳಿಗೆಗಳು ಒಳಗೊಂಡಿದ್ದವು. ಡೊಳ್ಳುಕುಣಿತದಂತಹ ಸಾಂಪ್ರದಾಯಿಕ ಜಾನಪದ ನೃತ್ಯ ಪ್ರದರ್ಶನಗಳು ಜಾತ್ರೆಯ ಹೆಚ್ಚುವರಿ ಆಕರ್ಷಣೆಯಾಗಿದ್ದವು. ಸದ್ಗುರು ಅವರ ಸಾನ್ನಿಧ್ಯದಲ್ಲಿ ಈಶ ಬ್ರಹ್ಮಚಾರಿಗಳು ಮೊದಲ ಬಾರಿಗೆ ಪಂಚಭೂತಗಳನ್ನು ಶುದ್ಧೀಕರಿಸುವ ಪ್ರಕ್ರಿಯೆಯಾದ ಪಂಚಭೂತ ಕ್ರಿಯೆಯನ್ನು ಸದ್ಗುರು ಸನ್ನಿಧಿಯಲ್ಲಿ ನೆರವೇರಿಸಿದರು.

ಉಪ್ಪಾರ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ


ಮೈಸೂರು, ಜ.15(ಜಿಎ)–ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಂಘದ ವತಿಯಿಂದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಜಿಲ್ಲೆಯ ಎಲ್ಲಾ ತಾಲೂಕುಗಳ ಸಮುದಾಯದ ಗ್ರಾಪಂ ಸದಸ್ಯರನ್ನು ಸನ್ಮಾನಿಸುವ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಎಸ್.ಯೋಗೇಶ್ ಉಪ್ಪಾರ್ ಈ ವಿಷಯ ತಿಳಿಸಿ, ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಡನೆ ಅರ್ಜಿ ಸಲ್ಲಿಸಬೇಕು. ಜ.19ರಂದು ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಈ ಕಾರ್ಯಕ್ರಮದ ಪೂರ್ವಭಾವಿ ಸಭೆ ನಡೆಯಲಿದ್ದು, ಸಮುದಾಯದ ಮುಖಂಡರು ಹಾಜರಾಗಬೇಕೆಂದು ಕೋರಿದರು.

ಪ್ರತಿಭಾ ಪುರಸ್ಕಾರ ಅರ್ಹರು ಹೆಚ್ಚಿನ ಮಾಹಿತಿಗೆ ದೂ. 87927 80020 ಸಂಪರ್ಕಿಸಲು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಿವರಾಜು, ಎಂ.ಎನ್.ರಾಜೇಶ್, ಲಿಂಗರಾಜು, ಮಂಜುನಾಥ್, ಸಿದ್ದಪ್ಪಸ್ವಾಮಿ, ಕಾಟ್ನಾಳು ಮಹದೇವ, ಮಲ್ಲೇಶ್ ಉಪಸ್ಥಿತರಿದ್ದರು.

ಪ್ರಯಾಗ್ ರಾಜ್‌ನ ತ್ರಿವೇಣಿ ಸಂಗಮದ ಮಹಾಕುಂಭ ಮೇಳ

ಮಕರ ಸಂಕ್ರಾಂತಿಯಂದು 3.5 ಕೋಟಿ ಜನ ಪುಣ್ಯಸ್ನಾನ



ಪ್ರಯಾಗ್‌ರಾಜ್ (ಉತ್ತರ ಪ್ರದೇಶ), ಜ.15– ಮೈ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಕೋಟ್ಯಾಂತರ ಸಂಖ್ಯೆಯ ಜನರು ಬುಧವಾರವೂ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದರು. ಈ ವೇಳೆ ಭಕ್ತರಿಂದ 'ಹರಹರ ಮಹಾದೇವ್', 'ಜೈ ಶ್ರೀರಾಮ್', 'ಜೈ ಗಂಗಾ ಮೈಯ್ಯ' ಘೋಷಣೆಗಳು ಮೊಳಗಿದವು.

ಮಕರ ಸಂಕ್ರಾಂತಿಯ ದಿನವಾದ ಮಂಗಳವಾರ ಮಹಾಕುಂಭದಲ್ಲಿ ಭಾಗಿಯಾಗಿದ್ದ 3.5 ಕೋಟಿಗೂ ಹೆಚ್ಚು ಜನರು ಗಂಗಾ, ಯಮುನಾ ಮತ್ತು ಪೌರಾಣಿಕ ಸರಸ್ವತಿ ನದಿಗಳ ಸಂಗಮದಲ್ಲಿ ಪುಣ್ಯ ಸ್ನಾನ ಮಾಡಿದ್ದರು. ದೇಶದ ವಿವಿಧ ರಾಜ್ಯಗಳು ಮತ್ತು ವಿದೇಶಗಳಿಂದ ಬಂದಿದ್ದ ಹೆಚ್ಚಿನ ಸಂಖ್ಯೆಯ ಭಕ್ತರು ಬುಧವಾರ ತೀವ್ರ ಚಳಿಯಲ್ಲೂ ಸಂಗಮದಲ್ಲಿ ಮಿಂದೆದ್ದರು.

10 ದೇಶಗಳ 21 ಜನರಿಂದ ಗುರುವಾರ ಪವಿತ್ರ ಸ್ನಾನ: ಫಿಜಿ, ಫಿನ್ಲೆಂಡ್, ಗಯಾನಾ, ಮಲೇಷ್ಯಾ, ಮಾರಿಷಸ್, ಸಿಂಗಪುರ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಟ್ರಿನಿಡಾಡ್, ಟೊಬಾಗೊ ಮತ್ತು ಯುಎಇ ದೇಶಗಳ 21 ಪ್ರತಿನಿಧಿಗಳು ಬುಧವಾರ ಪ್ರಯಾಗ್‌ರಾಜ್‌ಗೆ ಭೇಟಿ ನೀಡಿದ್ದಾರೆ. ಅವರೆಲ್ಲ ಗುರುವಾರ ಬೆಳಿಗ್ಗೆ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ನಿಯೋಗಕ್ಕೆ ಆಹ್ವಾನ ನೀಡಿದೆ.

'ಬ್ಯೂಟಿಫುಲ್ ಸಾಧ್ವಿ' ವಿವಾದ: ಪ್ರಯಾಗ್‌ರಾಜ್‌ನ ಮಹಾಕುಂಭ ಮೇಳದಲ್ಲಿ ರಥಗಳೊಂದಿಗೆ ಸಂತರು, ನಾಗಾ ಸಾಧುಗಳ ಮೆರವಣಿಗೆ ವೇಳೆ ರಥದ ಮೇಲೆ 30 ವರ್ಷದ ಯುವತಿಯೊಬ್ಬರು ಕಾಣಿಸಿಕೊಂಡಿದ್ದರು. ಅದು ವಿವಾದವಾಗಿ, 'ಬ್ಯೂಟಿಫುಲ್ ಸಾಧ್ವಿ' ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಪ್ರಸಾರವಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಲಕ್ಷಾಂತರ ಅನುಯಾಯಿಗಳನ್ನು ಹೊಂದಿರುವ ಉತ್ತರಾಖಂಡ ಮೂಲದ ನಿರೂಪಕಿ, ಸಾಮಾಜಿಕ ಕಾರ್ಯಕರ್ತೆ ಹರ್ಷ ರಿಚಾರಿಯಾ ಅವರು ಸಾಧುಗಳ ಜತೆ ಕಂಡು ಬಂದಿದ್ದರು. ಹಳದಿ ಉಡುಗೆ ಮತ್ತು ರುದ್ರಾಕ್ಷಿ ಜಪಮಾಲೆ ಧರಿಸಿದ್ದ ರಿಚಾರಿಯಾ ಅವರು ಆರಂಭದಲ್ಲಿ ಯುವ ಸಾಧ್ವಿಯಾಗಿ ಗಮನ ಸೆಳೆದಿದ್ದರು. ಅವರ ಚಿತ್ರಗಳು, ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದ್ದು 'ಬ್ಯೂಟಿಫುಲ್ ಸಾಧ್ವಿ' ಎಂದೇ ಉಲ್ಲೇಖಿಸಲಾಗಿತ್ತು. ಈ ಸಂಬಂಧ ಪ್ರತಿಕ್ರಿಯಿಸಿರುವ ರಿಚಾರಿಯಾ, ನಾನು ಸಾಧ್ವಿ ಅಲ್ಲ, ಹಾಗೆಂದು ಎಲ್ಲೂ ಹೇಳಿಕೊಂಡೂ ಇಲ್ಲ. ಮಂತ್ರ ದೀಕ್ಷೆಯನ್ನು ಮಾತ್ರ ತೆಗೆದುಕೊಂಡಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ಲಾರೆನ್ ಪೊವೆಲ್ ಜಾಬ್ಸ್‌ಗೆ ಅಲರ್ಜಿ: ಆಪಲ್‌ನ ಸಹ ಸಂಸ್ಥಾಪಕ ಸ್ಟೀವ್ ಜಾಬ್ಸ್ ಪತ್ನಿ ಲಾರೆನ್ ಪೊವೆಲ್ ಜಾಬ್ಸ್ ಮಹಾಕುಂಭ ಮೇಳದಲ್ಲಿ ಭಾಗಿಯಾಗಲು ಭಾರತಕ್ಕೆ ಆಗಮಿಸಿದ್ದಾರೆ. ಪ್ರಯಾಗ್‌ರಾಜ್‌ನಲ್ಲಿ ತಂಗಿರುವ ಸ್ಟೀವ್ ಜಾಬ್ಸ್ ಪತ್ನಿಗೆ 2 ನೇ ದಿನದಂದು ಅಲರ್ಜಿ ಉಂಟಾಗಿದೆ. ಈ ಅನಾರೋಗ್ಯದ ನಡುವೆಯೂ ಲಾರೆನ್ ಪೊವೆಲ್ ಜಾಬ್ಸ್ ಕುಂಭಮೇಳದಲ್ಲಿ ಗಂಗಾ ನದಿ ಸಂಗಮದಲ್ಲಿ ಪವಿತ್ರ ಸ್ನಾನ (ಅಮೃತ ಸ್ನಾನ) ಕ್ಕೆ ಹಾಜರಾಗಲಿದ್ದಾರೆ.

ಈ ಕುರಿತು ಮಾತನಾಡಿರುವ ಸಂತ ಸ್ವಾಮಿ ಕೈಲಾಸಾನಂದ ಗಿರಿ, ಅವರು ಸಂಗಮದಲ್ಲಿ ಸ್ನಾನ ಮಾಡುವ ಆಚರಣೆಯಲ್ಲಿ ಭಾಗವಹಿಸುತ್ತಾರೆ. ಅವರು ನನ್ನ 'ಶಿವಿರ್'ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಅವರಿಗೆ ಸ್ವಲ್ಪ ಅಲರ್ಜಿ ಇದೆ. ಅವರು ಎಂದಿಗೂ ಜನದಟ್ಟಣೆಯ ಸ್ಥಳಕ್ಕೆ ಹೋಗಿಲ್ಲ. ಅವರು ತುಂಬಾ ಸರಳರು. ಪೂಜೆಯ ಸಮಯದಲ್ಲಿ ಅವರು ನಮ್ಮೊಂದಿಗೆ ಇದ್ದರು. ಎಂದಿಗೂ ನೋಡದ ಮರೂ ಸಹ ನಮ್ಮ ಆಚರಣೆಗಳಲ್ಲಿ ಸೇರಲು ಬಯಸುತ್ತಾರೆ, ಇದು ನಮ್ಮ ಸನಾತನ ಧರ್ಮದ ಹಿರಿಮೆ ಎಂದು ಹೇಳಿದ್ದಾರೆ.

ಮಹಾ ಕುಂಭಮೇಳದಲ್ಲಿ 'ಐಐಟಿ ಬಾಬಾ': ಮಹಾ ಕುಂಭಮೇಳದಲ್ಲಿ ಭಾಗವಹಿಸಿರುವ ಹರಿಯಾಣ ಮೂಲದ ಅಭಯ್ ಸಿಂಗ್ ಅವರು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಬಾಂಬೆಯಲ್ಲಿ ನಾಲ್ಕು ವರ್ಷಗಳ ಕಾಲ ಏರೋಸ್ಪೇಸ್ ಇಂಜಿನಿಯರಿಂಗ್ ಅಧ್ಯಯನ ಮಾಡಿದ್ದಾರೆ. ಕ್ಯಾಂಪಸ್ ಪ್ಲೇಸ್‌ಮೆಂಟ್ ಮೂಲಕ ಉದ್ಯೋಗವನ್ನೂ ಪಡೆದುಕೊಂಡರು. ಬದುಕಿನಲ್ಲಿ ಒಂದಷ್ಟು ಏರಿಳಿತ ಸಂಭವಿಸುತ್ತಿದ್ದಂತೆ ಮೂಲಭೂತ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸಿದ್ದಾರೆ. ಈ ವೇಳೆ ಧ್ಯಾನ, ಆಧ್ಯಾತ್ಮದ ಕಡೆಗೆ ಮನಸು ಹೊರಳಿದೆ. ಬಳಿಕ ಪ್ರಾಪಂಚಿಕ ಜೀವನವನ್ನು ತ್ಯಜಿಸಿ ಸನ್ಯಾಸತ್ವ ಸ್ವೀಕರಿಸಿದರು. ಜೀವನವನ್ನು ಸಂಪೂರ್ಣವಾಗಿ ಶಿವನಿಗೆ ಅರ್ಪಿಸಿದ್ದೇನೆ. ನಾನೀಗ ಆಧ್ಯಾತ್ಮಿಕ ಜೀವನವನ್ನು ಆನಂದಿಸುತ್ತಿದ್ದೇನೆ. ವಿಜ್ಞಾನದ ಮೂಲಕ ಆಧ್ಯಾತ್ಮಿಕತೆಯನ್ನು ಅರ್ಥಮಾಡಿಕೊಳ್ಳುತ್ತಾ, ವಿಷಯದ ಆಳಕ್ಕೆ ಹೋಗುತ್ತಿದ್ದೇನೆ. ಎಲ್ಲವೂ ಶಿವನೇ... ಸತ್ಯವೇ ಶಿವ... ಎಂದು' ಐಐಟಿ ಬಾಬಾ ಹೇಳಿಕೊಂಡಿದ್ದಾರೆ. ಮಹಾ ಕುಂಭಮೇಳದಲ್ಲಿ 'ಐಐಟಿ ಬಾಬಾ' ಪತ್ರಕರ್ತರೊಂದಿಗೆ ನಿರರ್ಗಳವಾಗಿ ಇಂಗ್ಲೀಷ್‌ನಲ್ಲಿ ಮಾತನಾಡುತ್ತಿರುವ ವಿಡಿಯೋಗಳು ಸದ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಮೈಕ್ರೋಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್: ಮೈಕ್ರೋಸಾಫ್ಟ್ ಸಹ ಸಂಸ್ಥಾಪಕ ಬಿಲ್ ಗೇಟ್ಸ್ ಪ್ರಯಾಗರಾಜ್ ಕುಂಭ ಮೇಳದಲ್ಲಿ ಪಾಲ್ಗೊಂಡಿದ್ದಾರೆ ಎಂಬ ವಿಡಿಯೋಗಳು ಹರಿದಾಡುತ್ತಿದೆ. ಆದರೆ ಬಿಲ್ ಗೇಟ್ಸ್ ಪ್ರಯಾಗರಾಜ್ ಕುಂಭ ಮೇಳದಲ್ಲಿ ಪಾಲ್ಗೊಂಡಿಲ್ಲ. ಈ ವಿಡಿಯೋ ಡಿಸೆಂಬರ್ ತಿಂಗಳಲ್ಲೂ ಹರಿದಾಡಿತ್ತು. ಇದೇ ವಿಡಿಯೋವನ್ನು ಬಿಲ್ ಗೇಟ್ಸ್ ಕಾಶಿ ವಿಶ್ವನಾಥನ ಮಂದಿರದಲ್ಲಿ ಎಂದು ಬರೆದು ಪೋಸ್ಟ್ ಮಾಡಲಾಗಿದೆ. ಸದ್ಯ ಬಿಲ್ ಗೇಟ್ಸ್ ಪ್ರಯಾಗರಾಜ್‌ಗೆ ಭೇಟಿ ನೀಡಿಲ್ಲ. ಕುಂಭ ಮೇಳದಲ್ಲಿ ಪಾಲ್ಗೊಂಡಿಲ್ಲ. ಆದರೆ ವಿಡಿಯೋವನ್ನು ಹಲವು ರೂಪದಲ್ಲಿ ಹರಿಬಿಡಲಾಗಿದೆ.

ಮೈಸೂರು ಪಿಂಜರಾಪೋಲ್‌ನಲ್ಲಿ ಗೋಪಾಲಕ್ ಸದನ ಉದ್ಘಾಟನೆ

ಗೋಪಾಲಕರಿಗಾಗಿ 22 ಮನೆಗಳ ನಿರ್ಮಾಣ



ಸಮಾಜ ಸೇವಕ ಮಹೇಂದ್ರ ಸಿಂಗ್ ಕಾಳಪ್ಪ ಅವರು ತಮ್ಮ ಸಹಾಯದಿಂದ ನಿರ್ಮಿತವಾದ ಮನೆಯನ್ನು ಪಿಂಜರಾಪೋಲ್ ಸೊಸೈಟಿಗೆ ಹಸ್ತಾಂತರಿಸಿದರು.

ಮೈಸೂರು, ಜ.15(ಜಿಎ)–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಮೈಸೂರು ಪಿಂಜರಾಪೋಲ್ ಸೊಸೈಟಿ ಆವರಣದಲ್ಲಿ ಗೋಪಾಲಕರಿಗಾಗಿ ವಿವಿಧ ದಾನಿಗಳಿಂದ ನಿರ್ಮಿಸಿರುವ ಮನೆ ಗೋಪಾಲಕ್ ಸದನವನ್ನು ಬುಧವಾರ ಉದ್ಘಾಟಿಸಲಾಯಿತು.

ಈ ವೇಳೆ ಸಮಾಜ ಸೇವಕ ಮಹೇಂದ್ರ ಸಿಂಗ್ ಕಾಳಪ್ಪ ಬನ್ನೂರು ಅವರು ತಮ್ಮ ಸಹಾಯದಿಂದ ನಿರ್ಮಿತವಾದ ಮನೆಯನ್ನು ಪಿಂಜರಾಪೋಲ್ ಸೊಸೈಟಿಗೆ ಹಸ್ತಾಂತರಿಸಿದರು. ನಂತರ ಮಾತನಾಡಿದ ಅವರು, ನಿರಂತರವಾಗಿ ನಾನು ಗೋಸೇವೆಯಲ್ಲಿ ತೊಡಗಿದ್ದು, ವಿವಿಧ ರೀತಿಯಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸುತ್ತಿದ್ದೇನೆ. ಪಿಂಜರಾಪೋಲ್ ಸೊಸೈಟಿ ವತಿಯಿಂದ 4 ಸಾವಿರಕ್ಕೂ ಹೆಚ್ಚು ಹಸುಗಳನ್ನು ಪೋಷಿಸಿ ಸೇವೆ ಸಲ್ಲಿಸುತ್ತಿರುವವರಿಗೆ ಗೋ ಪಾಲಕರಿಗೆ ಮನೆ ನಿರ್ಮಿಸಲು ಚಿಂತಿಸಿದರು. ಅದರಂತೆ ನಾನು ತಂದೆ–ತಾಯಿಯ ಹೆಸರಿನಲ್ಲಿ ಈ ಮನೆಯನ್ನು ನಿರ್ಮಿಸಲು ದೇಣಿಗೆ ನೀಡಿದ್ದು, ಸುಸಜ್ಜಿತವಾಗಿ 22 ಮನೆಗಳನ್ನು ನಿರ್ಮಿಸಿದ್ದಾರೆ ಎಂದು ತಿಳಿಸಿ, ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಧನ ಸಹಾಯ ನೀಡಿದರು. ಈ ಸಂದರ್ಭದಲ್ಲಿ ಸುಮಿತಿ ಜೈನ್, ಅಶೋಕ್ ಜೈನ್, ವಿನೋದ್ ಜೈನ್, ಗೌರಿ ದೇವಿ, ರಾಜೇಶ್‌ಕುಮಾರ್, ದಿನೇಶ್ ರಾಜ್‌ಪುರೋಹಿತ್, ಸಂತೋಷ್ ಕುಮಾರಿ, ನಾರಾಯಣಪ್ಪ ಶಿವಣ್ಣ ಸಂತೋಷ್, ವಿಮಲಾ ಬಾಫ್ನಾ, ಸೂಯಿದಿನಾಥ್ ಜೈನ್, ಮಣಿ ಪ್ರಭಾಜೀ ಉಪಸ್ಥಿತರಿದ್ದರು.


ಒಂದನೇ ಪುಟದಿಂದ

ಮನೆಗೆ ಬೀಗ ಹಾಕಿಕೊಂಡು ಗ್ರಾಮಸ್ಥರು ನಾಪತ್ತೆ!

ಕಂಪನಿಗಳಿಂದ ಸಾಲ ಪಡೆದಿರುವವರು ಅದನ್ನು ತೀರಿಸಲು ಸಾಧ್ಯವಾಗದೇ, ಅಸಲಿಗಿಂತ ಬಡ್ಡಿ ಹೆಚ್ಚಳವಾಗಿ ಊರು ತೊರೆಯುವಂತಾಗಿದೆ.

ಖಾಸಗಿ ಮೈಕ್ರೋ ಫೈನಾನ್ಸ್ ಕಂಪನಿಗಳ ಪ್ರತಿನಿಧಿಗಳು ಕಡಿಮೆ ಬಡ್ಡಿ ಆಮಿಷವೊಡ್ಡಿ ಗ್ರಾಮಸ್ಥರಿಗೆ ಸಾಲ ಕೊಡುತ್ತಿದ್ದಾರೆ. ಹಲವಾರು ಕುಟುಂಬದವರಿಗೆ 5 ರಿಂದ 6 ಮೈಕ್ರೋ ಫೈನಾನ್ಸ್ ಕಂಪನಿಗಳು ಸಾಲ ನೀಡಿವೆ ಎಂದು ಹೇಳಲಾಗುತ್ತಿವೆ. ಬಡ ವರ್ಗದ ಜನರು ಈಗಾಗಲೇ ಒಂದು ಕಂಪನಿಯಿಂದ ಸಾಲ ಪಡೆದಿದ್ದಾರೆ ಎಂಬುದು ಗೊತ್ತಿದ್ದರೂ ಕೂಡ ತಮ್ಮ ವ್ಯವಹಾರ ಲಾಭಕ್ಕಾಗಿ ಮತ್ತೆ ಅದೇ ಕುಟುಂಬಗಳಿಗೆ ಸಾಲ ನೀಡುವ ಮೂಲಕ ಗ್ರಾಮಸ್ಥರನ್ನು ಮೈಕ್ರೋ ಫೈನಾನ್ಸ್ ಕಂಪನಿಗಳು ಸಾಲದ ಶೂಲಕ್ಕೆ ಏರಿಸಿದೆ ಎಂಬ ಆರೋಪಗಳು ಕೇಳಿ ಬಂದಿವೆ. ಮೈಕ್ರೋ ಫೈನಾನ್ಸ್ ಕಂಪನಿಗಳ ಹಾವಳಿಗೆ ಕಡಿವಾಣ ಹಾಕಬೇಕು. ಸಾಲ ಮರುಪಾವತಿಗೆ ಮತ್ತಷ್ಟು ಕಾಲಾವಕಾಶ ನೀಡಿ, ಗ್ರಾಮ ತೊರೆದಿರುವವರು ಹಿಂತಿರುಗಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಮುಖಂಡರು ಒತ್ತಾಯಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.01.2025 ಗುರುವಾರ, ಮಳೆ ನಕ್ಷತ್ರ: ಪೂಷಾ, 29.12.2024ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮೂತ್ರಪಿಂಡ (ಕಿಡ್ನಿ) ಕಾಯಿಲೆ, ಸಂಧಿವಾತ, ಮಂಡಿನೋವು, ಕೀಲು ನೋವು ಮತ್ತು ಆರೋಗ್ಯಾಯುಷ್ಯ ಆರೋಗ್ಯವರ್ಧಕ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ :** ಸಿಲ್ಕ್ ಫ್ಯಾಬ್ ಮೇಳ– ರೇಷ್ಮೆ ಸೀರೆ, ಕೈಮಗ್ಗ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ರಿಂಗ್ ರಸ್ತೆ, ಬೆಳಗ್ಗೆ 11ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ:** ಅಭಿವಿನ್ಯಾಸ ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮೈಸೂರು ವಿವಿ ಇಎಂಆರ್‌ಸಿ ನಿರ್ದೇಶಕರಾದ ಪ್ರೊ.ಸಪ್ನ, ಅಧ್ಯಕ್ಷತೆ: ಐಕ್ಯೂಎಸಿ ನಿರ್ದೇಶಕ ಪ್ರೊ.ಅಮೃತೇಶ್, ಉಪಸ್ಥಿತರು: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಶಶಿಕಲಾ, ಸ್ಥಳ: ವಿಭಾಗದ ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

■ **ಮೈಸೂರು ವಿವಿ ಎನ್‌ಎಸ್‌ಎಸ್ ಯೋಜನೆ:** ನ್ಯಾಷನಲ್ ಎನ್‌ಎಸ್‌ಎಸ್ ಶಿಬಿರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಉದ್ಘಾಟನೆ: ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ, ಮುಖ್ಯ ಅತಿಥಿಗಳು: ಪ್ರಾದೇಶಿಕ ನಿರ್ದೇಶಕ ಡಿ. ಕಾರ್ತಿಕೇಯನ್, ಸ್ಥಳ: ಎನ್‌ಎಸ್‌ಎಸ್ ಭವನ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಗೋಪಾಲಸ್ವಾಮಿ ಶಿಶುವಿಹಾರ ಸಂಸ್ಥೆಗಳು:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು: ಟೆರಕೋಟ ಆಭರಣ ಕಲಾವಿದ ನೀಲಿ ಲೋಹಿತ್, ಅಧ್ಯಕ್ಷತೆ: ಶಿಶುವಿಹಾರ ಅಧ್ಯಕ್ಷ ಡಾ.ಎ.ಎಸ್. ಚಂದ್ರಶೇಖರ್, ಸ್ಥಳ: ಡಾ.ಎಂ.ವಿ.ಗೋಪಾಲಸ್ವಾಮಿ ರಂಗಮಂದಿರ, ಶಾಲೆ ಆವರಣ, ಸಂಜೆ 5ಕ್ಕೆ.

■ **ರಂಗರತ್ನಾಕರ:** ರಂಗಭೂಮಿ–ಚಲನಚಿತ್ರ ನಟ ರಾಜಾನಂದ್ ನೆನಪಿನ ಕಾರ್ಯಕ್ರಮ, ರಂಗ ದೃಶ್ಯಗಳು, ರಂಗಗೀತೆಗಳು, ರಂಗನಾಟಕ ಮತ್ತು ರಂಗನಾಟಕ ಪುಸ್ತಕಗಳ ಬಿಡುಗಡೆ, ಉದ್ಘಾಟನೆ: ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿದ್ವಾನ್ ಡಿ.ರಾಮು, ಅಧ್ಯಕ್ಷತೆ: ಕನ್ನಡ ವಿಕಾಸ, ಶೈಕ್ಷಣಿಕ, ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಕಾರ್ಯದರ್ಶಿ ಪ್ರೊ.ಎಚ್.ಜಿ.ಕೃಷ್ಣಪ್ಪ, ಸ್ಥಳ: ರಮಾಗೋವಿಂದ ರಂಗ ಮಂದಿರ, ನೃಪತುಂಗ ಶಾಲಾ ಆವರಣ, ಸಂಜೆ 5ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್, ಜಿಲ್ಲಾ ಸಮಿತಿ:** ಮಕರ ಸಂಕ್ರಾಂತಿ ಆಚರಣೆ, ಮುಖ್ಯ ಅತಿಥಿಗಳು: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ರೂಪಶ್ರೀ ನಾಗರಾಜ್, ವಿಜಯ ವಿಠಲ ಪದವಿ ಪೂರ್ವ ಕಾಲೇಜು ಪ್ರಿನ್ಸಿಪಾಲ್ ಸತ್ಯಪ್ರಸಾದ್, ಡಾ.ವಿ.ರಂಗನಾಥ್, ಅಧ್ಯಕ್ಷತೆ: ಅಭಾಸಾಪ ಉಪಾಧ್ಯಕ್ಷ ಬಿ.ಕೆ. ಜಗದೀಶ್, ಸ್ಥಳ: ವಿಜಯ ವಿಠಲ ಪದವಿಪೂರ್ವ ಕಾಲೇಜು, ಸಂಜೆ 5.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ರಾಜಶೇಖರ ಜಮದಂಡಿ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ.ಶೋಭಾ, ವ್ಯಾಖ್ಯಾನ–ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಂದಮೂರಿ ಕೃಷ್ಣಮೂರ್ತಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ: ಜಿ.ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 6.10 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ: ಜಯಶ್ರೀ ಹೆಗಡೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿ ಹಾಗೂ ಸಾಮಾಜಿಕ ಮಾಧ್ಯಮ ಮತ್ತು ಕೃತಕ ಬುದ್ಧಿಮತ್ತೆ ಬಳಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ.ಎಂ.ಎಸ್.ಸಪ್ನಾ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು. ಪ್ರಸ್ತುತಿ: ಎನ್.ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ–ನಿವೇದಿತಾ. ಹೆಚ್., 9.30 ಕನ್ನಡ ಭಾರತಿ, 10.00 ನಾಟಕ 'ಜೊತೆಗೂಡಿದ ಹೆಜ್ಜೆ' ರಚನೆ–ಹೆಚ್.ಆರ್.ಚಂದ್ರವದನರಾವ್, ನಿರ್ದೇಶನ– ಪ್ರಭುಸ್ವಾಮಿ ಮಳಿಮಠ್, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ರಂಗಾಯಣ, ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

ವನರಂಗ : ಕುಂದಾಪುರ ಯಶಸ್ವಿ ಕಲಾವೃಂದ ಮಕ್ಕಳ ಮೇಳ ತೆಕ್ಕಟ್ಟೆ ಅವರಿಂದ ಕೃಷ್ಣಾರ್ಜುನ ಕಾಳಗ (ಕನ್ನಡ) ನಾಟಕ ಪ್ರದರ್ಶನ, ಸಂಜೆ 7ಕ್ಕೆ.

ಭೂಮಿಗೀತ : ಪಾಂಡಿಚೆರಿ ಆದಿಶಕ್ತಿ ಥಿಯೇಟರ್ ತಂಡದಿಂದ ಊರ್ಮಿಳಾ (ಇಂಗ್ಲೀಷ್) ನಾಟಕ ಪ್ರದರ್ಶನ, ಸಂಜೆ 6.30ಕ್ಕೆ.

ಕಿರುರಂಗ ಮಂದಿರ : ಪಾಂಡಿಚೆರಿ ವೆಲಿಪ್ಪಡೈ ಥಿಯೇಟರ್ ಮೂವ್‌ಮೆಂಟ್ ತಂಡದಿಂದ ನಡಾಪಾವಾಡೈ (ತಮಿಳು) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಎಸ್. ರಾಮಸ್ವಾಮಿ, ಸಂಜೆ 7ಕ್ಕೆ; ವರ್ಣ ಚಿತ್ರಕಲಾ ಪ್ರದರ್ಶನ, ಕುಮಾರಿ ಅಭಿರಾಮಿ ಕೊಟ್ಟಾಯಂ, ಕೇರಳ; ಶಿಲ್ಪಕಲಾ ಪ್ರದರ್ಶನ, ಸ್ಮೃದುಲ್ ಇ, ಕಣ್ಣೂರು ಕೇರಳ; ಛಾಯಾಚಿತ್ರ ಪ್ರದರ್ಶನ, ನವೀನ್‌ಕುಮಾರ್, ಪುತ್ತೂರು; ರಂಗಾಯಣ ನಾಟಕಗಳ ಭಿತ್ತಿಚಿತ್ರಗಳ ಪ್ರದರ್ಶನ.

ರಂಗಾಯಣ ಆವರಣ : ಮೈಸೂರು ಸ್ವರಪಾನ ತಂಡದಿಂದ ರಂಗಗೀತೆಗಳು, ಸಂಜೆ 5 ರಿಂದ.

ಬಹುರೂಪಿ ಚಲನಚಿತ್ರೋತ್ಸವ : ಬೆಳಗ್ಗೆ 10.30 ರಿಂದ ಬಾರ್ಡರ್ ಲ್ಯಾಂಡ್ಸ್ (2022), ನಿರ್ದೇಶನ: ಸಮರ್ಥ ಮಹಜನ್; ಮಧ್ಯಾಹ್ನ 12 ರಿಂದ ಜರ್ನಿ ಆಫ್ ಫ್ರೀಡಮ್ ಸಾಂಗ್ ಆಫ್ ಘೆಟ್ಟೊ, ನಿರ್ದೇಶನ : ಜಸ್ಟಿನ್ ಡಿಲನ್, ಕೆ. ಚಂದ್ರಶೇಖರ್; ಮಧ್ಯಾಹ್ನ 2 ರಿಂದ 12 ಇಯರ್ಸ್ ಅ ಸ್ಲೇವ್, ನಿರ್ದೇಶನ : ಸ್ಟೀವ್ ಮೆಕ್ವೀನ್.

ಕಿಂದರಿ ಜೋಗಿ ಆವರಣ : ಯದುಕುಮಾರ್ ಮತ್ತು ತಂಡದಿಂದ ಸ್ಯಾಕ್ಸೋಫೋನ್ ವಾದನ, ಸಂಜೆ 5.30ಕ್ಕೆ

ಮಕ್ಕಳ ಬಹುರೂಪಿ ನಾಟಕೋತ್ಸವ : ಕೇರಳದ ಕೊಚ್ಚಿಯ ಲೋಕಧರ್ಮಿ ತಂಡದಿಂದ ದಿ ಬೋಟ್ ಬಾಯ್ (ಮಲಯಾಳಂ) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಡಾ. ಚಂದ್ರದಾಸನ್, ಸಂಜೆ 7.30ಕ್ಕೆ

ಮಕ್ಕಳನ್ನು ಭವಿಷ್ಯಕ್ಕಾಗಿ ರೂಪಿಸುತ್ತಿದ್ದೇವೆ ಎಂಬುದು ಉದ್ಧಟತನ

ಮಕ್ಕಳ ಪ್ರಸ್ತುತದ ಪ್ರಪಂಚಕ್ಕೆ ಗ್ರಹಿಕೆ ಸೂಕ್ಷ್ಮಗೊಳಿಸಬೇಕಷ್ಟೇ

ಮಕ್ಕಳ ಬಹುರೂಪಿ ಉದ್ಘಾಟಿಸಿದ ನಟ ಪ್ರಕಾಶ್ ರಾಜ್ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ನಟ ಪ್ರಕಾಶ್‌ರಾಜ್ ಮಕ್ಕಳ ಬಹುರೂಪಿಗೆ ಚಾಲನೆ ನೀಡಿದರು.

ಮೈಸೂರು,ಜ.15(ಪಿಎಂ)– ಮಕ್ಕಳನ್ನು ಭವಿಷ್ಯಕ್ಕಾಗಿ ರೂಪಿಸುತ್ತಿದ್ದೇವೆ ಎಂಬುದು ಉದ್ಧಟತನ. ಮಕ್ಕಳ ಪ್ರಸ್ತುತದ ಪ್ರಪಂಚದಲ್ಲಿ ಅವರದ್ದೇ ಕುತೂಹಲ ಇದ್ದು, ಅದಕ್ಕೆ ಪೂರಕವಾಗಿ ಅವರ ಗ್ರಹಿಕೆ ಸೂಕ್ಷ್ಮಗೊಳಿಸಬೇಕಷ್ಟೇ ಎಂದು ರಂಗಭೂಮಿ ಹಾಗೂ ಚಲನಚಿತ್ರನಟ ಪ್ರಕಾಶ್ ರಾಜ್ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2025ರ ಪ್ರಯುಕ್ತ ಇದೇ ಮೊದಲ ಬಾರಿಗೆ ಹಮ್ಮಿಕೊಂಡಿರುವ ಮಕ್ಕಳ ಬಹುರೂಪಿಗೆ ಇದೇ ಕಾರ್ಯಕ್ರಮ ಪೋಸ್ಟರ್ ಅನಾವರಣಗೊಳಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಬಹುರೂಪಿಯಲ್ಲಿ ಈ ವರ್ಷದಿಂದ ಮಕ್ಕಳ ಬಹುರೂಪಿ ಪ್ರಾರಂಭಿಸಿರುವುದು ಆರೋಗ್ಯಕರ ಬೆಳವಣಿಗೆ. ಇದು ಯಾವಾಗಲೋ ಆಗಬೇಕಿತ್ತು. ಕಳೆದ ಒಂದೂವರೆ ವರ್ಷದಿಂದ ನಮ್ಮ ನಿರ್ದಿಗಂತದಲ್ಲಿ ಮಕ್ಕಳ ರಂಗಭೂಮಿ ಬಗ್ಗೆಯೇ ಚಿಂತನೆ ನಡೆಯುತ್ತಿದೆ ಎಂದರು.

ನಾನು ಬೆಳೆಸುತ್ತೇನೆ ಎಂಬುದು ಅಹಂಕಾರ ನಾನು ಬೆಳೆಯಲು ಬಿಡುತ್ತೇನೆ ಎಂಬುದು ವಿನಯ. ಇದನ್ನು ಪ್ರಕೃತಿ ಮಾಡುತ್ತಿದೆ. ಮಕ್ಕಳು ಏನು ತಿನ್ನಬೇಕು, ಹೇಗೆ ನಡೆದುಕೊಳ್ಳಬೇಕು ಎಂಬುದರಲ್ಲಿ ಎಡವುತ್ತಿದ್ದೇವೆ. ಮಕ್ಕಳನ್ನು ಭವಿಷ್ಯಕ್ಕಾಗಿ ರೂಪಿಸುತ್ತೇವೆ ಎಂಬುದು ಅಹಂಕಾರ ಮತ್ತು ಉದ್ಧಟತನ. ನಾಳೆಯ ಭವಿಷ್ಯಕ್ಕೆ ಮಕ್ಕಳನ್ನು ರೂಪಿಸುವುದಲ್ಲ. ಬದಲಿಗೆ ಅವರ ಪ್ರಸ್ತುತದ ಪ್ರಪಂಚ ಇದ್ದು, ಅದೊಂದು ಕುತೂಹಲದ ಪ್ರಪಂಚ. ಜೊತೆಗೆ ಅದು ತನ್ನನ್ನು ತಾನು ರೂಪಿಸಿಕೊಳ್ಳುವ ಪ್ರಪಂಚ. ಅದಕ್ಕೇನು ನಾವು ಕಲಿಸಬೇಕಿಲ್ಲ. ಗ್ರಹಿಕೆ ಸೂಕ್ಷ್ಮಗೊಳಿಸಬೇಕಷ್ಟೇ. ಆ ಕೆಲಸ ನಡೆಯುತ್ತಿಲ್ಲ. ನಮ್ಮ ಭಯ, ಒತ್ತಡ, ಭವಿಷ್ಯದ ಕಲ್ಪನೆಯಿರುವ ಮೂರ್ಖತನದಲ್ಲೇ ಮಕ್ಕಳನ್ನು ಬೆಳೆಸುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಭವಿಷ್ಯಕ್ಕಾಗಿ ಮಕ್ಕಳನ್ನು ರೂಪಿಸುತ್ತಿದ್ದೇವೆ ಎನ್ನುತ್ತೇವೆ. ಆದರೆ ಭವಿಷ್ಯವನ್ನು ಕಲ್ಪಿಸಿಕೊಳ್ಳಲು ನಮಗೆ ಸಾಧ್ಯವಾಗುತ್ತಿದೆಯೇ? 10 ವರ್ಷಗಳ ನಂತರ ಪ್ರಪಂಚ ಹೇಗಿರುತ್ತದೆ. 10 ವರ್ಷಗಳ ನಂತರದಲ್ಲಿ ಮಕ್ಕಳು ಪ್ರಸ್ತುತವಾಗಲು ನಾವು ಅವರನ್ನು ಬೆಳೆಸುತ್ತಿದ್ದೇವೆಯೇ? ಎಂದು ಪ್ರಶ್ನಿಸಿದರು.

ಮಕ್ಕಳ ಬಹುರೂಪಿಯ ಎಲ್ಲಾ ನಾಟಕಗಳ ವಿಷಯ ಮಕ್ಕಳ ಕೇಂದ್ರಿತ...

"ಇಂದು ಪ್ರದರ್ಶನಗೊಂಡ 'ಮೊಗ್ಲಿ' ಹಾಗೂ ನಾಳೆ (ಜ.16) 'ದ ಬೋಟ್ ಬಾಯ್' ಎರಡೂ ಮಕ್ಕಳೇ ಅಭಿನಯಿಸುವ ನಾಟಕಗಳಾಗಿವೆ ಇನ್ನು ಮೂರು ನಾಟಕಗಳಲ್ಲಿ ಹಿರಿಯ ಕಲಾವಿದರು (ದೊಡ್ಡವರು) ಅಭಿನಯಿಸಲಿದ್ದಾರೆ. ಒಟ್ಟಾರೆ ಮಕ್ಕಳ ಬಹುರೂಪಿಯ ಎಲ್ಲಾ ನಾಟಕಗಳಲ್ಲಿ ವಿಷಯ ಮಕ್ಕಳ ಕೇಂದ್ರೀತವೇ ಆಗಿವೆ. ಈ ಎಲ್ಲಾ ನಾಟಕಗಳನ್ನು ನೋಡಲು ಮಕ್ಕಳಿಗೆ ಶೇ.50ರಷ್ಟು ರಿಯಾಯಿತಿ ಕಲ್ಪಿಸಲಾಗಿದೆ (ವಯಸ್ಕರಿಗೆ ಟಿಕೆಟ್ ದರ 100 ರೂ., ಮಕ್ಕಳಿಗೆ 50 ರೂ.).

-ಸತೀಶ್ ತಿಪಟೂರು, ನಿರ್ದೇಶಕರು, ರಂಗಾಯಣ, ಮೈಸೂರು.

ಶಾಲೆ ಮತ್ತು ಟ್ಯೂಷನ್ ಎಂಬ ಒತ್ತಡದಲ್ಲೇ ಮಕ್ಕಳು ಕಾಲ ಕಳೆಯುವಂತಾಗಿದೆ. ಮಕ್ಕಳಿಗೆ ಪೋಷಕರು ಸಮಯ ಕೊಡುತ್ತಿಲ್ಲ. ಹಾಗಾಗಿ ಪೋಷಕರ ಹೊರತಾಗಿ ಬೇರೆ ಯಾರ್ಯಾರೋ ಮಕ್ಕಳನ್ನು ಬೆಳೆಸುವಂತಾಗಿದೆ. ಮಕ್ಕಳ ಮನೋವೈದ್ಯರೊಬ್ಬರು ಒಂದು ಮಗುವಿನ ವರ್ತನೆ ಬಗ್ಗೆ ಹೇಳಿದ್ದು ಕೇಳಿ ಆತಂಕವಾಯಿತು. ಶ್ರೀಮಂತ ಮನೆತನದ ಮೂರ್‍ನಾಲ್ಕು ವರ್ಷದ ಮಗು ಮಾತನಾಡದೇ ಸಂಕೋಚ ಮನೋಭಾವದಿಂದ ವರ್ತಿಸುತ್ತಿದ್ದ ಪ್ರಕರಣ ಅದು. ಅವರು ಆಪ್ತಸಮಾಲೋಚನೆಗೆ ಒಳಪಡಿಸಿದಾಗ, 'ನಾನು ಬೆಳಗ್ಗೆ ಎದ್ದಾಗ ನನ್ನ ಉಸಿರು ನಿಂತು ಹೋದರೆ ಚೆನ್ನಾಗಿರುತ್ತದೆ' ಎಂದು ಆ ಮಗು ಹೇಳಿತಂತೆ ಎಂದು ಆತಂಕ ವ್ಯಕ್ತಪಡಿಸಿದರು.

ನಾನು ಇರಬಾರದೆಂದು ಮಗು ಹೇಳಲು ಕಾರಣ ಹುಡುಕುತ್ತಾ ಹೋದರೆ, ಬೆಳಗ್ಗೆ ಶಾಲೆ, ಮಧ್ಯಾಹ್ನದ ನಂತರ ಟ್ಯೂಷನ್. ರಾತ್ರಿ ಮಲಗಿ ಬೆಳಗ್ಗೆ ಎದ್ದೇಳಬೇಕಾದ ಸನ್ನಿವೇಶವು ಆ ಮಗುವಿನಲ್ಲಿ ಒತ್ತಡ ಉಂಟು ಮಾಡಿದ್ದ ಅಂಶ ಬೆಳಕಿಗೆ ಬಂದಿದೆ. ಶಾಲೆ ಮತ್ತು ಟ್ಯೂಷನ್‌ಗೆ ಹಾಕಿಬಿಟ್ಟರೆ ನಮ್ಮ ಕೆಲಸ ಮುಗಿಯಿತೆಂದು ಪೋಷಕರು ಮಕ್ಕಳೊಂದಿಗೆ ಮಾತನಾಡುತ್ತಿಲ್ಲ. ಅವರ ಭಾವನೆಗಳನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಮಕ್ಕಳು ಆಸಕ್ತಿ ಇರುವುದನ್ನು ಕಲಿಯಲು ಪೋಷಕರು ಬಿಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಕ್ಕಳು ಮೌನವಾಗಿಯೇ ಕಲಿಯುತ್ತಾ ಸಾಗುತ್ತಾರೆ. ಹಾಗಾಗಿ ನಾವು ನಡೆದುಕೊಳ್ಳುವ ರೀತಿ ಕೂಡ ಮುಖ್ಯ. ಮಕ್ಕಳ ಹಾರುವ ರಕ್ಕೆಗಳಿಗೆ ಶಕ್ತಿ ಕೊಡುವುದಷ್ಟೇ, ಹಾರುವ ದಿಗಂತಗಳು ಅವರಾಗಬೇಕು. ಆದರೆ ನಾವು ದಿಗಂತಗಳನ್ನು ನಿರ್ಧರಿಸಿ ಅವರನ್ನು ಕಲಿಸುತ್ತಿದ್ದೇವೆ. ಇದು ತಪ್ಪು, ಪ್ರಕೃತಿಗೆ ವಿರೋಧ. ಈ ನಿಟ್ಟಿನಲ್ಲಿ ಈಗಲಾದರೂ ನಾವು ಎಚ್ಚೆತ್ತುಕೊಂಡು ಮಕ್ಕಳೊಂದಿಗೆ ಮಕ್ಕಳಾಗಿ ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು. ಸಮಾಜದಲ್ಲಿ ನಾವು ಮಕ್ಕಳ ರೀತಿಯಲ್ಲಿ ಆಲೋಚನೆ ಮಾಡೋಣ. ಅವರ ಕುತೂಹಲದ ಹಸಿವಿಗೆ ಧಾರೆ ಎರೆಯೋಣ. ನಮ್ಮೆಲ್ಲರ ಪ್ರೋತ್ಸಾಹದಿಂದ ಮಕ್ಕಳ ಬಹುರೂಪಿ ಹೆಮ್ಮರವಾಗಿ ಬೆಳೆಯಲಿ ಎಂದು ಆಶಿಸಿದರು.

ರಂಗ ಸಮಾಜದ ಸದಸ್ಯ ಶಶಿಧರ್ ಭಾರೀಘಾಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಜವರೇಗೌಡ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉಪ ನಿರ್ದೇಶಕ ಡಾ. ಎಂ.ಡಿ.ಸುದರ್ಶನ್ ಮತ್ತಿತರರು ಹಾಜರಿದ್ದರು.

ಜ.19ರವರೆಗೆ ಪ್ರತಿದಿನ ಸಂಜೆ 7.30ಕ್ಕೆ ನಾಟಕಗಳ ಪ್ರದರ್ಶನ

ಮಕ್ಕಳ ಬಹುರೂಪಿ ಪ್ರಯುಕ್ತ ಮೈಸೂರಿನ ಕಲಾಮಂದಿರದಲ್ಲಿ ಜ.19ರವರೆಗೆ ಪ್ರತಿದಿನ ಸಂಜೆ 7.30ಕ್ಕೆ ನಾಟಕಗಳ ಪ್ರದರ್ಶನ ನಡೆಯಲಿದೆ. ಮೊದಲ ದಿನವಾದ ಬುಧವಾರ ಧಮನಿ ಕುಂದಾಪುರ, ಕಲಾಭಿ ಚಿಲ್ಡ್ರನ್ಸ್ ಥಿಯೇಟರ್ ಮಂಗಳೂರು ವತಿಯಿಂದ 'ಮೊಗ್ಲಿ (ಕನ್ನಡ)' ನಾಟಕ ಪ್ರದರ್ಶನಗೊಂಡಿತು. ಅಂತೆಯೇ ಜ.16ರಂದು ಕೇರಳದ ಕೊಚ್ಚಿಯ ಲೋಕಧರ್ಮಿ ತಂಡದಿಂದ 'ದ ಬೋಟ್ ಬಾಯ್ (ಮಲಯಾಳಂ)', ಜ.17ರಂದು ಮಂಗಳೂರಿನ ಕಲಾಭಿ ಥಿಯೇಟರ್ ತಂಡದಿಂದ 'ಎ ಫ್ರೆಂಡ್ ಬಿಯಾಂಡ್ ದ ಫೆನ್ಸ್ (ಕನ್ನಡ)', ಜ.18ರಂದು ಬೆಂಗಳೂರು ಲಿಟಲ್ ಥಿಯೇಟರ್ ಫೌಂಡೇಷನ್ ತಂಡದಿಂದ 'ಕಾಬುಲಿವಾಲಾ ಕಾಲಿಂಗ್ (ಇಂಗ್ಲಿಷ್)' ಮತ್ತು ಜ.19ರಂದು ಮೈಸೂರು ರಂಗಾಯಣ ರೆಪರ್ಟರಿ ತಂಡದಿಂದ 'ಮೈ ಫ್ಯಾಮಿಲಿ (ಕನ್ನಡ)' ನಾಟಕಗಳು ಪ್ರದರ್ಶನಗೊಳ್ಳಲಿವೆ.

ಬಹುರೂಪಿಯಲ್ಲಿ ಒಂದಕ್ಕಿಂತ ಒಂದು ಅಮೋಘ ನಾಟಕ ಪ್ರದರ್ಶನ



'ಧರ್ಮನಟಿ' ನಾಟಕ



ಮೆಜ್ವೋಕ್ ನಾಟಕದ ದೃಶ್ಯ

ಮೈಸೂರು, ಜ.15(ಎಂಕೆ)– ಪ್ರೀತಿ, ಕರುಣೆ, ವಾತ್ಸಲ್ಯದ ಜೊತೆಗೆ ಹಾಸ್ಯದ ಹೊನಲು ಹರಿಸಿ... ಜಾಣ್ಮೆಯಿಂದ ಸಾಧನೆ ಸಾಧ್ಯವೆಂಬುದನ್ನು ಅನಾವರಣಗೊಳಿಸಿದ ಸುಪ್ರಸಿದ್ಧ ನಾಟಕಗಳು...!

ಮೈಸೂರು ರಂಗಾಯಣದಲ್ಲಿ ನಡೆಯುತ್ತಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಬುಧವಾರ ಬಹುಭಾಷೆಯ 'ಮೆಜ್ವೋಕ್', ಕನ್ನಡದ 'ಧರ್ಮನಟಿ', 'ಮುದುಕನ ಮದುವೆ' ಹಾಗೂ 'ಮೊಗ್ಲಿ' ನಾಟಕಗಳು ಪ್ರದರ್ಶನಗೊಂಡವು.

ಭೂಮಿಗೀತ ವೇದಿಕೆಯಲ್ಲಿ ಜ್ಯೋತಿ ಡೋಗ್ರಾ ನಿರ್ದೇಶನದಲ್ಲಿ ಮುಂಬೈನ ಮೆಜ್ವೋಕ್ ತಂಡ ಕಲಾವಿದರಿಂದ ಪ್ರದರ್ಶನಗೊಂಡ 'ಮೆಜ್ವೋಕ್' ಬಹುಭಾಷೆಯ ನಾಟಕವು, ಎಲ್ಲರ ಬದುಕಿನಲ್ಲಿ ಆಸೆಗಳು, ಬಯಕೆಗಳು, ಹಾಗೂ ಅಸ್ಮಿತೆ ಎಂಬ ಅಂಶಗಳು ಅನಿವಾರ್ಯ ಎಂಬುದನ್ನು ಅನ್ವೇಷಿಸಿತು. ಅಲ್ಲದೆ ಆಸೆಗಳು ಹೇಗೆ ಮನುಷ್ಯನನ್ನು ಮುಂದಕ್ಕೆ ಓಡಿಸುತ್ತವೆ ಎಂಬುದನ್ನು ಮನತಟ್ಟುವ ರೀತಿಯಲ್ಲಿ ಕಲಾವಿದರು ತಮ್ಮ ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದರು.


ವನರಂಗದಲ್ಲಿ ಪಿ.ಬಿ.ಧುತ್ತರಗಿ ರಚನೆ, ಬಿ.ಕುಮಾರಸ್ವಾಮಿ ನಿರ್ದೇಶನದ 'ಮುದುಕನ ಮದುವೆ' ಹಾಸ್ಯ ಪ್ರಧಾನ ಪೌರಾಣಿಕ ನಾಟಕ ತುಂಬಿದ್ದ ಕಲಾಭಿಮಾನಿಗಳಿಗೆ ರಸದೌತಣ ನೀಡಿತು. ಬುದ್ಧಿವಂತಿಕೆಯಿಂದ ಮಲತಾಯಿಯ ಮಸಲತ್ತಿನ ನಡುವೆ ಇಷ್ಟಪಟ್ಟವನನ್ನೇ ಮದುವೆಯಾಗುವ ಕಥಾಹಂದರವುಳ್ಳ ಸುಂದರ ಕುಟುಂಬದ ಸವಿ ಚಿತ್ರಣವನ್ನು ಚಿತ್ರದುರ್ಗದ ಶ್ರೀ ಕುಮಾರೇಶ್ವರ ನಾಟಕ ಸಂಘದ ಕಲಾವಿದರು ಉಣಬಡಿಸಿದರು.

ಹಾಗೆಯೇ ಕಿರುರಂಗಮಂದಿರದಲ್ಲಿ ಸಿದ್ದಲಿಂಗ ಪಟ್ಟಣಶೆಟ್ಟಿ ರಚನೆ, ಆಸಿಫ್ ಕ್ಷತ್ರಿಯ ಮತ್ತು ಶ್ವೇತಾ ಶ್ರೀನಿವಾಸ್ ನಿರ್ದೇಶನದ 'ಧರ್ಮನಟಿ' ನಾಟಕ ಪ್ರದರ್ಶನಗೊಂಡಿತು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಸಂಘರ್ಷ, ಆಕೆಯ ತಾಯ್ತನದ ಗ್ರಹಿಕೆ ನಡುವೆ ಹೆಣ್ಣು ತನ್ನ ಅಸ್ಮಿತೆಗಾಗಿ ಜೀವನದ ಸಂಕೋಲೆಗಳ ನಡುವೆ ಪ್ರಯತ್ನಿಸುವ ಸನ್ನಿವೇಶಗಳು ನೋಡುಗರ ಮನಸ್ಸಿಗೆ ಮುದ ನೀಡಿದವು. ಅರ್ಥಗರ್ಭಿತ ಹಿನ್ನೆಲೆ ಸಂಗೀತ ಹಾಗೂ ಅತ್ಯಾಕರ್ಷಕ ವಸ್ತ್ರವಿನ್ಯಾಸದೊಂದಿಗೆ ಸಿರಿವಂತಿಕೆಯಿಂದ ಕೂಡಿದ್ದ ಧರ್ಮನಟಿ ನಾಟಕ ಅಪಾರ ಮೆಚ್ಚುಗೆ ಪಡೆಯಿತು.



ವನರಂಗದಲ್ಲಿ ಮುದುಕನ ಮದುವೆ ನಾಟಕ ಪ್ರದರ್ಶನಗೊಂಡಿತು.

'ಮೊಗ್ಲಿ' ಮೋಡಿ...



'ಮೊಗ್ಲಿ' ನಾಟಕದ ದೃಶ್ಯ

ಅರಿವಿರುವ ದಿ ಜಂಗಲ್ ಬುಕ್‌ನ 'ಮೊಗ್ಲಿ' ನಾಟಕ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಕಲಾಸಕ್ತರು, ಪೋಷಕರಿಗೆ ಮೋಡಿ ಮಾಡಿತು.

ಕಲಾಮಂದಿರ ವೇದಿಕೆಯಲ್ಲಿ ಕುಂದಾಪುರದ ಧಮನಿ ಮತ್ತು ಮಂಗಳೂರಿನ ಕಲಾಭಿ ಚಿಲ್ಡ್ರನ್ ಥಿಯೇಟರ್‌ನ ಮಕ್ಕಳ ಆಕರ್ಷಕ ಅಭಿನಯದೊಂದಿಗೆ ಭುವನ್ ಮಣಿಪಾಲ್ ಅವರ ರಂಗರೂಪ ಮತ್ತು ನಿರ್ದೇಶನದಲ್ಲಿ ಮೂಡಿಬಂದ 'ಮೊಗ್ಲಿ' ಕಾಡಿನ ಸುಂದರ ಪ್ರಪಂಚವನ್ನು ತೆರೆದಿಟ್ಟಿತು. ಮೃಗಗಳಲ್ಲಿಯೂ ತಾಯಿಯ ಕರುಣೆ, ಪ್ರೀತಿ, ವಾತ್ಸಲ್ಯವಿದೆ ಎಂಬುದನ್ನು ಸಾಕ್ಷೀಕರಿಸುವಂತೆ ತೋಳಗಳ ನಡುವೆ ಬೆಳೆದ 'ಮೊಗ್ಲಿ'ಯ ಸಾಹಸ ರೋಚಕತೆ ಸೃಷ್ಟಿಸಿತು. ವನ್ಯಜೀವಿಗಳ ನಡುವೆ ಬೆಳೆದು, ಮಾನವ ಮತ್ತು ಪ್ರಕೃತಿಯ ನಡುವೆ ಸಮತೋಲನ ಕಾಪಾಡುವ ಜವಾಬ್ದಾರಿಯ ವನ್ಯಜೀವಿಗಳ ವೇಷದಲ್ಲಿ ಮನಮೋಹಕವಾಗಿ ಅಭಿನಯಿಸಿದ ಪುಟಾಣಿಗಳು ಅಭಿಮಾನದ ಶಿಳ್ಳೆ-ಚಪ್ಪಾಳೆಗಳಿಗೆ ಪಾತ್ರರಾದರು.

ಸೇನಾ ದಿನ ಆಚರಣೆ; ನಾಲ್ವರು ಮಾಜಿ ಯೋಧರಿಗೆ ಸನ್ಮಾನ



ಮೈಸೂರಿನ ಸಾಗಿ ಕಾಫೆಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಭಾರತೀಯ ಸೇನಾ ದಿನಾಚರಣೆಯಲ್ಲಿ ಮಾಜಿ ಯೋಧರನ್ನು ಶಾಸಕ ಕೆ.ಹರೀಶ್‌ಗೌಡ ಸನ್ಮಾನಿಸಿದರು.

ಮೈಸೂರು, ಜ.15(ಪಿಎಂ)– ಹೊನ್ನೇಕ್ ಮೀಡಿಯಾ ಅಂಡ್ ಎಂಟರ್ಟೈನ್‌ಮೆಂಟ್ ಹಾಗೂ ಸಾಗಿ ಕಾಫೆ ಜಂಟಿ ಆಶ್ರಯದಲ್ಲಿ ಬುಧವಾರ ಭಾರತೀಯ ಸೇನಾ ದಿನವನ್ನು ಆಚರಿಸಲಾಯಿತು.

ಮೈಸೂರಿನ ಸಾಗಿ ಕಾಫೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶಾಸಕ ಕೆ.ಹರೀಶ್‌ಗೌಡ, ನಾಲ್ವರು ನಿವೃತ್ತ ಯೋಧರನ್ನು ಸನ್ಮಾನಿಸಿ, ಅಭಿನಂದಿಸಿದರು. ಬಳಿಕ ಮಾತನಾಡಿದ ಕೆ.ಹರೀಶ್‌ಗೌಡ, ಭಾರತೀಯ ಸೇನೆಯ ಯೋಧರ ತ್ಯಾಗವನ್ನು ನಾವು ಸದಾ ಸ್ಮರಿಸಬೇಕು. ಈ ನಿಟ್ಟಿನಲ್ಲಿ ಹೊನ್ನೇಕ್ ಮೀಡಿಯಾ ಮತ್ತು ಸಾಗಿ ಕಾಫೆ ಇಂದು ಕಾರ್ಯಕ್ರಮ ಆಯೋಜಿಸಿ ಯೋಧರನ್ನು ಗೌರವಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಗೌರವ ಸ್ವೀಕರಿಸಿದ ಮಾಜಿ ಯೋಧರು, ತಮ್ಮ ಸೇವಾ ದಿನಗಳ ಅನುಭವದ ಜೊತೆಗೆ ಶೌರ್ಯದ ಸನ್ನಿವೇಶಗಳನ್ನು ಹಂಚಿಕೊಂಡರು.

ನೂತನ ಪದಾಧಿಕಾರಿಗಳು


ಮೈಸೂರು, ಜ.15– ಮೈಸೂರು ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹಾಗೂ ಸಂಯುಕ್ತ ಪದವಿಪೂರ್ವ ಕಾಲೇಜು ಪ್ರಾಂಶುಪಾಲರ ಸಂಘದ ಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಪಿರಿಯಾಪಟ್ಟಣ ತಾಲೂಕು ಜಿ.ಸಿ. ಶಂಕರ್ (ಅಧ್ಯಕ್ಷ), ಸಾಲಿಗ್ರಾಮ ತಾಲೂಕು ಎಸ್. ಸೋಮಶೇಖರ್ (ಉಪಾಧ್ಯಕ್ಷ), ಹುಣಸೂರು ತಾಲೂಕು ಚಂದ್ರಶೇಖರ್ (ಸಂಘಟನಾ ಕಾರ್ಯದರ್ಶಿ), ಮೈಸೂರು ತಾಲೂಕು ಟಿ. ಕುಮಾರ (ಪ್ರಧಾನ ಕಾರ್ಯದರ್ಶಿ), ಮೈಸೂರಿನ ಡಾ. ಡಿ. ಮಹೇಶ್ (ಖಜಾಂಚಿ), ನಂಜನಗೂಡು ತಾಲೂಕು ಎಸ್. ಬಾಲರಾಜು (ಸಹ ಕಾರ್ಯದರ್ಶಿ)ಯಾಗಿ ಆಯ್ಕೆಯಾಗಿದ್ದಾರೆ.

ನಾಟಕೋತ್ಸವದಲ್ಲಿ ಜಾನಪದ ಉತ್ಸವ ಸೊಂಗಿ ಮಕ್ವಾಟೆ, ಕೊಡವರ ಬೊಳಕಾಟ್, ಕೊಲಾಟ್ ನೃತ್ಯ ಸೊಬಗು



ಕೊಡವರ ಸಾಂಪ್ರದಾಯಿಕ ಬೊಳಕಾಟ್, ಕೊಲಾಟ್ ನೃತ್ಯ ರೂಪಕ



ಮಹಾರಾಷ್ಟ್ರ-ಗುಜರಾತ್ ಗಡಿಯ ಬುಡಕಟ್ಟು ಸಮುದಾಯದ ಸೊಂಗಿ ಮಕ್ವಾಟೆ ಜಾನಪದ ನೃತ್ಯ

ಮೈಸೂರು, ಜ.15(ಎಂಕೆ)– ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಜಾನಪದ ಉತ್ಸವ... ಮಹಾರಾಷ್ಟ್ರ-ಗುಜರಾತ್ ಗಡಿಯ ಸೊಂಗಿ ಮಕ್ವಾಟೆ, ಕೊಡವರ ಬೊಳ್‌ಕಾಟ್... ಕೊಲಾಟ್ ನೃತ್ಯ ಸೊಬಗು...!

ಮೈಸೂರು ರಂಗಾಯಣದ ಕಿಂದರಜೋಗಿ ಆವರಣದಲ್ಲಿ ಬುಧವಾರ ಜಾನಪದ ಉತ್ಸವದ ಮೆರುಗು ಕಂಡುಬಂದಿತು. ಶುಭ ಕಾರ್ಯಗಳ ಸಂದರ್ಭದಲ್ಲಿ ದುಷ್ಟಶಕ್ತಿ ನಿವಾರಣೆಗೆ ನರಸಿಂಹ, ವೇತಾಳ, ಕಾಲಭೈರವನ ಮುಖವಾಡ ತೊಟ್ಟು ಸೊಂಗಿ ಮಕ್ವಾಟೆ ಜಾನಪದ ನೃತ್ಯ ಪ್ರಕಾರ ನೆರೆದಿದ್ದವರು ಎದೆ ನಡುಗಿಸಿತು.

ಮಹಾರಾಷ್ಟ್ರ ಮತ್ತು ಗುಜರಾತ್ ಗಡಿ ಪ್ರದೇಶದಲ್ಲಿರುವ ಬುಡಕಟ್ಟು ಜನಾಂಗದ ಜಾನಪದ ನೃತ್ಯ ಇದಾಗಿದ್ದು, ಚೈತ್ರ ಮಾಸ ಮತ್ತು ಹೋಳಿ ಪೂರ್ಣಿಮೆಯ ಸಂದರ್ಭದಲ್ಲಿ ಹೆಚ್ಚಾಗಿ ಈ ನೃತ್ಯ ಪ್ರದರ್ಶನ ನಡೆಯಲಿದೆ. ವೇಷಧಾರಿಗಳ ನಡುವೆ ಕಾಲಿಗೆ ಗೆಜ್ಜೆ ಕಟ್ಟಿ ಅಬ್ಬರಿಸುತ್ತಾ ಕುಣಿದ ಕಲಾವಿದರು ಅಪಾರ ಜನಮೆಚ್ಚುಗೆಗೆ ಪಾತ್ರರಾದರು.

ನಂತರ ಕೊಡವ ನಾಡಿದ ಸಾಂಪ್ರದಾಯಿಕ ನೃತ್ಯ ಪ್ರದರ್ಶನ ಮನಸೂರೆಗೊಂಡಿತು. ಕೊಡವ ಯೂತ್ ವಿಂಗ್‌ನ ಕಲಾವಿದರು, ಕಪ್ಪು ಕುಪ್ಪಸ, ಪೀಚಕತ್ತಿಯ ಸಾಂಪ್ರದಾಯಿಕ ವಸ್ತ್ರತೊಟ್ಟು, ಕೈಯಲ್ಲಿ ಉದ್ದದ ಕೋಲುಗಳನ್ನು ಕೊಡವ ನಾಡಿನ ಜಾನಪದ ನೃತ್ಯ ಪ್ರಕಾರಗಳಾದ ಬೊಳಕಾಟ್ ಮತ್ತು ಕೊಲಾಟ್‌ನ ಪ್ರದರ್ಶನ ನೀಡಿ, ರಂಜಿಸಿದರು. ಹಿನ್ನೆಲೆ ಹಾಡಿನೊಂದಿಗೆ ಹೆಜ್ಜೆ ಹಾಕಿದ ಕೊಡವ ಕಲಾವಿದರು, ಕೊಡವ ಸಂಸ್ಕೃತಿಯನ್ನು ಪಸರಿಸಿದರು. ನಂತರ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ನೆನಪಿನ ಸ್ಮರಣಿಕೆ ನೀಡಿ ಗೌರವಿಸಿದರು.

ಪ್ರೊ.ಮುಜಾಫರ್ ಅಸ್ಸಾದಿ ಮೈಸೂರು ವಿವಿ ಘನತೆ ಹೆಚ್ಚಿಸುವ ಕೊಡುಗೆ ನೀಡಿದ್ದರು

ಮೈಸೂರು, ಜ.15(ಎಂಕೆ)– ಇಂಡಿಯಾ ಇಂಟರ್ನ್ಯಾಷನಲ್ ಪೊಲಿಟಿಕಲ್ ಅಕಾಡೆಮಿ ಸ್ಥಾಪಿಸಬೇಕು ಎಂಬ ಚಿಂತನೆ ಹೊಂದಿದ್ದ ಪ್ರೊ.ಮುಜಾಫರ್ ಅಸ್ಸಾದಿ ಅವರ ರಾಜಕೀಯ, ಸಾಮಾಜಿಕ ವಿಚಾರಗಳನ್ನು ಜನಮಾನಸಕ್ಕೆ ಕೊಂಡೊಯ್ಯುವ ಕೆಲಸವಾಗಬೇಕಿದೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ತಿಳಿಸಿದರು.

ನಗರದ ಹೈವೆ ಸರ್ಕಲ್‌ನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಜವಾಬ್ದಾರಿಯುತ ನಾಗರಿಕರ ಧ್ವನಿ ಮೈಸೂರು ಹಾಗೂ ಅಂಜುಮನೆ ಇತ್ತೆಹಾದ್–ಎ–ಇಸ್ಲಾಂ ವತಿಯಿಂದ ಆಯೋಜಿಸಿದ್ದ ಪ್ರೊ.ಮುಜಾಫರ್ ಅಸ್ಸಾದಿ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿ ಘನತೆ ಹೆಚ್ಚಿಸುವಲ್ಲಿ ಅಸ್ಸಾದಿಯವರ ಕೊಡುಗೆಯೂ ಸ್ಮರಣೀಯವಾಗಿದೆ ಎಂದು ನೆನೆದರು.

ಇವತ್ತು ಜಗತ್ತಿನ ರಾಜಕಾರಣ ಕಲುಷಿತಗೊಂಡಿದೆ. ಸಣ್ಣ ಸಣ್ಣ ಪ್ರಜಾತಂತ್ರ ವ್ಯವಸ್ಥೆ ಅಳವಡಿಸಿಕೊಂಡಿರುವ ದೇಶಗಳಲ್ಲಿ ಪೊಲಿಟಿಕಲ್ ಅಕಾಡೆಮಿಗಳಿವೆ. ಆದರೆ ಅತೀ ದೊಡ್ಡ ಪ್ರಜಾತಂತ್ರ ವ್ಯವಸ್ಥೆಯನ್ನು ಒಳಗೊಂಡಿರುವ ಭಾರತದಲ್ಲಿ ಪೊಲಿಟಿಕಲ್ ಅಕಾಡೆಮಿ ಇಲ್ಲದಿರುವುದು ವಿಷಾದನೀಯ. ಹೇಗಾದರೂ ಇಂಡಿಯಾ ಇಂಟರ್ನ್ಯಾಷನಲ್ ಪೊಲಿಟಿಕಲ್ ಅಕಾಡೆಮಿ ಸಂಸ್ಥೆಯನ್ನು ರಾಜ್ಯದಲ್ಲೇ ಅದರಲ್ಲೂ ಮೈಸೂರಿನಲ್ಲಿ ಸ್ಥಾಪಿಸಬೇಕು ಎಂಬ ವಿಚಾರವನ್ನು ಅಸ್ಸಾದಿ ನನ್ನೊಂದಿಗೆ ನಾಲ್ಕೈದು ಬಾರಿ ಚರ್ಚಿಸಿದ್ದರು ಎಂದು ತಿಳಿಸಿದರು.



ಶ್ರದ್ಧಾಂಜಲಿ ಸಭೆಯಲ್ಲಿ ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಮಾತನಾಡಿದರು.

ಎಂಎಲ್‌ಸಿ ವಿಶ್ವನಾಥ್ ನುಡಿನಮನ


ದಿನ ಬೆಳಗಾದರೆ ಅವರನ್ನು ಇವರು... ಇವರನ್ನ ಅವರು ಬೈಯೋದೇ ರಾಜಕೀಯ ಎಂಬಂತಾಗಿದೆ. ರಾಜಕಾರಣಿಗಳಿಗೆ ಬೈಯೋದನ್ನ ಬಿಟ್ಟರೇ ಬೇರೆ ಕೆಲಸವೇ ಇಲ್ಲವೆಂಬಂತಾಗಿದೆ. ಆದ್ದರಿಂದ ಪೊಲಿಟಿಕಲ್ ಅಕಾಡೆಮಿ ಸ್ಥಾಪನೆ ಅಗತ್ಯವಿದೆ. ಅಸ್ಸಾದಿ ಆದಿವಾಸಿ ಬುಡಕಟ್ಟು ಜನಾಂಗದ ಬಗ್ಗೆ ಅಧ್ಯಯನ ನಡೆಸಿ, ನೀಡಿದ್ದ ವರದಿಯನ್ನು ಸರ್ಕಾರ ಮುಟ್ಟಿಯೂ ನೋಡದಿರುವುದು ಅತ್ಯಂತ ಬೇಸರ ತರಿಸುವಂತಹದ್ದು. ಪ್ರಸ್ತುತ ಸಮಾಜಕ್ಕೆ ಮುಜಾಫರ್ ಅಸ್ಸಾದಿಯವರ ಮಾರ್ಗದರ್ಶನದ ಅಗತ್ಯವಿತ್ತು ಎಂದು ಸ್ಮರಿಸಿದರು.

ದೆಹಲಿಯ ಜವಾಹರಲಾಲ್ ನೆಹರು ವಿವಿ ಸಮಾಜಶಾಸ್ತ್ರಜ್ಞ ಪ್ರೊ.ಎಂ.ಎನ್.ಪಾಣಿನಿ ಮಾತನಾಡಿ, ಅಸ್ಸಾದಿ ಅವರಂತೆ ಕೆಲಸ ಮಾಡೋದು ಕಷ್ಟ, ನನ್ನನ್ನು ಜಯಪ್ರಿಯ ವ್ಯಕ್ತಿಯನ್ನಾಗಿ ಮಾಡಿದ್ದೇ ಅವರು. ಅಸ್ಸಾದಿ ಅವರ ಸಾಧನೆ ಬೆಳಕಿನಲ್ಲಿ ನಾನು ಬೆಳೆದಿದ್ದು, ಅವರೊಬ್ಬರು ಸಮಾಜಶಾಸ್ತ್ರಜ್ಞ ಮಾತ್ರವಲ್ಲ ಮಾನವೀಯತೆಯ ಚಿಂತಕರಾಗಿದ್ದರು. ಯಾವ ಜವಾಬ್ದಾರಿಯನ್ನೇ ವಹಿಸಿದರು, ಅಚ್ಚುಕಟ್ಟಾಗಿ ನಿರ್ವಹಣೆ ಮಾಡುತ್ತಿದ್ದರು. ಆಧಾರವಿಲ್ಲದೆ ಯಾವುದೇ ವಿಷಯ ಕುರಿತು ಮಾತನಾಡುತ್ತಿರಲಿಲ್ಲ. ವಾಟ್ಸ್‌ಅಪ್ ಗ್ರೂಪ್ ಮಾಡಿ, ಸಾಮಾಜಿಕ ಪರಿವರ್ತನೆಯ ವಿಚಾರಗಳನ್ನು ತಿಳಿಸುತ್ತಿದ್ದರು ಎಂದರು.

ವಿಶ್ರಾಂತ ಕುಲಪತಿ ಪ್ರೊ.ಸಬಿಹಾ ಭೂಮಿಗೌಡ, ರಂಗಕರ್ಮಿ ಜನಾರ್ಧನ್(ಜನ್ನಿ), ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಸೆನೆಟ್ ಸದಸ್ಯ ಪ್ರೊ.ಶಬ್ಬೀರ್ ಮುಸ್ತಾಫಾ, ಅಂಜುಮನೆ ಇತ್ತೆಹಾದ್–ಎ–ಇಸ್ಲಾಂ ಕಾರ್ಯದರ್ಶಿ ಸೈಯದ್ ಸಕೀ ಅಹಮದ್, ಎಂ.ಎಫ್.ಕಲೀಂ ಮತ್ತಿತರರು ಉಪಸ್ಥಿತರಿದ್ದರು.

ಮೋಹನ್ ಭಾಗವತ್ ದೇಶದ್ರೋಹ ಎಸಗಿದ್ದಾರೆ, ಭಾರತೀಯರ ಅವಮಾನಿಸಿದ್ದಾರೆ: ರಾಹುಲ್ ಗಾಂಧಿ

ನವದೆಹಲಿ: ಭಾರತಕ್ಕೆ ನಿಜವಾದ ಸ್ವಾತಂತ್ರ್ಯ 1947 ರಲ್ಲಿ ಸಿಕ್ಕಿಲ್ಲ, ರಾಮ ಮಂದಿರ ಪ್ರತಿಷ್ಠಾಪನಾ ದಿನದಂದು ಸಿಕ್ಕಿತು ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಹೇಳಿಕೆಗೆ ಕಾಂಗ್ರೆಸ್ ಬುಧವಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.



ಮೋಹನ್ ಭಾಗವತ್

ಮೋಹನ್ ಭಾಗವತ್ ಅವರ ಹೇಳಿಕೆ ಎಲ್ಲಾ ಭಾರತೀಯರಿಗೆ ಮಾಡಿದ ಅವಮಾನ ಎಂದು ಟೀಕಿಸಿದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಆರ್‌ಎಸ್‌ಎಸ್ ಮುಖ್ಯಸ್ಥರು ದೇಶದ್ರೋಹ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇಂದು ಕಾಂಗ್ರೆಸ್‌ನ ನೂತನ ಪ್ರಧಾನ ಕಚೇರಿ, ಇಂದಿರಾ ಗಾಂಧಿ ಭವನ ಉದ್ಘಾಟನೆಯ ನಂತರ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಕಾಂಗ್ರೆಸ್ ಅಧ್ಯಕ್ಷ, ಜನರು ಅಂತಹ ಅಸಂಬದ್ಧ ಮಾತುಗಳನ್ನು ಕೇಳುವುದನ್ನು ನಿಲ್ಲಿಸುವ ಸಮಯ ಬಂದಿದೆ ಎಂದರು.

ಮೋಹನ್ ಭಾಗವತ್ ಅವರು ಸ್ವಾತಂತ್ರ್ಯ ಚಳುವಳಿ ಮತ್ತು ಸಂವಿಧಾನದ ಬಗ್ಗೆ ತಮ್ಮ ಅಭಿಪ್ರಾಯವನ್ನು ದೇಶಕ್ಕೆ ಹೇಳುವ ಧೈರ್ಯ ಹೊಂದಿದ್ದಾರೆ. ಅವರು ನಿನ್ನೆ ಹೇಳಿದ್ದು ದೇಶದ್ರೋಹ. ಏಕೆಂದರೆ ಅವರು ಸಂವಿಧಾನ ಅಮಾನ್ಯವಾಗಿದೆ ಮತ್ತು ಬ್ರಿಟಿಷರ ವಿರುದ್ಧದ ಹೋರಾಟವೂ ಅಮಾನ್ಯ ಎಂದು ಹೇಳುತ್ತಿದ್ದಾರೆ ಎಂದರು.

ಇದನ್ನು ಸಾರ್ವಜನಿಕವಾಗಿ ಹೇಳುವ ದಿಟ್ಟತನ ಅವರಿಗೆ ಇದೆ. ಬೇರೆ ಯಾವುದೇ ದೇಶದಲ್ಲಿ ಈ ರೀತಿ ಹೇಳಿದ್ದರೆ ಅವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗುತ್ತದೆ. ಇದು ಸತ್ಯ ಎಂದು ರಾಹುಲ್ ಗಾಂಧಿ ಹೇಳಿದರು.

ಇದೇ ವೇಳೆ, ಲೋಕಸಭಾ ಚುನಾವಣೆಯಿಂದ ವಿಧಾನಸಭಾ ಚುನಾವಣೆಯವರೆಗೆ ಮಹಾರಾಷ್ಟ್ರದಲ್ಲಿ ಮತದಾರರ ಸಂಖ್ಯೆಯಲ್ಲಿ ಭಾರಿ ಹೆಚ್ಚಳದ ಬಗ್ಗೆ ಮಾಹಿತಿ ನೀಡಲು ನಿರಾಕರಿಸಿದ ಚುನಾವಣಾ ಆಯೋಗವನ್ನು ರಾಹುಲ್ ಗಾಂಧಿ ತೀವ್ರ ತರಾಟೆಗೆ ತೆಗೆದುಕೊಂಡರು.

ಇದು ಯಾವ ಉದ್ದೇಶವನ್ನು ಪೂರೈಸುತ್ತದೆ, ಇದು ಚುನಾವಣಾ ಆಯೋಗಕ್ಕೆ ಏಕೆ ಹಾನಿ ಮಾಡುತ್ತದೆ. ಅವರು ನಮಗೆ ಪಟ್ಟಿಯನ್ನು ಏಕೆ ನೀಡುತ್ತಿಲ್ಲ. ಚುನಾವಣೆಗಳಲ್ಲಿ ಪಾರದರ್ಶಕತೆ ಖಚಿತಪಡಿಸಿಕೊಳ್ಳುವುದು ಚುನಾವಣಾ ಆಯೋಗದ ಕರ್ತವ್ಯ. ಮಹಾರಾಷ್ಟ್ರದಲ್ಲಿ ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮತದಾರರ ಸಂಖ್ಯೆಯಲ್ಲಿ ಒಂದು ಕೋಟಿ ಹೆಚ್ಚಳವಾಗಿದ್ದರೆ, ಅದು ಹೇಗೆ ಸಾಧ್ಯ ಎಂಬುದನ್ನು ನಿಖರವಾಗಿ ನಮಗೆ ತೋರಿಸುವುದು ಚುನಾವಣಾ ಆಯೋಗದ ಕರ್ತವ್ಯ ಮತ್ತು ಪವಿತ್ರ ಜವಾಬ್ದಾರಿಯಾಗಿದೆ. ಆದರೆ ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಗಂಭೀರ ಸಮಸ್ಯೆ ಇದೆ ಎಂದು ರಾಹುಲ್ ಗಾಂಧಿ ಹೇಳಿದರು.



ರಾಹುಲ್‌ಗಾಂಧಿ



ಮಲ್ಲಿಕಾರ್ಜುನ ಖರ್ಗೆ

ಇನ್ನು ಭಾಗವತ್ ಅವರ ಹೇಳಿಕೆಯನ್ನು ಖಂಡಿಸಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅವರು ಇಂತಹ ಹೇಳಿಕೆ ನೀಡುವುದನ್ನು ಮುಂದುವರಿಸಿದರೆ ದೇಶದಲ್ಲಿ ತಿರುಗಾಡುವುದು ಕಷ್ಟಕರವಾಗುತ್ತದೆ ಎಂದು ಎಚ್ಚರಿಸಿದರು.

ಸ್ವಾತಂತ್ರ್ಯದೊಂದಿಗೆ ಯಾವುದೇ ಸಂಬಂಧವಿಲ್ಲದ ಮತ್ತು ಅದಕ್ಕಾಗಿ ಹೋರಾಡದ ಜನರು ಇಂತಹ ಹೇಳಿಕೆ ನೀಡುತ್ತಿದ್ದಾರೆಂದು ನಿಮಗೆ ಗೊತ್ತು. ನಾನು ಆರ್‌ಎಸ್‌ಎಸ್ ಮುಖ್ಯಸ್ಥರ ಹೇಳಿಕೆಯನ್ನು ಓದಿದ್ದೇನೆ. ರಾಮಮಂದಿರ ಉದ್ಘಾಟನೆಯೊಂದಿಗೆ ನಿಜವಾದ ಸ್ವಾತಂತ್ರ್ಯ ಸಿಕ್ಕಿತು ಎಂದು ಅವರು ಹೇಳಿದರು. ಅವರು(ಪ್ರಧಾನಿ) ನರೇಂದ್ರ ಮೋದಿ ಅವರೊಂದಿಗೆ ದೇವಾಲಯವನ್ನು ಉದ್ಘಾಟಿಸಿದ್ದರು. 2014 ರಲ್ಲಿ ತಾವು ಪ್ರಧಾನಿಯಾದಾಗ ಸ್ವಾತಂತ್ರ್ಯ ಸಿಕ್ಕಿತು ಎಂದು ಮೋದಿ ನಂಬಿದ್ದಾರೆ ಎಂದರು.

ಮೋಹನ್ ಭಾಗವತ್ ಹೇಳಿದ್ದೇನು?: ಅಯೋಧ್ಯೆಯಲ್ಲಿ ರಾಮಮಂದಿರದ ಉದ್ಘಾಟನೆಯ ದಿನವನ್ನು 'ಪ್ರತಿಷ್ಠಾ ದ್ವಾದಶಿ'ಯಾಗಿ ಆಚರಿಸಬೇಕು. ಏಕೆಂದರೆ ಹಲವಾರು ಶತಮಾನಗಳಿಂದ ಶತ್ರುಗಳ ದಾಳಿ ಎದುರಿಸಿದ ಭಾರತಕ್ಕೆ ಬಾಲರಾಮನ ಪ್ರತಿಷ್ಠಾಪನೆಯ ದಿನ 'ನಿಜವಾದ ಸಾತಂತ್ರ್ಯ' ಲಭಿಸಿತು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದರು. ಇಂದೋರ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರಿಗೆ 'ರಾಷ್ಟ್ರೀಯ ದೇವಿ ಅಹಿಲ್ಯಾ ಪ್ರಶಸ್ತಿ' ಪ್ರದಾನ ಮಾಡಿ ಅವರು ಈ ಮಾತುಗಳನ್ನಾಡಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ರಾತ್ರಿ ಲೇಟಾಗಿ ಹೋಗಿದ್ದಕ್ಕೆ ನನ್ನ ಹೆಂಡತಿ ಬಾಗಿಲು ತೆಗೆಯಲಿಲ್ಲ. ರಸ್ತೆಯಲ್ಲಿ ಮಲ್ಕೊಂಡೆ.

ತಿಮ್ಮ : ಮತ್ತೆ ಬೆಳಗಾದ ಮೇಲಾದ್ರೂ ತೆಗೆದ್ಲಾ!

ಗುಂಡ : ಕುಡಿದಿದ್ದು ಇಳಿದಿತ್ತು. ನಂಗೆ ಮದ್ವೇನೇ ಆಗಿಲ್ಲ ಅನ್ನೋದು ಅರಿವಾಯ್ತು. ಕೀ ನನ್ನ ಜೇಬಲ್ಲೇ ಇತ್ತು!!

ಮೈಸೂರು ಮಿತ್ರ

ಗುರುವಾರ, 16 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ. –ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತು ಮಕ್ಕಳ ತಾಯಿ ದಾರಿಯಲ್ಲಿ ಸಿಕ್ಕಿದ್ದನ್ನು ತಿಂದಂತೆ.

ನಿಮ್ಮ ಪತ್ರಗಳು

■ ಪಾರ್ಥೇನಿಯಂ ಬೆಳೆಸೋದಕ್ಕೆ ಮಾಡಿರುವ ಮಕ್ಕಳ ಆಟದ ಪಾರ್ಕ್

ಮಾನ್ಯರೆ,



ಮೈಸೂರಿನ ವಾರ್ಡ್ 51ಕ್ಕೆ ಸೇರುವ ಹೊಸದಾಗಿ ಮಾಡಿರುವ ಮಕ್ಕಳ ಆಟದ ಪಾರ್ಕ್ ಪತ್ರಕರ್ತರ ಭವನ ಹಾಗೂ ಅಕ್ಕನ ಬಳಗ ಶಾಲೆಯ ಪಕ್ಕದಲ್ಲಿದೆ. ಆದರೆ ಇಲ್ಲಿ ಪಾರ್ಥೇನಿಯಂ ಗಿಡಗಂಟಿಗಳನ್ನು ನಗರ ಪಾಲಿಕೆ ಅಧಿಕಾರಿಗಳು ಬೆಳೆಸುತ್ತಿದ್ದಾರೆ. ಲಕ್ಷಾಟ್ಟಲೇ ಖರ್ಚು ಮಾಡಿ ಮಕ್ಕಳ ಆಟದ ಪಾರ್ಕ್ ಮಾಡಿದ್ದ ಉದ್ದೇಶ ಸಾರ್ಥಕ ಆಗಿದೆಯೇ!? ಪಾರ್ಕ್ ಪ್ರವೇಶ ದ್ವಾರಗಳ ಬಳಿ ಮಣ್ಣು ಗುಡ್ಡೆ ತ್ಯಾಜ್ಯಗಳನ್ನು ತೆಗೆಯದೆ ಹಾಗೇ ಬಿಟ್ಟಿದ್ದಾರೆ! ಸದ್ಯಕ್ಕೆ ಚುನಾಯಿತ ಕಾರ್ಪೊರೇಟರ್‌ಗಳು ಈ ವಾರ್ಡ್ 51ಕ್ಕೆ ಇಲ್ಲದಿದ್ದರೂ ಹತ್ತಿರದಲ್ಲೇ ವಾಸ ಮಾಡುತ್ತಿರುವ ಮಾಜಿ ಕಾರ್ಪೊರೇಟರ್‌ಗಳು ಪಾರ್ಕ್ ಸ್ಥಿತಿಗತಿಗಳನ್ನು ಗಮನಿಸಿ ನಗರಪಾಲಿಕೆ ಅಧಿಕಾರಿಗಳಿಂದ ಪಾರ್ಕ್ ಅನ್ನು ಸ್ವಚ್ಛಗೊಳಿಸುವ ಜನಸೇವಾ ಕೆಲಸ ಯಾಕೆ ಮಾಡುತ್ತಿಲ್ಲ!? ದಟ್ಟವಾಗಿ ಬೆಳೆದಿರುವ ಪಾರ್ಥೇನಿಯಂ ಗಿಡಗಂಟಿಗಳು ಪಕ್ಕದ ಅಕ್ಕನ ಬಳಗ ಶಾಲಾ ಮಕ್ಕಳ ಹಾಗೂ ಪಕ್ಕದ ನಿವಾಸಿಗಳ ಆರೋಗ್ಯದ ಮೇಲೆ ಕೆಟ್ಟ ಪ್ರಭಾವ ಬೀರುವುದಿಲ್ಲವೇ!? ಪಕ್ಕದ ಪತ್ರಕರ್ತರ ಭವನದಲ್ಲಿ ಪದೇ ಪದೆ ಪತ್ರಿಕಾಗೋಷ್ಠಿಗೆ ಬರುವ ರಾಜಕೀಯ ನಾಯಕರು ಈ ಮಕ್ಕಳ ಆಟದ ಪಾರ್ಕ್ ದುಃಸ್ಥಿತಿ ಕಣ್ಣಾರೆ ನೋಡಿ ಸಮಸ್ಯೆಯನ್ನು ಬಗೆಹರಿಸಬೇಕಾಗಿ ಮನವಿ.

–ಎಂ.ಎಸ್.ಎಸ್.ಶರ್ಮ, ಸಾಮಾಜಿಕ ಚಿಂತಕ–ಶಿಕ್ಷಣ ತಜ್ಞ, ಮೈಸೂರು.

■ ಎಲ್ಲೆಂದರಲ್ಲಿ ಫ್ಲೆಕ್ಸ್ ಹಾಕುವುದು ಮೈಸೂರು ಸೌಂದರ್ಯಕ್ಕೆ ಮಾರಕ

ಮಾನ್ಯರೆ,

ಮೈಸೂರು ನಗರವು ಪ್ರಥಮ ಸ್ವಚ್ಛ ನಗರ ಎಂಬ ಖ್ಯಾತಿ ಪಡೆದಿದ್ದು, ಮತ್ತೊಮ್ಮೆ ಈ ಹಿರಿಮೆಯನ್ನು ಮುಡಿಗೇರಿಸಿಕೊಳ್ಳುವ ನಿಟ್ಟಿನಲ್ಲಿ ನಗರ ಸ್ವಚ್ಛತೆಯನ್ನು ವೈಜ್ಞಾನಿಕವಾಗಿ ಹಾಗೂ ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ಆದರೆ ಇದಕ್ಕೆ ವಿರುದ್ಧವಾಗಿ ಸ್ಪಾನ್ಸರ್‌ಗಳನ್ನು ಹುಡುಕಿ ಅವರ ಜಾಹೀರಾತು ಅಡಿಯಲ್ಲಿ ರಸ್ತೆ ಸುರಕ್ಷತೆಯ ನೆಪದಲ್ಲಿ ಮೈಸೂರು ಸಂಚಾರ ಪೊಲೀಸರು, ಸ್ಪಾನ್ಸರ್ ನೀಡಿದ ಜಾಹೀರಾತುಗಳಿಗೆ ರಸ್ತೆ ಬಳಕೆದಾರರ ಮಾಹಿತಿಗಾಗಿ ಎಂಬ ನೆಪದಲ್ಲಿ ಮಹಾನಗರ ಪಾಲಿಕೆಗೆ ಯಾವುದೇ ತೆರಿಗೆ ಪಾವತಿಸದೇ, ಅನುಮತಿ ಪಡೆಯದೆ ಎಲ್ಲೆಂದರಲ್ಲಿ ಫ್ಲೆಕ್ಸ್ ಅಳವಡಿಸಿರುವುದು 2024ರ ಸಾಲಿನಲ್ಲಿ ಕಂಡು ಬಂದಿದೆ. ಇದು ನಗರದ ಸೌಂದರ್ಯಕ್ಕೆ ಮಾರಕ. ಕರ್ನಾಟಕ ಪೌರ ನಿಗಮಗಳ ಕಾಯ್ದೆ–1976ರ ಕಲಂ 135, 136, 137 ಮತ್ತು 138ರನ್ವಯ ನಗರ ಪ್ರದೇಶಗಳಲ್ಲಿ ಎಲ್ಲೆಂದರಲ್ಲಿ ಫ್ಲೆಕ್ಸ್, ಬ್ಯಾನರ್‌ಗಳನ್ನು ಹಾಕುವುದು ನಿಯಮ ಉಲ್ಲಂಘನೆ ಆಗುತ್ತದೆ. The Karnataka Open Places (Prevention of Disfigurement) Act-1981ರ ಕಾಯ್ದೆ ಕಲಂ 3ರನ್ವಯ ಫ್ಲೆಕ್ಸ್ ಹಾಕಿ, ಸಾರ್ವಜನಿಕ ಪ್ರದೇಶಗಳನ್ನು ವಿರೂಪಗೊಳಿಸುವುದು ಉಲ್ಲಂಘನೆ ಹಾಗೂ ಶಿಕ್ಷಾರ್ಹ ಅಪರಾಧವಾಗುತ್ತದೆ. ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976ರ ಹಾಗೂ ಬೈಲಾ ನಿಯಮಗಳಡಿ ಜಾಹೀರಾತುಗಳಿಗೆ ತೆರಿಗೆ ವಿನಾಯಿತಿ ಇಲ್ಲವೆಂಬ ಅಂಶವನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ನೀಡಿದ ದಾಖಲೆಗಳು ಸ್ಪಷ್ಟಪಡಿಸಿವೆ. ಕರ್ನಾಟಕ ರಾಜ್ಯ ಹೈಕೋರ್ಟ್ ಸಹ ಫ್ಲೆಕ್ಸ್ ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಆದೇಶ ಪಾಲಿಸಲು ಕೋರಲಾಗಿದೆ.

–ಶಂಕರೇಗೌಡ, ನಿವೃತ್ತ ಎಸ್ಪಿ, ಮೈಸೂರು, ದಿನಾಂಕ: 15–1–2025

■ ಯಾರು ಹಿತವರು?

ಮಾನ್ಯರೆ,

ಸ್ವಾಮೀಜಿಯ ಪಕ್ಕ ಕುಳಿತಿದ್ದ ವಿಜಯನಗರದ ಜಿಲ್ಲಾಧಿಕಾರಿಯನ್ನು ಗದರಿಸಿ ಅವರೊಂದಿಗೆ ಕಠೋರವಾಗಿ ವರ್ತಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕೊಲೆ ಸುಲಿಗೆಗಳಂತಹ ಸರಣಿ ಅಪರಾಧ ಎಸಗಿದ್ದ ನಕ್ಸಲರೊಂದಿಗೆ ಇದೇ ಮುಖ್ಯಮಂತ್ರಿಗಳು ಕೈ ಕುಲುಕುತ್ತಾ,ಬೊಕ್ಕೆ–ಉಡುಗೊರೆ ನೀಡಿ ಸೌಜನ್ಯದಿಂದ ನಡೆದುಕೊಂಡಿದ್ದೂ ಸುದ್ದಿಯಾಗಿತ್ತು. ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿ ಹಾಗೂ ನಕ್ಸಲರೊಂದಿಗೆ ನಡೆದುಕೊಂಡ ಎರಡೂ ರೀತಿಗಳನ್ನು ಗಮನಿಸಿದಾಗ ಈ ಸೂಕ್ತಿ ನೆನಪಾಯಿತು. ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ?

ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತು ಮರ್ಹತಿ?

'ಲೋಕೋತ್ತರರಾದವರ ಮನಸ್ಸು ವಜ್ರಕ್ಕಿಂತಲೂ ಕಠಿಣವಾಗಿರುವುದು; ಮತ್ತೊಮ್ಮೆ ಹೂವಿಗಿಂತಲೂ ಮೃದುವಾಗಿರುವುದು. ಇಂಥ ಮನಸ್ಸನ್ನು ತಿಳಿಯಬಲ್ಲವರು ಯಾರು ತಾನೆ ಇದ್ದಾರು?'

ಯಾರು ಹಿತವರು ನಮಗೆ?

ನಕ್ಸಲರೋ... ಜಿಲ್ಲಾಧಿಕಾರಿಗಳೋ?

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

■ ವಿಚಾರದ್ವಯ

ಮಾನ್ಯರೆ,

1. **ಪರಂಪರೆ :** ಖ್ಯಾತ ಲೇಖಕ ಪ್ರೊ. ಅರವಿಂದ ಮಾಲಗತ್ತಿಯವರ ಒಂದು ಹೇಳಿಕೆ, ನನ್ನ ಬಗೆಗೆ : "ಸಿಪಿಕೆ ಅವರ ಕೃತಿಗಳನ್ನು ಓದುವುದೆಂದರೆ, ಒಂದು ಪರಂಪರೆಯನ್ನು ಓದಿದಂತೆ!" ಇದು ನನಗೇ ಹೊಳೆಯದಿದ್ದ ವಿಚಾರ. ಬಗೆ ಬಗೆಯಾಗಿ ನನ್ನನ್ನು ಹೊಗಳಿರುವವರು ಯಾರೂ ಈ ಅಂಶವನ್ನು ಉಲ್ಲೇಖಿಸಿಲ್ಲ. ವಾಸ್ತವವಾಗಿ, ಪರಮ ಪ್ರಾಶಸ್ತ್ಯ ಸಲ್ಲಬೇಕಾದ್ದು ರತ್ನೋದಾರ ಪರಂಪರೆಗೆ; ಸಂಕುಚಿತ ಪಂಥ, ಪಥಗಳಿಗಲ್ಲ!

2. **ಚಿಹ್ನೆ:** ಪತ್ರಿಕೆಗಳ ಪಾಲಿಗೆ ನಾನೀಗ 'ಹಿರಿಯ ಸಾಹಿತಿ'ಯಾಗಿ, ಒಂದು ಊರುಗೋಲು ಹಿಡಿದು ನಡೆಯುತ್ತೇನೆ! ಅದು (ವಯೋ) ದೌರ್ಬಲ್ಯಕ್ಕಿಂತ ಮಿಗಿಲಾಗಿ 'ಹಿರಿ'ತನದ ಚಿಹ್ನೆ. ಹಾಗೆ ನೋಡಿದರೆ, ಜೀವನ ನಾನಾ 'ಚಿಹ್ನೆ'ಗಳ –ಚಿನ್ನದ ಚಿಹ್ನೆಗಳ ನಿಡು ಸರಣಿ!

ಓಟ!

ಮಂಡ್ಯದಲ್ಲಿ "ಕನ್ನಡಕ್ಕಾಗಿ ಓಟ' (ಸಾಲದ್ದಕ್ಕೆ ಬಾಡೂಟ?). ಅದೇನೋ ಒಳ್ಳೆಯದೇ. ಆದರೆ ವಿಷಾದಕರವಾದದ್ದು ಇಡೀ ನಾಡಿನಲ್ಲಿ ಬಹುಮಂದಿಯ 'ಕನ್ನಡದಿಂದ (From) ಓಟ, ಇಂಗ್ಲಿಷಿನತ್ತ!

–ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.




ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಭಾರತದ ಸ್ವಾತಂತ್ರ್ಯಕ್ಕೆ ಮುನ್ನುಡಿಯಾದ ಅಂಡಮಾನ್ ದ್ವೀಪ ಸಮೂಹ



ನೇತಾಜಿಯವರು 1943ರಲ್ಲಿ ಜಿಂಖಾನಾ ಗ್ರೌಂಡ್‌ನಲ್ಲಿ ತ್ರಿವರ್ಣ ಧ್ವಜ ಹಾರಿಸಿದ ಸಂದರ್ಭ.



ಅಂಡಮಾನ್–ನಿಕೋಬಾರ್ ದ್ವೀಪ ಸಮೂಹ.

ಪ್ರತಿ ವರ್ಷ ಆಗಸ್ಟ್ 15ರಂದು ನಾವು ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತೇವೆ. ದೇಶಾದ್ಯಂತ ಆ ದಿನ ತ್ರಿವರ್ಣ ಧ್ವಜವು ಹಾರಾಡುತ್ತದೆ. ದೆಹಲಿಯ ಕೆಂಪುಕೋಟೆಯಿಂದ ದೇಶದ ಪ್ರತಿ ಕುಗ್ರಾಮದಲ್ಲೂ ಸ್ವಾತಂತ್ರ್ಯ ದಿನಾಚರಣೆಯನ್ನು ಉತ್ಸಾಹ, ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಭಾರತೀಯರು ಭಾರೀ ಪ್ರಮಾಣದಲ್ಲಿ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಟ ಪ್ರಾರಂಭಿಸಿದರು. ಭಾರತೀಯರ ಸ್ವಾತಂತ್ರ್ಯ ಹೋರಾಟ ಮೂಲ ಭೂಭಾಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಮುಖ್ಯ ಭೂಭಾಗದಿಂದ ಒಂದು ಸಾವಿರ ಕಿ.ಮೀಗೂ ಹೆಚ್ಚು ದೂರವಿದ್ದ ಅಂಡಮಾನ್–ನಿಕೋಬಾರ್ ದ್ವೀಪ ಸಮೂಹದಲ್ಲಿನ ಸೆಲ್ಯೂಲರ್ ಜೈಲಿನಲ್ಲಿದ್ದ ಕ್ರಾಂತಿಕಾರಿಗಳು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕ್ಷಾತ್ರ ತೇಜಸ್ಸು ನೀಡಿದರು. ಶಕ್ತಿಯನ್ನು ತುಂಬಿದರು. ಕೆಲವು ವಿದೇಶಗಳಲ್ಲೂ ಭಾರತೀಯ ಸ್ವಾತಂತ್ರ್ಯ ಹೋರಾಟ ಆರಂಭವಾಗಿತ್ತು.

ಮೇಡಂ ಕಾಮಾರವರು ಮೊದಲ ಬಾರಿ ದಿ. 22.08.1907ರಲ್ಲಿ ಜರ್ಮನಿಯ ಸ್ಟುಟ್‌ಗರ್ಟ್‌ನಲ್ಲಿ ಭಾರತದ ರಾಷ್ಟ್ರೀಯ ಧ್ವಜದ ಪ್ರಥಮ ಮಾದರಿಯನ್ನು ಹಾರಿಸಿದರು. ಇಂಗ್ಲೆಂಡ್‌ಗೆ ಬರುತ್ತಿದ್ದ ಭಾರತೀಯ ವಿದ್ಯಾರ್ಥಿಗಳಿಗಾಗಿ ಗುಜರಾತ್‌ನ ಶ್ಯಾಮಜಿ ಕೃಷ್ಣವರ್ಮರವರು ಇಂಡಿಯಾ ಹೌಸ್ ಎಂಬ ಹಾಸ್ಟೆಲ್ ಸ್ಥಾಪಿಸಿದರು. 1907ರಲ್ಲಿ ಶ್ಯಾಮಜೀಯವರು ಪ್ಯಾರಿಸ್‌ಗೆ ತೆರಳಿ ಅಲ್ಲಿ ಇಂಡಿಯನ್ ಹೋಂ ರೂಲ್ ಸೊಸೈಟಿಯ ಮೂಲಕ ಭಾರತದಲ್ಲಿನ ಬ್ರಿಟಿಷ್ ಆಡಳಿತದ ವಿರುದ್ಧ ಕಟುವಾದ ಟೀಕೆಗಳನ್ನು ಮಾಡಲಾರಂಭಿಸಿದರು. ಜಲಿಯನ್ ವಾಲಾಭಾಗ್ ಹತ್ಯಾಕಾಂಡದ ಪಾತಕಿ ಮೈಕೆಲ್–ಓ–ಡೈಯರ್‌ನನ್ನು ಲಂಡನ್‌ನಲ್ಲಿ ಗದರ್ ಪಕ್ಷದ ಸರ್ದಾರ್ ಉಧಮ್ ಸಿಂಗ್ ಗುಂಡಿಟ್ಟು ಕೊಂದು ಸೇಡು ತೀರಿಸಿಕೊಳ್ಳುತ್ತಾರೆ ಹಾಗೂ ದಿ. 31.07.1940ರಂದು ಗಲ್ಲಿಗೇರುತ್ತಾರೆ. ವೀರ ಸಾವರ್ಕರ್ ಪ್ರೇರಣೆಯಿಂದ ಪ್ರಭಾವಿತನಾದ ಶೋಕಿಲಾಲ್ ಎನಿಸಿದ್ದ ಮದನ್‌ಲಾಲ್ ಧಿಂಗ್ರಾ ಕ್ರಾಂತಿಕಾರಿಯಾಗುತ್ತಾನೆ. ಲಂಡನ್‌ನಲ್ಲಿ ಭಾರತೀಯ ವಿದ್ಯಾರ್ಥಿಯಾಗಿದ್ದ ಧಿಂಗ್ರಾ ಬ್ರಿಟಿಷ್ ಅಧಿಕಾರಿ ಸರ್ ವಿಲಿಯಂ ಕರ್ಝನ್ ವ್ಯಾಲಿಯನ್ನು ದಿ.01.07.1909ರಂದು ಗುಂಡಿಟ್ಟು ಹತ್ಯೆ ಮಾಡುತ್ತಾನೆ. ಆನಂತರ ಲಂಡನ್ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ನ್ಯಾಯಾಧೀಶರು ಮರಣದಂಡನೆಯ ತೀರ್ಪು ಪ್ರಕಟಿಸುತ್ತಾರೆ. ತೀರ್ಪಿನ ನಂತರ ಧಿಂಗ್ರಾ 'ನನ್ನ ದೇಶಕ್ಕಾಗಿ ನನ್ನ ಪ್ರಾಣವನ್ನು ಅರ್ಪಿಸುವ ಗೌರವವನ್ನು ಹೊಂದಲು ನನಗೆ ಹೆಮ್ಮೆ ಎನಿಸುತ್ತದೆ. ಆದರೆ ನೆನಪಿಡಿ ಮುಂದಿನ ದಿನಗಳಲ್ಲಿ ನಾವು ನಮ್ಮ ಸಮಯವನ್ನು ಹೊಂದಿರುತ್ತೇವೆ ಎಂದು ಲಂಡನ್‌ನಲ್ಲಿ ಗುಡುಗುತ್ತಾನೆ. ಧಿಂಗ್ರಾ ದಿ. 17.08.1909ರಂದು ಲಂಡನ್‌ನ ಜೈಲಿನಲ್ಲಿ ತನ್ನ ಕೊರಳನ್ನು ನೇಣಿನ ಕುಣಿಕೆಗೆ ಒಡ್ಡಿ ಪ್ರಾಣಾರ್ಪಣೆ ಮಾಡುತ್ತಾನೆ.

> “ ಪೋರ್ಟ್‌ಬ್ಲೇರ್‌ನಲ್ಲಿಂದು 150 ಅಡಿ ಎತ್ತರದಲ್ಲಿ ಹಾರಾಡುತ್ತಿರುವ ತಿರಂಗಾವು ಭಾರತದ ಗೌರವ, ಸಾರ್ವಭೌಮತ್ವದ ಸಂಕೇತವಾಗಿದೆ. ಈ ಧ್ವಜವು ಭಾರತದ ಭವ್ಯ ಭವಿಷ್ಯವನ್ನು ರೂಪಿಸಲು ಬೇಕಾದ ಆತ್ಮವಿಶ್ವಾಸ, ಭಾರತೀಯರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಬಹು ಆಯಾಮದ ಹೋರಾಟವನ್ನು ಪರಿಚಯಿಸುತ್ತದೆ. ಈ ಮಹೋನ್ನತ ಘಟನೆಯನ್ನು ಪೀಳಿಗೆಯಿಂದ ಪೀಳಿಗೆಗೆ ತಿಳಿಸಬೇಕಿದೆ.



ಈ ರೀತಿ ವೀರ ಸಾವರ್ಕರ್, ಧಿಂಗ್ರಾ, ವಿಧಮ್‌ಸಿಂಗ್, ಪಾಂಡುರಂಗ ಸದಾಶಿವ ಬಾಪಟ್, ಮೇಡಂ ಕಾಮಾ ಮೊದಲಾದ ಅಸಂಖ್ಯಾ ಕ್ರಾಂತಿಕಾರಿಗಳು ವಿದೇಶಗಳಲ್ಲಿ ಹಚ್ಚಿದ ಕ್ರಾಂತಿಯ ಕಿಡಿ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಶಕ್ತಿ, ಹುರುಪು ನೀಡಿತ್ತು. ಸೂರ್ಯ ಮುಳುಗದ ಸಾಮ್ರಾಜ್ಯದೊಳಗೆ ನುಗ್ಗಿ ತಮ್ಮ ಅಧಿಕಾರಿಗಳನ್ನು ಹತ್ಯೆಗೈಯ್ಯುವ ಭಾರತೀಯ ಕ್ರಾಂತಿಕಾರಿಗಳ ಪರಾಕ್ರಮ, ಸಾವನ್ನು ಧಿಕ್ಕರಿಸುವ ಸಾಮರ್ಥ್ಯದಿಂದ ಬ್ರಿಟಿಷ್ ಆಳರಸರು ಭಯಭೀತರಾಗಿದ್ದರು. ಬೆದರಿದ ಬ್ರಿಟಿಷರು ಕ್ರಾಂತಿಕಾರಿಗಳ ಮನೋಬಲ ಕುಗ್ಗಿಸಲು, ದಮನ ನೀತಿ ಅಳವಡಿಸಿದರು. ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಕ್ರಾಂತಿ ಹೂಡುತ್ತಿದ್ದ ನೂರಾರು ಕ್ರಾಂತಿಕಾರಿಗಳನ್ನು ಭಾರತದ ಪ್ರಧಾನ ಭೂ ಭಾಗದಿಂದ ಸಾವಿರಾರು ಕಿ.ಮೀ. ದೂರವಿದ್ದ ಅಂಡಮಾನ್ ದ್ವೀಪ ಸಮೂಹದಲ್ಲಿದ್ದ ಸೆಲ್ಯೂಲರ್ ಜೈಲಿಗೆ ತರಲಾಯಿತು. ಈ ಜೈಲುಗಳಲ್ಲಿ ಕ್ರಾಂತಿಕಾರಿಗಳಿಗೆ ಭೀಭತ್ಸ, ಭಯಾನಕ ಕಠಿಣ ಶಿಕ್ಷೆ ವಿಧಿಸಲಾಯಿತು. ಸೆಲ್ಯೂಲರ್ ಜೈಲಿನಲ್ಲಿ ಬ್ರಿಟಿಷ್ ಜೈಲರುಗಳು ಭಾರತೀಯ ಕ್ರಾಂತಿಕಾರಿಗಳ ಮೇಲೆ ಅಮಾನುಷ ಕ್ರೌರ್ಯ ನಡೆಸಿದರು. ಮಾನವ ಹಕ್ಕು, ಸಭ್ಯತೆಗಳ ಎಲ್ಲ ಎಲ್ಲೆಯ ಮೀರಿ ಚಿತ್ರಹಿಂಸೆ ನೀಡಲಾಯಿತು. ಕ್ರಾಂತಿಕಾರಿಗಳ ಕಾಲು, ಮೊಣಕಾಲುಗಳಿಗೆ ಕಬ್ಬಿಣದ ಸರಳು, ಅಲ್ಲಿಂದ ಸೊಂಟಕ್ಕೆ ಮತ್ತೆ ಬೆನ್ನ ಹಿಂದೆ ಮುಂದೆ ಬಾಗಿಸದಂತೆ ಕಬ್ಬಿಣದ ಸರಳುಗಳಿಂದ ಬಂಧಿಸಿ, ಎರಡೂ ಕೈಗಳಿಗೆ ಸಂಕೋಲೆಗಳನ್ನು ಹಾಕಿ ಕೈಗಳನ್ನು ಮೇಲಕ್ಕೆ ತೂಗಿಸಿ ಗಂಟೆ ಗಟ್ಟಲೆ ನಿಲ್ಲುವ ಭೀಕರ ಶಿಕ್ಷೆ, ಬೆಳಗ್ಗೆ 6ರಿಂದ ಹತ್ತು ಗಂಟೆಯೊಳಗೆ ಎಣ್ಣೆ ಗಾಣದಿಂದ 30 ಪೌಂಡ್‌ನಷ್ಟು ಎಣ್ಣೆ ತೆಗೆಯುವ ಶಿಕ್ಷೆ, ಈ ರೀತಿ ಅನೇಕ ರೀತಿಯ ಕ್ರೂರ ಶಿಕ್ಷೆಗಳನ್ನು ಈ ಸೆಲ್ಯೂಲರ್ ಜೈಲಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಲಾಯಿತು. ಈ ರೀತಿ ಬ್ರಿಟಿಷ್ ಜೈಲರ್‌ಗಳು ಕ್ರೌರ್ಯ ಮೆರೆದರೂ ಕ್ರಾಂತಿ ಕಾರಿಗಳು ಕಣ್ಣೀರು ಹಾಕಲಿಲ್ಲ. ರೋದಿಸಲಿಲ್ಲ, ಚೀತ್ಕರಿಸಲಿಲ್ಲ. ಬದಲಾಗಿ ಶಿಕ್ಷೆಯನ್ನು ಎದುರಿಸುತ್ತಾ ವಂದೇ ಮಾತರಂ, ಜೈಹಿಂದ್, ಭಾರತ್ ಮಾತಾ ಕಿ ಜೈ ಎಂದು ನಿರಂತರ ಘೋಷಣೆಗಳನ್ನು ಕೂಗುತ್ತಾ ಸ್ವಾತಂತ್ರ್ಯ ದೇವಿಯ ಪಾದಕ್ಕೆ ತಮ್ಮ ಪ್ರಾಣಗಳನ್ನು ಸಮರ್ಪಿಸುತ್ತಿದ್ದರು. ಪ್ರಾಯಶಃ ಈ ಕ್ರಾಂತಿಕಾರಿಗಳ ಪರಾಕ್ರಮ, ಶೌರ್ಯ, ಬಲಿದಾನಗಳಿಂದ ಸ್ವಾತಂತ್ರ್ಯ ದೇವಿ ಪ್ರಸನ್ನಳಾಗಿದ್ದಳು. ಹೀಗಾಗಿ ಭಾರತದ ಪ್ರಧಾನ ಭೂಭಾಗ ದಾಸ್ಯದಿಂದ ಬಿಡುಗಡೆಗೊಳ್ಳುವ ನಾಲ್ಕು ವರ್ಷ ಮೊದಲೇ 1943ರಲ್ಲಿ ಅಂಡಮಾನ್ –ನಿಕೋಬಾರ್ ದ್ವೀಪಗಳು ಬ್ರಿಟಿಷರಿಂದ ಮುಕ್ತ ವಾಗಿ ಸ್ವತಂತ್ರಗೊಂಡವು.

ಅಂಡಮಾನ್ ದ್ವೀಪ ಸಮೂಹಗಳು ಸ್ವಾತಂತ್ರ್ಯಗಳಿಸಿದ್ದರ ಸುತ್ತ ಮತ್ತು ಅತ್ಯಂತ ಕುತೂಹಲಕರ ಸಂಗತಿ ಗಳಿವೆ. ದ್ವಿತೀಯ ಮಹಾಯುದ್ಧದಲ್ಲಿ ಈ ದ್ವೀಪ ಗಳನ್ನು 1942ರಲ್ಲಿ ಜಪಾನ್ ಆಕ್ರಮಿಸಿತು. ದಿ. 29.12.1943ರಲ್ಲಿ ಅಂಡಮಾನ್ ದ್ವೀಪಗಳ ಮೂರು ದಿನದ ಭೇಟಿಗಾಗಿ ನೇತಾಜಿ ಸುಭಾಷ್ ಚಂದ್ರ ಬೋಸರು ಪೋರ್ಟ್‌ಬ್ಲೇರ್‌ಗೆ ಆಗಮಿಸಿದ್ದರು. ನೇತಾಜಿಯವರೊಂದಿಗೆ ಆನಂದ ಮೋಹನ ಸಹಾಯ್, ಐಎನ್‌ಎಯ ಕ್ಯಾರಾವತ್, ಕರ್ನಲ್ ಡಿ.ಎಸ್.ರಾಜು ಕೂಡ ಆಗಮಿಸಿದ್ದರು. ನೇತಾಜಿ ಆಗಮನದ ಒಂದೆರಡು ದಿನಗಳ ಹಿಂದಷ್ಟೆ ಜಪಾನ್ ಅಧಿಕಾರಿಗಳು ದ್ವೀಪದ ಮೇಲಿನ ಸ್ವಾಮಿತ್ವವನ್ನು ಸಾಂಕೇತಿಕವಾಗಿ ನೇತಾಜಿಯವರ ಆಜಾದ್ ಹಿಂದ್ ಸರಕಾರಕ್ಕೆ ಹಸ್ತಾಂತರಿಸಿದ್ದರು. ಆದರೂ ಆ ದ್ವೀಪ 1945ರವರೆಗೆ ಜಪಾನ್‌ನ ನಿಯಂತ್ರಣದಲ್ಲಿತ್ತು. ಜಪಾನೀಯರು ದ್ವೀಪದ ಮೇಲಿನ ಸ್ವಾಮಿತ್ವವನ್ನು ನೇತಾಜಿಯವರಿಗೆ ಹಸ್ತಾಂತರಿಸಿದ್ದು, ಭಾರತೀಯರ ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿಶಾಲಿಯಾದ ಕೊಡುಗೆಯಾಗಿತ್ತು. ಇದು ಭಾರತೀಯರಿಗೆ ಬ್ರಿಟಿಷರ ವಿರುದ್ಧ ಹೋರಾಡಲು ಭಾರೀ ಪ್ರೇರಣೆ ನೀಡಿತು.

ಪ್ರಥಮ ಬಾರಿ ದಿ.29.12.1943ರಲ್ಲಿ ನೇತಾಜಿಯವರು ಪೋರ್ಟ್‌ಬ್ಲೇರ್‌ಗೆ ಆಗಮಿಸಿದ ಸಂದರ್ಭದಲ್ಲಿ ಅವರನ್ನು ಒಂದು ಸ್ವತಂತ್ರ ರಾಷ್ಟ್ರದ ನಾಯಕ ರಂತೆ ಜಪಾನಿನ ನೌಕಾಪಡೆಯ ಅಡ್ಮಿರಲ್‌ರವರು ಸ್ವಾಗತಿಸಿ ಬರಮಾಡಿಕೊಂಡಿದ್ದರು. ಈ ಸಂದರ್ಭ ದಲ್ಲಿ ಅಲ್ಲಿ ಸೇರಿದ್ದ ಭಾರತೀಯರು ಮತ್ತು ಬರ್ಮಿಯರು ನೇತಾಜಿಯವರನ್ನು ಉತ್ಸಾಹದಿಂದ ಸ್ವಾಗತಿಸಿದ್ದರು. ದ್ವೀಪಗಳು ಸ್ವತಂತ್ರಗೊಂಡ ಸಂದರ್ಭದಲ್ಲಿ ನೇತಾಜಿಯವರು ಅಂಡಮಾನ್ ಮತ್ತು ನಿಕೋಬಾರ್‌ಗಳಿಗೆ ಅನುಕ್ರಮವಾಗಿ ಶಹೀದ್ ಮತ್ತು ಸ್ವರಾಜ್ಯ ದ್ವೀಪಗಳೆಂದು ನಾಮಕರಣ ಮಾಡಿದ್ದರು. ಅಂದು ಇಂಡಿಯನ್ ನ್ಯಾಷನಲ್ ಆರ್ಮಿಯ (ಐಎನ್‌ಎ) ಜನರಲ್ ಲೋಗನಾಥನ್‌ರನ್ನು ದ್ವೀಪಗಳ ಗವರ್ನರ್ ಆಗಿ ನೇತಾಜಿಯವರು ನೇಮಿಸಿದರು.

ದಿ. 30.12.1943 ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುವರ್ಣಾಕ್ಷರಗಳಿಂದ ಬರೆದ ದಿನವಾಗಿತ್ತು. ಅಂದು ನೇತಾಜಿಯವರು ಪೋರ್ಟ್‌ಬ್ಲೇರ್‌ನ ಜಿಂಖಾನಾ ಗ್ರೌಂಡ್‌ನಲ್ಲಿ ಮೊತ್ತ ಮೊದಲ ಬಾರಿಗೆ ತ್ರಿವರ್ಣ ಧ್ವಜವನ್ನು ಹಾರಿಸಿ ಈ ದ್ವೀಪ ಸಮೂಹವು ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವತಂತ್ರಗೊಂಡಿದೆ ಎಂದು ಸಾರಿದರು. ಈ ಪ್ರದೇಶವನ್ನು ಭಾರತದ ಸ್ವತಂತ್ರಗೊಂಡ ಮೊದಲ ಸರಹದ್ದು ಎಂದು ಘೋಷಿಸಿದರು.

ಈ ಮಹತ್ವದ ಘಟನೆಯ ಅಮೃತೋತ್ಸವ ವರ್ಷವಾದ 2018ರಲ್ಲಿ ಈ ಐತಿಹಾಸಿಕ ಘಟನೆಗೆ ಗೌರವ ಸೂಚಿಸುವ ಕಾರ್ಯಕ್ರಮ ನಡೆಸಲಾಯಿತು. ದಿನಾಂಕ 30.12.2018ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ತಿರಂಗಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅಂದು ಈ ಐತಿಹಾಸಿಕ ಘಟನೆಯಾದ ಪೋರ್ಟ್‌ಬ್ಲೇರ್‌ನ ಸೌತ್ ಪಾಯಿಂಟ್ ಪ್ರದೇಶದಲ್ಲಿರುವ ಜಿಂಖಾನಾ ಗ್ರೌಂಡ್‌ನಲ್ಲಿರುವ ಫ್ಲ್ಯಾಗ್ ಪಾಯಿಂಟ್‌ನಲ್ಲಿ (Flag Point) 150 ಅಡಿ ಎತ್ತರದ ಧ್ವಜಸ್ತಂಭದಲ್ಲಿ ವಿಶಾಲವಾದ ತಿರಂಗಾ ಧ್ವಜ ಹಾರಿಸಿದರು. ಈ ಸಂದರ್ಭದಲ್ಲಿ ಜಿಂಖಾನಾ ಗ್ರೌಂಡ್‌ಗೆ ನೇತಾಜಿ ಗ್ರೌಂಡ್ ಎಂದು ನಾಮಕರಣ ಮಾಡಲಾಯಿತು. ಪೋರ್ಟ್‌ಬ್ಲೇರ್‌ನಲ್ಲಿಂದು 150 ಅಡಿ ಎತ್ತರದಲ್ಲಿ ಹಾರಾಡುತ್ತಿರುವ ತಿರಂಗಾವು ಭಾರತದ ಗೌರವ, ಸಾರ್ವಭೌಮತ್ವದ ಸಂಕೇತವಾಗಿದೆ. ಈ ಧ್ವಜವು ಭಾರತದ ಭವ್ಯ ಭವಿಷ್ಯವನ್ನು ರೂಪಿಸಲು ಬೇಕಾದ ಆತ್ಮವಿಶ್ವಾಸ ಹಾಗೂ ಭಾರತೀಯರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಬಹು ಆಯಾಮದ ಹೋರಾಟವನ್ನು ಪರಿಚಯಿಸುತ್ತದೆ. ಈ ಮಹೋನ್ನತ ಘಟನೆಯನ್ನು ಪೀಳಿಗೆಯಿಂದ ಪೀಳಿಗೆಗೆ ತಿಳಿಸಬೇಕಿದೆ.

ಸ್ವಾತಂತ್ರ್ಯ ವೀರ ಸಾವರ್ಕರ್ ಸಂದೇಶ

'ದೇಶಭಕ್ತಿಯ ಈ ವ್ರತ ನಾವು ಕಣ್ಮುಚ್ಚಿ ಸ್ವೀಕರಿಸಲಿಲ್ಲ. ಇತಿಹಾಸದ ಪ್ರಖರ ಜ್ಯೋತಿಯಲ್ಲಿ ನಾವು ಈ ದಾರಿಯನ್ನು ಹಿಡಿದೆವು. ದೃಢಪ್ರತಿಜ್ಞೆಯಿಂದ ಈ ದಿವ್ಯ ಅಗ್ನಿಯಲ್ಲಿ ಆಹುತಿ ನೀಡಲು ನಿರ್ಧರಿಸಿದೆವು. ನಾವು ಆತ್ಮ ಬಲಿದಾನದ ವ್ರತ ಸ್ವೀಕರಿಸಿದೆವು. ಮುಂದಿನ ಪೀಳಿಗೆ, ದೇಶದ ಭವಿಷ್ಯ ಸುರಕ್ಷಿತವಾಗಿರಲಿ ಎಂದು ಈ ವ್ರತ ಸ್ವೀಕರಿಸಿದೆವು'

ಸೆಲ್ಯೂಲರ್ ಜೈಲಿನಲ್ಲಿ ದಿ. 30.06.1911ರಂದು ಸಾವರ್ಕರ್ ನೀಡಿದ ಸಂದೇಶವನ್ನು ನಾವಿಂದು ಆ ಜೈಲಿನ ಪ್ರವೇಶ ದ್ವಾರದಲ್ಲಿರುವ ಫಲಕದಲ್ಲಿ ಓದಬಹುದು. ಈ ಸಂದೇಶವು ಕ್ರಾಂತಿಕಾರಿಗಳ ಹೃದಯದಲ್ಲಿ ಸ್ವಾತಂತ್ರ್ಯಕ್ಕಾಗಿ ಇದ್ದ ತುಡಿತ ಹಾಗೂ ಭವಿಷ್ಯ ಪೀಳಿಗೆಗಿರುವ ಹೊಣೆಗಾರಿಕೆಯನ್ನು ತಿಳಿಸುತ್ತದೆ.

ಸಿದ್ದರಾಮಯ್ಯರ ಕುರ್ಚಿಗೆ ಕಂಟಕ ಬಂದಾಗ ಅವರಿಗೆ ಜಾತಿ ಗಣತಿ ನೆನಪಾಗುತ್ತದೆ: ಅಶೋಕ್

ಬೆಂಗಳೂರು, ಜ. 15(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮ ಕುರ್ಚಿಗೆ ಕಂಟಕ ಬಂದಾಗಲೆಲ್ಲಾ ಜಾತಿ ಜನಗಣತಿ ನೆನಪಾಗುತ್ತದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.

ಜಾತಿ ಜನಗಣತಿಗೆ ಬಿಜೆಪಿಯಿಂದಾಗಲೀ, ವೈಯಕ್ತಿಕವಾಗಿ ನನಗಾಗಲೀ ಯಾವುದೇ ತಕರಾರು ಇಲ್ಲ, ವಿರೋಧವೂ ಇಲ್ಲ. ಬಿಜೆಪಿ ಮೂಲಸಿದ್ಧಾಂತ 'ಅಂತ್ಯೋದಯ' ಪರಿಕಲ್ಪನೆಯಾಗಿದೆ. ತಳ ಸಮುದಾಯಗಳನ್ನು ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂಬ ಬದ್ಧತೆಯಾಗಿದೆ. ಇದರ ಸಾಕಾರಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನಕ್ಕೆ ನಮ್ಮ ಬೆಂಬಲ ಸದಾ ಇದ್ದೇ ಇರುತ್ತದೆ. ರಾಜಕೀಯ ಚದುರಂಗದಾಟದಲ್ಲಿ ಜಾತಿ ಜನಗಣತಿಯನ್ನು ದಾಳವಾಗಿ ಬಳಸಿಕೊಳ್ಳುವುದಕ್ಕೆ ವಿರೋಧವಿದೆ, ರಾಜಕೀಯ ಹಾವು–ಏಣಿ ಆಟದಲ್ಲಿ ಕೆಳಗೆ ಬಿದ್ದಾಗ ಮೇಲೇಳಲು, ಕುರ್ಚಿ ಉಳಿಸಿಕೊಳ್ಳಲು ಜಾತಿಗಣತಿಯನ್ನು ಏಣಿಯಾಗಿ ಬಳಸಿಕೊಳ್ಳುವುದಕ್ಕೆ ನಮ್ಮ ತಕರಾರಿದೆ.

ನಾಳೆ ಸಚಿವ ಸಂಪುಟ ಸಭೆಯಲ್ಲಿ ಜಾತಿ ಜನಗಣತಿ ವರದಿ ಚರ್ಚೆಗೆ ಬರಲಿದೆ ಎಂಬ ಮಾಹಿತಿ ಇದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆತ್ಮಸಾಕ್ಷಿಗೆ ಕೆಲವು ಪ್ರಶ್ನೆಗಳನ್ನು ಕೇಳಬಯಸುತ್ತೇನೆ ಎಂದು ಅಶೋಕ್ ಟ್ವೀಟ್ ಮಾಡಿದ್ದಾರೆ.



ನಿಮಗೆ ನಿಜವಾಗಿಯೂ ಜಾತಿಗಣತಿಗೆ ಬದ್ಧತೆ ಇದ್ದಿದ್ದರೆ, 2018ರಲ್ಲೇ ಕಾಂತರಾಜು ವರದಿಯನ್ನು ಏಕೆ ಸ್ವೀಕರಿಸಿ ಜಾರಿ ಮಾಡಲಿಲ್ಲ. ಹತ್ತು ವರ್ಷಗಳ ಹಿಂದೆ ನಡೆಸಿದ ಜಾತಿ ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ. ಅನೇಕ ಜನರ ಮನೆಗಳಿಗೆ ಭೇಟಿಯೇ ನೀಡಿಲ್ಲ ಎಂಬ ದೂರುಗಳಿವೆ. ಹೀಗಿರುವಾಗ ವರದಿಯನ್ನು ಈಗ ಮುನ್ನೆಲೆಗೆ ತರುವ ತರಾತುರಿ ಏನು. ಅವೈಜ್ಞಾನಿಕ ಜಾತಿ ಜನಗಣತಿ ವರದಿ ಸ್ವೀಕರಿಸದಂತೆ ಒಕ್ಕಲಿಗರ ಸಂಘ ಮನವಿ ಸಲ್ಲಿಸಿದೆ. ಇದನ್ನು ಬೆಂಬಲಿಸಿ ಸ್ವತಃ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆದ ಡಿ.ಕೆ.ಶಿವಕುಮಾರ್ ಸಹಿ ಮಾಡಿದ್ದಾರೆ.

ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರು ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆದ ಶಾಮನೂರು ಶಿವಶಂಕರಪ್ಪ ಸಹ ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಅನೇಕ ಮಠಾಧೀಶರು, ಧಾರ್ಮಿಕ ಮುಖಂಡರ ವಿರೋಧವಿದೆ.

ಪರಿಸ್ಥಿತಿ ಹೀಗಿರುವಾಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ವಸಮ್ಮತ ನಿಲುವಿಗೆ ಬರುವ ಬದಲು ವರದಿಯನ್ನು ಸಂಪುಟ ಸಭೆಯಲ್ಲಿ ದಿಢೀರನೆ ಚರ್ಚೆಗೆ ಎತ್ತಿಕೊಳ್ಳುತ್ತಿರುವುದು ಯಾವ ಕಾರಣಕ್ಕಾಗಿ. ಡಿ.ಕೆ. ಶಿವಕುಮಾರ್ ಅವರೊಂದಿಗಿನ ಅಧಿಕಾರ ಹಂಚಿಕೆ ಒಪ್ಪಂದ ವಿವಾದದಿಂದ ತಪ್ಪಿಸಿಕೊಳ್ಳಲು ಜಾತಿ ಜನಗಣತಿ ವರದಿ ತಂತ್ರವಾಗಿ ಬಳಸಿಕೊಳ್ಳಲಾಗುತ್ತಿದೆ ಎಂಬ ಸಂಶಯವಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ಹಗರಣ, ಅಬಕಾರಿ ಹಗರಣ, ಗುತ್ತಿಗೆದಾರರಿಂದ ಕಮಿಷನ್ ಆರೋಪ, ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸರಣಿ ಆತ್ಮಹತ್ಯೆಯಂತಹ ಸಾಲು ಸಾಲು ವಿವಾದ, ಕಳಂಕಗಳ ಮುಜುಗರ ಪರಿಸ್ಥಿತಿಯಿಂದ ಜನರ ಗಮನ ಬೇರೆಡೆ ಸೆಳೆಯಲು ಜಾತಿಗಣತಿ ವರದಿಯನ್ನು ದಾಳವಾಗಿ ಬಳಸಲಾಗುತ್ತಿದೆಯೇ. ಅಥವಾ ದೆಹಲಿ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಜಾತಿಗಣತಿ ವರದಿ ವಿಚಾರ ಬಳಸಿಕೊಳ್ಳುವ ಹುನ್ನಾರವೇ. ಜಾತಿಗಣತಿ ವಿಚಾರವನ್ನು ರಾಜಕೀಯವಾಗಿ ಬಳಸುವುದು ದಲಿತರಿಗೆ, ಹಿಂದುಳಿದ ವರ್ಗಗಳಿಗೆ, ತಳ ಸಮುದಾಯಗಳಿಗೆ ಮಾಡುವ ಅಪಮಾನವಲ್ಲವೇ? ಸಾಮಾಜಿಕ ನ್ಯಾಯವೆಂಬ ಪವಿತ್ರ ಪರಿಕಲ್ಪನೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುವುದು ಆತ್ಮವಂಚನೆಯಲ್ಲವೇ?

ಜಾತಿ ಜನಗಣತಿ ವರದಿ ದತ್ತಾಂಶಗಳು ಮಾಧ್ಯಮಗಳಲ್ಲಿ ಸೋರಿಕೆಯಾಗಲು ಕಾರಣವೇನು, ಸರ್ಕಾರದ ಲೋಪವೋ ಅಥವಾ ಉದ್ದೇಶಪೂರ್ವಕವಾಗಿ ಅಂಕಿ–ಅಂಶಗಳನ್ನು ಸೋರಿಕೆ ಮಾಡಲಾಗುತ್ತಿದೆಯೇ ಎಂಬ ಪ್ರಶ್ನೆಗಳಿಗೆ ಮುಖ್ಯಮಂತ್ರಿಗಳ ಆತ್ಮಸಾಕ್ಷಿ ರಾಜ್ಯದ ಜನತೆಗೆ ಉತ್ತರಿಸಬೇಕು ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಒತ್ತಾಯಿಸಿದ್ದಾರೆ.

ಹೋಟೆಲ್‌ನಲ್ಲಿ ಗ್ಯಾಂಗ್‌ರೇಪ್

ಹರಿಯಾಣ ಬಿಜೆಪಿ ಅಧ್ಯಕ್ಷನ ವಿರುದ್ಧ ಎಫ್‌ಐಆರ್

ಚಂಢೀಗಢ,ಜ.15–ಹರಿಯಾಣ ಬಿಜೆಪಿ ಅಧ್ಯಕ್ಷ ಮೋಹನ್‌ಲಾಲ್ ಬಡೋಲಿ ಮತ್ತು ಗಾಯಕರೊಬ್ಬ ಕಸೌಲಿಯ ಹೋಟೆಲ್‌ನಲ್ಲಿ ತನ್ನ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ ಎಂದು ಮಹಿಳೆಯೊಬ್ಬರು ಆರೋಪಿಸಿದ ನಂತರ ಅವರಿಬ್ಬರ ವಿರುದ್ಧ ಹಿಮಾಚಲಪ್ರದೇಶ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಆರೋಪಿಗಳು ಸಾಮೂಹಿಕ ಅತ್ಯಾಚಾರದ ವಿಡಿಯೋ ಮಾಡಿಕೊಂಡಿದ್ದು, ಯಾರಿಗಾದರೂ ವಿಷಯ ಬಾಯ್ಬಿಟ್ಟರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು ಎಂದು ಮಹಿಳೆ ದೂರಿನಲ್ಲಿ ಉಲ್ಲೇಖಿಸಿದ್ದಾಳೆ. ಜುಲೈ 3, 2023ರಂದು ಮಹಿಳೆ ತನ್ನ ಬಾಸ್ ಮತ್ತು ಸ್ನೇಹಿತನೊಂದಿಗೆ ಕಸೌಲಿಯ ಹೋಟೆಲ್‌ನಲ್ಲಿ ತಂಗಿರುವಾಗ ಆರೋಪಿಗಳನ್ನು ಭೇಟಿಯಾಗಿದ್ದಾರೆ. ಈ ವೇಳೆ ಬಡೋಲಿ ತನ್ನನ್ನು ರಾಜಕೀಯ ನಾಯಕ ಎಂದು ಪರಿಚಯಿಸಿಕೊಂಡರೆ, ರಾಕಿ ತನ್ನನ್ನು ತಾನು ಗಾಯಕ ಎಂದು ಪರಿಚಯಿಸಿಕೊಂಡಿದ್ದಾರೆ. ನಂತರ ಇಬ್ಬರು ಆರೋಪಿಗಳೊಂದಿಗೆ ಮಹಿಳೆ ಹಾಗೂ ಅವರ ಸ್ನೇಹಿತ ಕೊಠಡಿಗೆ ತೆರಳಿದ್ದಾರೆ. ಆರೋಪಿಗಳು ಆಕೆಗೆ ಸರ್ಕಾರಿ ಕೆಲಸ ಹಾಗೂ ಮ್ಯೂಸಿಕ್ ವಿಡಿಯೋವೊಂದರಲ್ಲಿ ಕಾಣಿಸಿಕೊಳ್ಳಲು ಅವಕಾಶ ನೀಡುವುದಾಗಿ ಆಮಿಷವೊಡ್ಡಿದ್ದರು ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರಲ್ಲಿ ಸಂಕ್ರಾಂತಿ ಸಂಭ್ರಮ: ದೇವಾಲಯಗಳಲ್ಲಿ ವಿಶೇಷ ಪೂಜೆ

ಎಳ್ಳು-ಬೆಲ್ಲ ಕೊಟ್ಟು ಶುಭಾಶಯ ವಿನಿಮಯ; ದನಗಳ ಕಿಚ್ಚು ಹಾಯಿಸಿದ ರೈತರು


ಚಿತ್ರ : ಎಂ.ಎನ್.ಲಕ್ಷ್ಮಿ ನಾರಾಯಣ ಯಾದವ್

ಮೈಸೂರು ತಾಲೂಕು ಸಿದ್ದಲಿಂಗಪುರ, ಕಳಸ್ತವಾಡಿ, ರಮ್ಮನಹಳ್ಳಿ, ಹಂಚ್ಯಾ, ಸಾತಗಳ್ಳಿ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ರೈತರು ತಮ್ಮ ರಾಸುಗಳಿಗೆ ಅಲಂಕಾರ ಮಾಡಿ, ಸಂಜೆ ಕಿಚ್ಚು ಹಾಯಿಸಿ, ಸಂಭ್ರಮ ಪಟ್ಟರು.

ಮೈಸೂರು,ಜ.15(ಆರ್‌ಕೆ)- ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಮಂಗಳವಾರ ಸಂಕ್ರಾಂತಿ ಹಬ್ಬವನ್ನು ಸಂತಸ, ಸಂಭ್ರಮದಿಂದ ಆಚರಿಸಲಾಯಿತು.

ದೇವಾಲಯಗಳಲ್ಲಿ ವಿಶೇಷ ಪೂಜೆ, ಧಾರ್ಮಿಕ ಕೈಂಕರ್ಯಗಳು ನಡೆದವು. ಗ್ರಾಮೀಣ ಪ್ರದೇಶದಲ್ಲಿ ಕಣಪೂಜೆ, ದನ-ಕರುಗಳನ್ನು ಅಲಂಕಾರ ಮಾಡಿ ಕಿಚ್ಚು ಹಾಯಿಸುವ ಕಾರ್ಯವನ್ನು ರೈತ ಬಂಧುಗಳು ಸಾಂಪ್ರದಾಯಿಕವಾಗಿ ನೆರವೇರಿಸಿದರು. ಮಂಗಳವಾರ ಬೆಳಗ್ಗೆಯಿಂದಲೇ ಮೈಸೂರಿನ ದೇವಸ್ಥಾನಗಳಲ್ಲಿ ಉತ್ಸವ ಮೂರ್ತಿಗಳ ಪ್ರದಕ್ಷಿಣೆ, ಮಹಾ ಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ಮಾಡಲಾಯಿತು. ಮನೆಗಳಲ್ಲಿ ಸಿಹಿ ಪೊಂಗಲ್ ಮಾಡಿ ಸವಿದು, ಜನರು ಸಂಭ್ರಮಿಸಿದರಲ್ಲದೆ, ಹೆಣ್ಣು ಮಕ್ಕಳು ಹೊಸ ಬಟ್ಟೆ ತೊಟ್ಟು ಅಕ್ಕ-ಪಕ್ಕದ ಹಾಗೂ ಸಂಬಂಧಿಕರ ಮನೆಗೆ ತೆರಳಿ ಎಳ್ಳು-ಬೆಲ್ಲ ನೀಡಿ ಸಂಕ್ರಾಂತಿ ಶುಭಾಶಯ ವಿನಿಮಯ ಮಾಡಿಕೊಂಡರು.

ಮೈಸೂರಿನ ದೇವರಾಜ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮಮತಾ ನೇತೃತ್ವದಲ್ಲಿ ಗಂಧದಗುಡಿ ಪ್ರತಿಷ್ಠಾನದ ಸದಸ್ಯರು ಸಂಕ್ರಾಂತಿ ಹಬ್ಬದಂದು ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿದ್ದ ವಾಹನ ಸವಾರರಿಗೆ ಎಳ್ಳು-ಬೆಲ್ಲ ನೀಡಿ ಶುಭ ಕೋರಿ, ಹೆಲ್ಮೆಟ್ ಧರಿಸುವಂತೆ ಜಾಗೃತಿ ಮೂಡಿಸಿದರು. ಸಿನಿಮಾ ನಟ ಚಂದನ್ ಆಚಾರ್, ರೇಡಿಯೋ ಜಾಕಿ ಅವಿನಾಶ್, ಆರ್ಯನ್ ಅವರು ಇದೇ ವೇಳೆ ಹೆಲ್ಮೆಟ್ ಧರಿಸದೇ ವಾಹನ ಚಾಲನೆ ಮಾಡುತ್ತಿದ್ದವರಿಗೆ ಗುಲಾಬಿ ಹಾಗೂ ಎಳ್ಳು-ಬೆಲ್ಲ-ಸಕ್ಕರೆ ನೀಡಿ ಅರಿವು ಮೂಡಿಸುತ್ತಿದ್ದುದು ವಿಶೇಷವಾಗಿತ್ತು. ಮೈಸೂರು ತಾಲೂಕು ಸಿದ್ದಲಿಂಗಪುರ, ಕಳಸ್ತವಾಡಿ, ರಮ್ಮನಹಳ್ಳಿ, ಹಂಚ್ಯಾ, ಸಾತಗಳ್ಳಿ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ರೈತರು ತಮ್ಮ ರಾಸುಗಳಿಗೆ ಅಲಂಕಾರ ಮಾಡಿ ಸಂಜೆ ಬೆಂಕಿಯಲ್ಲಿ ಕಿಚ್ಚು ಹಾಯಿಸುವ ಮೂಲಕ ಸಂಕ್ರಾಂತಿ ಹಬ್ಬವನ್ನು ಸಡಗರದಿಂದ ಆಚರಿಸಿದರು.

ಮುಸಲ್ಮಾನ್ ಬಾಂಧವರಿಗೆ ಎಳ್ಳು ಬೆಲ್ಲ ವಿತರಿಸಿ ಭಾವೈಕ್ಯತೆ ಸಂದೇಶ ಸಾರಿದ ಮೈಸೂರು ಯುವ ಬಳಗ



ಶಾಸಕ ಹರೀಶ್‌ಗೌಡರ ಧರ್ಮಪತ್ನಿ ಗೌರಿ ಅವರು ಗೋಪೂಜೆ ನೆರವೇರಿಸಿ, ಮುಸಲ್ಮಾನ್ ಬಾಂಧವರಿಗೆ ಎಳ್ಳು ಬೆಲ್ಲ ವಿತರಿಸಿದರು.

ಮೈಸೂರು, ಜ. 15- ಮೈಸೂರಿನ ದಿವಾನ್ಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಮೈಸೂರು ಯುವ ಬಳಗದ ವತಿಯಿಂದ ಮಕರ ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಮುಸಲ್ಮಾನರ ಭಾವೈಕ್ಯತೆ ಬೆಸೆಯುವ ನಿಟ್ಟಿನಲ್ಲಿ ಶಾಸಕ ಕೆ.ಹರೀಶ್ ಗೌಡ ಅವರ ಧರ್ಮಪತ್ನಿ ಗೌರಿ ಅವರು ಗೋಪೂಜೆ ನೆರವೇರಿಸಿ ಆನಂತರ ಮುಸಲ್ಮಾನ್ ಬಾಂಧವರಿಗೆ ಎಳ್ಳು ಬೆಲ್ಲ ವಿತರಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಗೌರಿ ಹರೀಶ್‌ಗೌಡ, ಇತಿಹಾಸದಲ್ಲಿ ಎರಡು ಸಮುದಾಯಗಳ ಹಬ್ಬಗಳು ಬಂದರೆ ಸೌಹಾರ್ದವಾಗಿ ಆಚರಣೆ ಮಾಡುವ ಪದ್ಧತಿ ನಮ್ಮ ನಾಡಿನಲ್ಲಿದೆ. ಆದರೆ ಕೆಲವು ಕಿಡಿಗೇಡಿಗಳಿಂದ ಎರಡು ಸಮಾಜದಲ್ಲಿ ಶಾಂತಿಯನ್ನು ಕದಡುವ ಯತ್ನಗಳು ನಡೆಯುತ್ತಿವೆ. ಆದ್ದರಿಂದ ಎರಡೂ ಸಮುದಾಯದ ಮುಖಂಡರು ಈ ಬಗ್ಗೆ ಲಕ್ಷ್ಯ ವಹಿಸಿ ಹಬ್ಬಗಳನ್ನು ಒಟ್ಟಾಗಿ ಸಂಭ್ರಮದಿಂದ ಆಚರಣೆ ಮಾಡಲು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಸೌಭಾಗ್ಯ ಗಿರೀಶ್, ಕರ್ನಾಟಕ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್ ಕುಮಾರ್, ಮೈಸೂರು ಯುವ ಬಳಗದ ಅಧ್ಯಕ್ಷ ರವಿಚಂದ್ರ, ಆನಂದ, ಮಹಾದೇವ್, ಮಂಜುನಾಥ್, ನವೀನ, ಹರೀಶ್ ಗೌಡ, ವಕೀಲ ಸೂರ್ಯಕುಮಾರ್, ನಂಜುಂಡಸ್ವಾಮಿ, ಚೆಲುವರಾಜ, ಜ್ಞಾನೇಶ, ಪವನ, ಮಹಿಳಾ ಮುಖಂಡರಾದ ಮಂಗಳ, ಶಾಂತ, ಲೀಲಾ, ರಾಣಿ, ಲೋಕೇಶ್, ನಿತಿನ್, ಸಂತೋಷ್, ಶ್ರೀನಿವಾಸ್ ಶೆಟ್ಟಿ, ಸಮೀರಾ, ಫಾತಿಮಾ, ಮುಸಲ್ಮಾನ್ ಬಾಂಧವರು ಮತ್ತು ಪೌರಕಾರ್ಮಿಕರು ಇನ್ನಿತರರು ಹಾಜರಿದ್ದರು.

ನಾದಬ್ರಹ್ಮದಲ್ಲಿ ಮೊಳಗಿದ 'ಸಂಕ್ರಾಂತಿ ಸತ್ಯಾವತಾರ'


'ಸಂಕ್ರಾಂತಿ ಸತ್ಯಾವತಾರ'-ಭಾವಗೀತೆಗಳ ಗಾಯನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು ಹಾಗೂ ಗಾಯಕ ಸಮೂಹ.

ಮೈಸೂರು,ಜ.15-ಕರ್ನಾಟಕ ಸುಗಮ ಸಂಗೀತ ಪರಿಷತ್ತು ಜಿಲ್ಲಾ ಘಟಕ ಹಾಗೂ ನಿನಾದಯುಕ್ತ ಫೌಂಡೇಷನ್ ವತಿಯಿಂದ ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಂಗಳವಾರ ಸಂಜೆ 'ಸಂಕ್ರಾಂತಿ ಸತ್ಯಾವತಾರ'- ಭಾವಗೀತೆಗಳ ಕಾರ್ಯಕ್ರಮ ನಡೆಯಿತು.

ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಭೈರಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಬಡಗನಾಡು ಬಳಗದ ಅಧ್ಯಕ್ಷ ಬಿ.ಎಸ್.ಪ್ರಭಾಕರ್ ಮುಖ್ಯ ಅತಿಥಿಗಳಾಗಿದ್ದರು. ಮುನಿರುಪ್ಪ, ಡಾ.ಚಂದ್ರಕಲಾ ವಿಶೇಷ ಅತಿಥಿಗಳಾಗಿದ್ದರು.

ಜೂನಿಯರ್ ಸಿ.ಅಶ್ವತ್ಥ್ ಎಂದೇ ಖ್ಯಾತರಾದ ಹಿನ್ನೆಲೆ ಗಾಯಕ ಉಪ್ಪುಂದ ರಾಜೇಶ್ ಪಡಿಯಾರ್ ಸಾರಥ್ಯದಲ್ಲಿ ನಡೆದ ಗಾಯನ ಕಾರ್ಯಕ್ರಮದಲ್ಲಿ ರಶ್ಮಿ ಚಿಕ್ಕಮಗಳೂರು, ಹಂಸಿನಿ, ವೇದಶ್ರೀ, ಎನ್. ಬೆಟ್ಟೇಗೌಡ, ಶ್ರೀಧರ್ ಹಾಡಿದರು.

ಏನು ಧನ್ಯಳೋ ಲಕುಮಿ, ನೀನು ಮುಗಿಲು, ನಿನ್ನಲುಮೆಯಿಂದಲೇ, ಅಮ್ಮ ಹಚ್ಚಿದೊಂದು, ನನ್ನ ಒಲುವೇ ಹೇಳು, ತಾರ ಸುಖದೊಳೆನ್ನ, ನೀ ಹಿಂಗ ನೋಡಬೇಡ ನನ್ನ, ಸವಾಲೊಂದು ನಿನ್ನ, ಶ್ರಾವಣ ಬಂತು, ದೀಪವು ನಿನ್ನದೇ, ಒಂದಿರುಳು ಕನಸಿನಲಿ, ಹಿಂದೆ ಹೀಗೆ ಚಿಮ್ಮುತ್ತಿತ್ತು, ಸುಗ್ಗಿ ಮಾಡೋಣ, ನಿಶ್ಚಿಂತನಾಗಬೇಕಂತಿ, ಮುಗಿಲ ಮಾರಿಗೆ, ಕಾಣದ ಕಡಲಿಗೆ, ನಿನ್ನ ಕಂಗಳ ಕೊಳದಿ, ತರವಲ್ಲ ತಗೀ, ನನ್ನ ಇನಿಯನ ನೆಲೆಯ, ಕುರುಬರೋ ಕುರುಬರೋ, ಎಂಥಾ ಮೋಜಿನ, ಕೋಡುಗನ ಕೋಳಿ, ಮನಸೇ ನನ್ನ ಮನಸೇ, ಬಂಗಾರ ನೀರ, ಬಾ ಇಲ್ಲಿ ಸಂಭವಿಸು ಇವೇ ಮೊದಲಾದ ಭಾವಗೀತೆಗಳನ್ನು ಹಾಡಿದರು.

ಸಂಕ್ರಾಂತಿ ಹಬ್ಬವಿದ್ದರೂ ನೂರಾರು ಸಂಖ್ಯೆಯಲ್ಲಿ ಸಂಗೀತ ಪ್ರೇಮಿಗಳು ಸೇರಿ, ಗಾಯನವನ್ನು ಆಲಿಸಿ, ಆನಂದಿಸಿದರು. ಎಡೆಯೂರು ಸಮೀಉಲ್ಲಾ ಕಾರ್ಯಕ್ರಮ ನಿರೂಪಿಸಿದರು. ಗಣೇಶ್ ಭಟ್ ಮತ್ತು ಪುರುಷೋತ್ತಮ- ಕೀ ಬೋರ್ಡ್, ವಿಶ್ವನಾಥ್ ಮ್ಯಾಂಡೋಲಿನ್, ರಘುನಾಥ್ ತಬಲ, ವಿನ್ಸೆಂಟ್ ರಿದಂ ಪ್ಯಾಡ್‌ನಲ್ಲಿ ಸಾಥ್ ನೀಡಿದರು.

ಸಂಕ್ರಾಂತಿ ಹಬ್ಬದಲ್ಲಿ ಗೋಪೂಜೆಗೆ ವಿಶೇಷ ಸ್ಥಾನ


ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ನೇತೃತ್ವದಲ್ಲಿ ಮಂಗಳವಾರ ಗೋಪೂಜೆ ನೆರವೇರಿಸಲಾಯಿತು.

ಮೈಸೂರು, ಜ. 15- ಸಂಕ್ರಾಂತಿ ಹಬ್ಬದಲ್ಲಿ ಗೋಪೂಜೆಗೆ ವಿಶೇಷ ಸ್ಥಾನ. ನಗರ ಪ್ರದೇಶಗಳಲ್ಲಿನ ಜನರಿಗೆ ಹಸುಗಳ ಜತೆಗಿನ ಒಡನಾಟ ಹೆಚ್ಚಿಸುವ ದೃಷ್ಟಿಯಿಂದ ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮ್‌ಪ್ರಸಾದ್ ಅವರ ನೇತೃತ್ವದಲ್ಲಿ ಮಂಗಳವಾರ ಗೋಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಚಾಮುಂಡಿಪುರಂನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ವೇಣುಗೋಪಾಲ ಸ್ವಾಮಿ ದೇಗುಲ ಸಮೀಪ ಗೋವುಗಳಿಗೆ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಎಳ್ಳು ಬೆಲ್ಲ ವಿತರಿಸಲಾಯಿತು.

ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್ ಮಾತನಾಡಿ, ಮನುಷ್ಯ ಹುಟ್ಟಿನಿಂದ ಸಾವಿನವರೆಗೂ ಹಸು ಹಾಲು ಕುಡಿಯುತ್ತಾನೆ. ಇದರ ಜೊತೆಗೆ ರೈತನ ಒಡನಾಡಿಯಾಗಿಯೂ ಗೋವು ಹುಟ್ಟಿನಿಂದ ಸಾಯುವವರೆಗೂ ಜೊತೆಯಾಗಿರುತ್ತವೆ. ಮನೆಯಲ್ಲಿ ಹಸುವಿದ್ದರೆ ಕಾಮಧೇನುವಿನಂತೆ ಐಶ್ವರ್ಯ ನೀಡುತ್ತದೆ. ಇಂದಿನ ದಿನಗಳಲ್ಲಿ ಕಡಿಮೆ ಹಾಲು ನೀಡುವ ಕಾರಣದಿಂದ ದೇಶೀ ಹಸುಗಳ ಸಾಕಣೆ ಕಡಿಮೆಯಾಗುತ್ತಿದೆ. ಅವುಗಳ ಉಳಿವಿಗೆ ಶ್ರಮಿಸಬೇಕಿದೆ ಎಂದು ಮನವಿ ಮಾಡಿದರು. ಚಾಮರಾಜಪೇಟೆಯಲ್ಲಿ ಹಸುಗಳಿಗೆ ಹಿಂಸೆ ನೀಡಿರುವ ಘಟನೆಯ ಬಗ್ಗೆ ತಿಳಿದು ಅತ್ಯಂತ ಆಘಾತವಾಗಿದೆ. ಇದನ್ನು ಕೇವಲ ಗೋವಿನ ಹಿಂಸೆಯಾಗಿ ಪರಿಗಣಿಸುವುದಿಲ್ಲ; ಇದು ಸನಾತನ ಧರ್ಮದ ಅಸ್ತಿತ್ವದ ಪ್ರಶ್ನೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ

ನಾವು ಗೋವುಗಳನ್ನು ದೇವರ ಸನ್ನಿಧಾನದಲ್ಲಿರುವ ಪವಿತ್ರ ವಸ್ತು ಎಂಬುದಾಗಿ ಪೂಜಿಸುತ್ತೇವೆ. ನಮ್ಮ ದೇಶದಲ್ಲಿ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ಅತ್ಯಂತ ಭಯಾನಕ ಎಂದು ಹೇಳಿದ್ದಾರೆ. ಈ ಕೃತ್ಯವನ್ನು ಮುಂದಿನ ಅಪಾಯದ ಸೂಚನೆ ಎಂದು ಭಾವಿಸುತ್ತೇನೆ. ಇದು ಅತ್ಯಂತ ಖಂಡನೀಯ. ಸರ್ಕಾರ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ವಿದ್ಯಾ ಅರಸ್, ಸೌಭಾಗ್ಯ ಮೂರ್ತಿ, ಉಮಾಶಂಕರ್, ಮಂಜುನಾಥ್, ಸೋಮೇಶ್, ಸಂದೀಪ್ ಸಿ, ಧರ್ಮೇಂದ್ರ, ಅರವಿಂದ್, ಶಾಂತ ಸೋಮಶೇಖರ್, ಬಿಜೆಪಿ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಪುನೀತ್, ತೀರ್ಥ, ಬಂಡಿಕೇರಿ ಗೋಪಾಲಕರ ಸಂಘದ ಸದಸ್ಯರು ಹಾಜರಿದ್ದರು.

ಮನುವಾದ ಮಟ್ಟ ಹಾಕಲು ಸ್ವಾತಂತ್ರ್ಯ ಚಳವಳಿ ಮಾದರಿ ಹೋರಾಟ ಅನಿವಾರ್ಯವಾಗಿದೆ

● ಮೈಸೂರು ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅಭಿಮತ ● ಬೆಳಗಾವಿ ಸಂವಿಧಾನ ಸಮಾವೇಶ ಸಂಬಂಧ ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಪೂರ್ವ ಸಿದ್ಧತಾ ಸಭೆ ● ಅಮಿತ್ ಶಾ ಹೇಳಿಕೆ ಗಮನಿಸಿದರೆ ಭಾರತದ ಸಂವಿಧಾನಕ್ಕೆ ಅಪಾಯವಿದೆ!

ಮೈಸೂರು, 15(ಎಂಟಿವೈ)- ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತಂತೆ ರಾಜ್ಯಸಭೆಯಲ್ಲಿ ಕೇಂದ್ರದ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಗಮನಿಸಿದರೆ ಭಾರತದ ಸಂವಿಧಾನಕ್ಕೆ ಅಪಾಯ ಎದುರಾಗುತ್ತಿರುವುದು ದೃಢಪಟ್ಟಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ವಿಷಾದಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಮೈಸೂರು ನಗರ ಮತ್ತು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಬೆಳಗಾವಿಯಲ್ಲಿ ನಡೆಯಲಿರುವ 'ಗಾಂಧಿ ಭಾರತ ಜೈ ಬಾಪು, ಜೈಭೀಮ್-ಜೈ ಸಂವಿಧಾನ ಸಮಾವೇಶ' ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮನುವಾದ ಪ್ರಬಲವಾಗುತ್ತಿದೆ. ಮನುವಾದವನ್ನು ಮಟ್ಟ ಹಾಕಲು ಜೈಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶ ಅನಿವಾರ್ಯ. ಧರ್ಮ, ಜಾತೀಯತೆ ಹೆಸರಿನಲ್ಲಿ ಕೋಮುವಾದದ ರಾಜಕಾರಣ ಮಾಡುತ್ತಿರುವುದನ್ನು ಮಟ್ಟ ಹಾಕಿ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಆಶಯದ ಜಾತ್ಯತೀತತೆಯನ್ನು ಉಳಿಸಲು ಸಂಕಲ್ಪ ಮಾಡಬೇಕು. ಮನುವಾದವನ್ನು ಮಟ್ಟ ಹಾಕಲು ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮದಂತಹ ಹೋರಾಟದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಬಂದ ನಂತರದಲ್ಲಿ ಕಾಂಗ್ರೆಸ್ ಆಡಳಿತ ಹೊರತುಪಡಿಸಿ ಇನ್ನಿತರೆ ಸರ್ಕಾರಗಳು ಸ್ವಾತಂತ್ರ್ಯದ ವಿಚಾರ, ಸಂವಿಧಾನದ ಆಶಯಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ದೇಶದಲ್ಲಿ ತಮ್ಮ ಸ್ವಾರ್ಥಕ್ಕಾಗಿ ಕೋಮು ಪ್ರಚೋದನೆ ಕೆಲಸ ನಡೆಯುತ್ತಿದೆ. ದೇಶದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಪರಸ್ಪರ ಎತ್ತಿಕಟ್ಟುವ ಸಂಚು ನಡೆಯುತ್ತಿರುವುದರಿಂದ ಜನರು ಭಯದ ವಾತಾವರಣದಲ್ಲಿ ಸಿಲುಕಿದ್ದಾರೆ. ಸ್ವರಾಜ್ಯ ಮತ್ತು ಸ್ವಾವಲಂಬನೆ ಬದುಕು ಸಾಗಬೇಕು ಎನ್ನುವುದರ ಆಶಯವನ್ನು ಮರೆತಿರುವ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಜಾತ್ಯತೀತತೆಗೆ ಧಕ್ಕೆಯಾಗಿದೆ. ರಾಷ್ಟ್ರದ ನಡೆ ಒಂದು ಕಡೆಯಾದರೆ, ಬಿಜೆಪಿ ಮತ್ತೊಂದು ಕಡೆ ಸಾಗುತ್ತಿದೆ ಎಂದು ಆರೋಪಿಸಿದರು.

ಬೆಳಗಾವಿಯಲ್ಲಿ ನಡೆಯುವ ಸಮಾವೇಶದಲ್ಲಿ ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಪಾಲ್ಗೊಳ್ಳಬೇಕು. ಕಾರ್ಯಕರ್ತರನ್ನು ಕರೆತರುವ ಜವಾಬ್ದಾರಿ ಹಾಲಿ ಮತ್ತು ಮಾಜಿ ಶಾಸಕರು ತೆಗೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಬೆಳಗಾವಿಗೆ ಸಾರಿಗೆ ಬಸ್‌ಗಳ ಬದಲಿಗೆ ಮಿನಿ ಬಸ್ ವ್ಯವಸ್ಥೆಯನ್ನು ಮಾಡಿದರೆ ಉತ್ತಮ. ಬೆಳಗಾವಿ ದೂರವಾಗಿರುವ ಕಾರಣ ಅಗತ್ಯವಾದ ಮಿನಿಬಸ್ ವ್ಯವಸ್ಥೆ ಮಾಡುವುದು ಸೂಕ್ತ ಎಂದರು.


ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಬೆಳಗಾವಿಯಲ್ಲಿ ನಡೆಯಲಿರುವ ಗಾಂಧಿ ಭಾರತ ಜೈ ಬಾಪು, ಜೈಭೀಮ್-ಜೈ ಸಂವಿಧಾನ ಸಮಾವೇಶದ ಸಿದ್ಧತಾ ಸಭೆ ನಡೆಯಿತು. ಸಭೆ ಉದ್ದೇಶಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಮಾತನಾಡಿದರು.

ಭಾರತೀಯರಿಗೆ ಮಾಡಿದ ಅಪಮಾನ

ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಮಾತನಾಡಿ, ಬೆಳಗಾವಿಯಲ್ಲಿ ನಡೆದ ಅಧಿವೇಶನಕ್ಕೆ ನೂರು ವರ್ಷ ದಾಟಿದೆ. ಮಹಾತ್ಮಗಾಂಧಿ, ಅಂಬೇಡ್ಕರ್ ವಿಚಾರ, ಇತಿಹಾಸವನ್ನು ಮತ್ತೆ ಮತ್ತೆ ಮಾತನಾಡಬೇಕಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದ ಕೊಡುಗೆ, ಗಾಂಧೀಜಿ ತತ್ವ, ಆದರ್ಶಗಳು ಮುಖ್ಯವಾಗಿದೆ. ಕೇಂದ್ರ ಗೃಹಸಚಿವ ಅಮಿತ್ ಶಾ ಹೇಳಿದ ಮಾತು ದಲಿತರಿಗೆ ಅಲ್ಲ, ಭಾರತೀಯರಿಗೆ ಮಾಡಿದ ಅಪಮಾನವಾಗಿದೆ ಎಂದರು.

ಕಾಂಗ್ರೆಸ್ ಜಾತ್ಯತೀತ ಸಂವಿಧಾನದ ಮೇಲೆ ನಂಬಿಕೆ ಹೊಂದಿದೆ. ಕಾಂಗ್ರೆಸ್ ಸಿದ್ಧಾಂತ ಅರಿಯದವರು ಅಧಿಕಾರದ ದಾಹದಿಂದ ಒಂದು ಕಡೆಯಿಂದ ಮತ್ತೊಂದು ಕಡೆ ಜಿಗಿಯುತ್ತಾರೆ. ಆದರೆ ಕಾಂಗ್ರೆಸ್ ಸಿದ್ಧಾಂತ ನಂಬಿದವರು ಎಂದಿಗೂ ಅಂತಹ ಕೆಲಸ ಮಾಡಲ್ಲ ಎಂದರು.

ದೇಶದಲ್ಲಿ ಶೇ.1ರಷ್ಟು ಜನರು 51ರಷ್ಟು ಸಂಪತ್ತನ್ನು ಹೊಂದಿದ್ದಾರೆ. ನಿರುದ್ಯೋಗ ಜಾಸ್ತಿಯಾಗಿ ಬಡವರು ಮತ್ತು ಶ್ರೀಮಂತ ವರ್ಗದ ಅಂತರ ಜಾಸ್ತಿಯಾಗಿದೆ. ವಿನಾಕಾರಣ ಜಾತಿ ವ್ಯವಸ್ಥೆ, ಧಾರ್ಮಿಕ ಆಲೋಚನೆಯ ಕೆಲಸದಲ್ಲಿ ಬಿಜೆಪಿ ತೊಡಗಿದೆ. ಆಡಳಿತದಲ್ಲಿ ನಾನಾ ರೀತಿಯ ಸುಳ್ಳುಗಳನ್ನು ಹೇಳುತ್ತಿದೆ ಎಂದು ಕಿಡಿಕಾರಿದರು. ರಾಜಕೀಯ ಕಾರಣಕ್ಕಾಗಿ ಅಪಪ್ರಚಾರದಲ್ಲಿ ತೊಡಗಿದ್ದು, ವಕ್ಫ್, ವಾಲ್ಮೀಕಿ, ಬೋವಿ, ಮುಡಾ ವಿಷಯಗಳು ಸತ್ಯವಾಗಿಲ್ಲ. ನಾವು ಸತ್ಯವನ್ನು ಜನರಿಗೆ ಹೇಳುವ ಕೆಲಸ ಮಾಡದೆ ಮೌನವಾಗಿರುವುದು ಸರಿಯಲ್ಲ. ಚುನಾವಣೆ ಬಂದಾಗ ಸಂವಿಧಾನ ಬದಲಾವಣೆ ವಿಚಾರ ಹೇಳಿದರೆ ತಲುಪಲ್ಲ. ಹಾಗಾಗಿ ಜನರಿಗೆ ಬಿಜೆಪಿ ಸಂವಿಧಾನದ ವಿರೋಧಿ ಕೆಲಸಗಳನ್ನು ತಿಳಿಸಬೇಕು. ಮೀಸಲಾತಿ ಕಡಿತಗೊಳಿಸುವ ಮಾತು, ಬಿಜೆಪಿ ಸಂಸದರು ಸಂವಿಧಾನ ವಿರೋಧಿ ದಲಿತರಿಗೆ ಅಲ್ಲ, ಭಾರತೀಯರಿಗೆ ನೀಡಿದ ದೊಡ್ಡ ಕೊಡುಗೆಯಾಗಿದೆ ಎಂದು ಹೇಳಿದರು.

ಮುಂದಿನ ತಿಂಗಳು ರಾಹುಲ್ ಗಾಂಧಿ ಅವರ ಅಮೃತಹಸ್ತದಿಂದ ಬೆಂಗಳೂರು ನಗರ ಕಾಂಗ್ರೆಸ್ ಭವನಕ್ಕೆ ಶಿಲಾನ್ಯಾಸ ನಡೆಯಲಿದ್ದು, ಅದೇ ದಿನ ರಾಜ್ಯದಲ್ಲಿ ನೂರು ಕಾಂಗ್ರೆಸ್ ಭವನ ನಿರ್ಮಾಣಕ್ಕೆ ತೀರ್ಮಾನಿಸಲಾಗಿದೆ. ಮೈಸೂರು ನಗರ ಕಾಂಗ್ರೆಸ್ ಭವನಕ್ಕೂ ಅಡಿಗಲ್ಲು ಹಾಕಲಾಗುತ್ತಿದ್ದು, ಕಾಂಗ್ರೆಸ್ ಕಚೇರಿಗೆ ಭೂಮಿ ಬಿಟ್ಟುಕೊಟ್ಟ ಡಿ.ದೇವರಾಜ ಅರಸು ಟ್ರಸ್ಟ್‌ಗೆ ಬೇರೆ ಕಡೆ ಎರಡು ಮೂರು ಎಕರೆ ಜಾಗ ಕೊಡಿಸಬೇಕು ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಬೆಳಗಾವಿಯಲ್ಲಿ ಜ.21ರಂದು ನಡೆಯಲಿರುವ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರನ್ನು ಕರೆದೊಯ್ಯಬೇಕು. ರೈಲು, ಬಸ್ ವ್ಯವಸ್ಥೆ ಬೇಕು. ಅಂದರೆ ಅದಕ್ಕೆ ತಕ್ಕಂತೆ ಅನುಕೂಲ ಮಾಡಿಕೊಡುತ್ತೇವೆ. ರೈಲಿನಲ್ಲಿ ಹೋಗುವವರಿಗೆ ಹೆಚ್ಚು ಆದ್ಯತೆ ನೀಡಲಾಗುವುದು ಎಂದು ಹೇಳಿದರು. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಮಹಾತ್ಮಗಾಂಧಿ ಅವರು ನಡೆಸಿದ ಸಭೆಗೆ ನೂರು ವರ್ಷಗಳು ಸಂದಿರುವ ಕಾರಣ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ದೇಶಕ್ಕೆ ಮಹಾತ್ಮ ಗಾಂಧಿ ಅವರ ತ್ಯಾಗ, ಬಲಿದಾನವನ್ನು ಸ್ಮರಿಸಿಕೊಳ್ಳಬೇಕು. ದೇಶಕ್ಕೆ ಸ್ವಾತಂತ್ರ್ಯ ಬರದಿದ್ದರೆ ಪರಿಸ್ಥಿತಿ ಯಾವ ರೀತಿ ಇರುತ್ತಿತ್ತು ಎನ್ನುವುದನ್ನು ಚಿಂತಿಸ ಬೇಕು ಎಂದು ತಿಳಿಸಿದರು.

ಸಭೆಯಲ್ಲಿ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್.ಸಿ.ಬಸವ ರಾಜು, ಎಂ.ರಾಮಪ್ಪ, ಉಪಾಧ್ಯಕ್ಷ ಜಿ.ಎಸ್. ನಂಜುಂಡಸ್ವಾಮಿ, ವಕ್ತಾರ ಎಂ.ಲಕ್ಷ್ಮಣ್, ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಹೆಚ್.ವಿ.ರಾಜೀವ್, ಮಾಜಿ ಮೇಯರ್‌ಗಳಾದ ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಟಿ.ಬಿ. ಚಿಕ್ಕಣ್ಣ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಪಾಲಿಕೆ ಮಾಜಿ ಸದಸ್ಯರಾದ ಸತ್ಯರಾಜ್, ಜೆ.ಗೋಪಿ, ಗ್ರಾಮಾಂತರ ಮಹಿಳಾ ಘಟಕದ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಎಂ.ಶಿವಣ್ಣ, ಈಶ್ವರ್ ಡಿ.ಚಕ್ಕಡಿ, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿಗಳಾದ ಶಿವಪ್ರಸಾದ್, ಮಂಜುನಾಥ್, ಜಿಪಂ ಮಾಜಿ ಸದಸ್ಯರಾದ ಎಸ್.ಅರುಣ್ ಕುಮಾರ್, ಮಂಜುನಾಥನ್, ವಕ್ತಾರ ಕೆ.ಮಹೇಶ್, ಎಸ್.ರಾಜೇಶ್, ಕೆಪಿಸಿಸಿ ಎಸ್‌ಸಿ ವಿಭಾಗದ ಸಂಯೋಜಕ ಎನ್.ಭಾಸ್ಕರ್ ಮತ್ತಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಸಿಎಂ ಕುರ್ಚಿ ಮೇಲೆ ಗಟ್ಟಿಯಾಗಿ ಕೂತಿದ್ದಾರೆ


ಮಹದೇವಪ್ಪ

ಮೈಸೂರು, ಜ.15(ಎಂಟಿವೈ)- ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಆಡಳಿತ ನಡೆಸುತ್ತಿದೆ. ಸರ್ಕಾರ ಗಟ್ಟಿಯಾಗಿದ್ದು, ಸಿಎಂ ಕುರ್ಚಿ ಕುರಿತು ಚರ್ಚೆ ಅಪ್ರಸ್ತುತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮೈಸೂರು ಐದು ವರ್ಷವೂ ಗಟ್ಟಿಯಾಗಿರುತ್ತದೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಕುರ್ಚಿಯ ಮೇಲೆ ಗಟ್ಟಿಯಾಗಿ ಕುಳಿತಿದ್ದಾರೆ, ಮುಂದೆಯೂ ಕುಳಿತಿರುತ್ತಾರೆ. ಹಾಗಾಗಿ ಸಿಎಂ ಕುರ್ಚಿ ಅಲುಗಾಡುತ್ತಿದೆ, ಖಾಲಿಯಾಗುತ್ತದೆ ಎಂಬ ಯಾವ ಚರ್ಚೆಯೂ ಬೇಡ ಎಂದರು. ಸಿಎಂ ಕುರ್ಚಿಗಾಗಿ ರೇಸ್ ನಡೆಯುತ್ತಿಲ್ಲ. ರೇಸೇ ನಡೆಯದ ಮೇಲೆ ಆಕಾಂಕ್ಷಿ ಎಂಬ ಪ್ರಶ್ನೆಯೇ ಬರುವುದಿಲ್ಲ. ರೇಸ್ (ಚುನಾವಣೆ) ಮುಗಿದಿದ್ದು, ನಾವು ಗುರಿ ತಲುಪಿ ಸರ್ಕಾರ ನಡೆಸುತ್ತಿದ್ದೇವೆ. 2028ಕ್ಕೂ ನಮ್ಮದೇ ಸರ್ಕಾರ ಬರುತ್ತದೆ. ಆಗ ಬೇಕಾದರೆ ಸಿಎಂ ರೇಸಿನ ಬಗ್ಗೆ ಮಾತನಾಡೋಣ. ಸದ್ಯಕ್ಕೆ ಅಂತಹ ಯಾವ ಪ್ರಶ್ನೆಗಳು ಇಲ್ಲ ಎಂದು ಹೇಳಿದರು.

ವಿಪಕ್ಷಗಳಿಗೆ ಸಂವಿಧಾನಿಕವಾಗಿ ಕೆಲಸ ಮಾಡಲು ಯಾವ ವಿಚಾರಗಳೂ ಇಲ್ಲ. ಈ ಕಾರಣದಿಂದ ಇಲ್ಲದ ವಿಚಾರವನ್ನು ಇದೇ ಎನ್ನುವ ರೀತಿ ಮಾತನಾಡುತ್ತಿದ್ದಾರೆ. ವಿಪಕ್ಷಗಳು ತಮ್ಮ ಹುದ್ದೆ ನಿರ್ವಹಿಸುವಲ್ಲಿ ಸೋತಿವೆ ಎಂದು ಟೀಕಿಸಿದರು.

ಕೆಪಿಸಿಸಿ ಅಧ್ಯಕ್ಷರ ನೇಮಕಾತಿ ವಿಚಾರದ ಕುರಿತು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆ ವಿಚಾರದಲ್ಲಿ ನಾನು ಏನು ಹೇಳುವುದಿಲ್ಲ ಎಂದರು.

ಪಕ್ಷದಲ್ಲಿನ ಕೆಲ ಗೊಂದಲಗಳಿಂದ ಸರ್ಕಾರಕ್ಕೆ ಡ್ಯಾಮೇಜ್ ಆಗುತ್ತಿದೆ


ತನ್ವೀರ್ ಸೇಠ್

ಮೈಸೂರು, ಜ.15(ಎಂಟಿವೈ)- ಪಕ್ಷದಲ್ಲಿ ಉಂಟಾಗಿರುವ ಕೆಲ ಗೊಂದಲಗಳಿಂದ ಸರ್ಕಾರಕ್ಕೆ ಡ್ಯಾಮೇಜ್ ಆಗುತ್ತಿರುವುದು ಸತ್ಯ. ಈ ಗೊಂದಲಗಳನ್ನು ಹೈಕಮಾಂಡ್ ಮೊದಲು ಬಗೆಹರಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಮನವಿ ಮಾಡಿದ್ದಾರೆ. ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾರ, ಕೆಪಿಸಿಸಿ ಅಧ್ಯಕ್ಷರ ನೇಮಕಾತಿ ಹಾಗೂ ಸಚಿವ ಸಂಪುಟ ವಿಸ್ತರಣೆ ವಿಚಾರಗಳಿಗೆ ಸಂಬಂಧಿಸಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಕೆಲವು ಮುಖಂಡರು ನೀಡುತ್ತಿರುವ ಹೇಳಿಕೆಗಳು ಗೊಂದಲ ಮೂಡಿಸುತ್ತಿವೆ. ಈ ಹಿನ್ನೆಲೆಯಲ್ಲಿ ಪಕ್ಷದ ಹೈಕಮಾಂಡ್ ಪ್ರಮುಖ ಮೂರು ವಿಚಾರದ ಬಗ್ಗೆ ಗೊಂದಲವನ್ನು ನಿವಾರಿಸಬೇಕು ಎಂದರು. ಪಕ್ಷದಲ್ಲಿರುವ ಗೊಂದಲವನ್ನು ಆದಷ್ಟು ಬೇಗ ಕಾಂಗ್ರೆಸ್ ಹೈಕಮಾಂಡ್ ಬಗೆಹರಿಸಬೇಕು ಎಂದು ಈಗಾಗಲೇ ಸಚಿವ ಸತೀಶ್ ಜಾರಕಿಹೊಳಿ ನೇರವಾಗಿ ಹೇಳಿದ್ದಾರೆ. ಇದಕ್ಕೆ ನನ್ನ ಸಹಮತವಿದೆ. ಕೆಪಿಸಿಸಿ ಅಧ್ಯಕ್ಷ ಯಾರಾಗಬೇಕೆಂಬುದು ಹೈಕಮಾಂಡ್ ವಿವೇಚನೆಗೆ ಬಿಟ್ಟದ್ದು. ಇಂತಹವರನ್ನೇ ಅಧ್ಯಕ್ಷರನ್ನಾಗಿ ಮಾಡಿ ಎಂದು ಹೇಳಲು ಬರುವುದಿಲ್ಲ. ಸತೀಶ್ ಜಾರಕಿಹೊಳಿ ಯವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡುವಾಗ ಶಾಸಕರ ಅಭಿಪ್ರಾಯ ಕೇಳಿರಲಿಲ್ಲ. ಅದೇ ರೀತಿ ಅಧ್ಯಕ್ಷರ ಆಯ್ಕೆ ಮಾಡುವಾಗಲೂ ಅಭಿಪ್ರಾಯ ಕೇಳುವುದಿಲ್ಲ. ಹೈಕಮಾಂಡ್ ಅಧ್ಯಕ್ಷರು ಯಾರಾಗಬೇಕು ಎಂದು ತೀರ್ಮಾನ ಮಾಡುತ್ತಾರೆ. ನಾವು ಅದನ್ನು ಒಪ್ಪಿಕೊಳ್ಳಬೇಕು ಅಷ್ಟೇ ಎಂದು ತಿಳಿಸಿದರು.

ಪಕ್ಷದಿಂದ ಸರ್ಕಾರವೇ ಹೊರತು ಸರ್ಕಾರದಿಂದ ಪಕ್ಷ ಅಲ್ಲ. ಚುನಾವಣೆ ವೇಳೆ ಪಕ್ಷ ಜನರಿಗೆ ಹೇಳಿರುವ ಕೆಲಸವನ್ನು ನಾವು ಮಾಡಬೇಕು. ಇಂತಹದ ಗೊಂದಲಗಳಿದ್ದರೆ ಜನರ ಕೆಲಸ ಮಾಡಲು ಹೇಗೆ ಸಾಧ್ಯ? ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಅಲ್ಲ. ಆ ಜವಾಬ್ದಾರಿ ನಿಭಾಯಿಸುವ ಶಕ್ತಿ ನನಗೆ ಇಲ್ಲ ಎಂದರು.

ಇಬ್ಬರು ಮನೆಗಳ್ಳರ ಬಂಧನ: 50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ


ಮನೆಗಳ್ಳರಿಂದ ವಶಪಡಿಸಿಕೊಳ್ಳಲಾದ ಚಿನ್ನಾಭರಣಗಳೊಂದಿಗೆ ಪೊಲೀಸರು.

ಶ್ರೀರಂಗಪಟ್ಟಣ: ಮನೆಗಳಲ್ಲಿ ರಾತ್ರಿ ವೇಳೆ ಕಳ್ಳತನ ಮಾಡುತ್ತಿದ್ದ ಇಬ್ಬರು ಮನೆಗಳ್ಳರನ್ನು ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸರು ಬಂಧಿಸಿ ಅವರಿಂದ ಸುಮಾರು 50 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರು ತಾಲೂಕು ಹಂಚ್ಯಾ ಗ್ರಾಮದ ಪ್ರಸಾದ್ ಹಾಗೂ ಮಹಮ್ಮದ್ ಮುನ್ನ ಬಂಧಿತ ಆರೋಪಿಗಳು.

2024ರ ನ.10 ರಂದು ತಾಲೂಕಿನ ನಗುವನಹಳ್ಳಿ ಗ್ರಾಮದ ಪ್ರಕಾಶ್.ಎನ್ ಅವರ ಮನೆಗೆ ಕಳ್ಳರು ನುಗ್ಗಿ ಮನೆಯಲ್ಲಿಟ್ಟಿದ್ದ ಐವತ್ತು ಲಕ್ಷ ರೂ. ಬೆಲೆ ಬಾಳುವ ಸುಮಾರು 785 ಗ್ರಾಂ ತೂಕದ ಚಿನ್ನದ ಒಡವೆಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದು ಈ ಬಗ್ಗೆ ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ತನಿಖಾಧಿಕಾರಿ ಬಿ.ಜಿ.ಕುಮಾರ್, ಪಿಎಸ್ಐ ರಕ್ಷಿತ, ಸಬ್ಇನ್ಸ್‌ಪೆಕ್ಟರ್ ಮಂಜುನಾಥ ಹಾಗೂ ಸಿಬ್ಬಂದಿಗಳಾದ ಶ್ರೀನಿವಾಸ ಮೂರ್ತಿ, ಹಫೀಜ್ ಪಾಷ, ದಿನೇಶ, ಶಂಕರ, ಮುತ್ತುರಾಜ, ಜೀಪ್ ಚಾಲಕ ರವೀಂದ್ರ ಜಿಲ್ಲಾ ಪೊಲೀಸ್ ಕಚೇರಿಯ ರವಿಕಿರಣ, ಲೋಕೇಶರವರನ್ನೊಳಗೊಂಡ ತಂಡವನ್ನು ರಚನೆ ಮಾಡಿ ಆರೋಪಿಗಳ ಪತ್ತೆಗಾಗಿ ಕಾರ್ಯ ಪ್ರವೃತ್ತರಾಗಿದ್ದರು.

ಪ್ರಕರಣದ 1ನೇ ಆರೋಪಿ ಹಂಚ್ಯಾ ಗ್ರಾಮದ ಪ್ರಸಾದ್ ಈತನನ್ನು ದಸ್ತಗಿರಿ ಮಾಡಿ ಸುಮಾರು 516 ಗ್ರಾಂ ತೂಕದ ಚಿನ್ನದ ಒಡವೆಗಳನ್ನು ವಶಕ್ಕೆ ತೆಗೆದುಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಜೊತೆಗೆ ಈ ಪ್ರಕರಣದಲ್ಲಿ ಭಾಗಿಯಾಗಿ ತಲೆ ಮರೆಸಿಕೊಂಡಿದ್ದ ಮತ್ತೊಬ್ಬ ಆರೋಪಿ ಮಹಮ್ಮದ್ ಮುನ್ನ ಎಂಬಾತನನ್ನ ದಸ್ತಗಿರಿ ಮಾಡಿ ಆರೋಪಿಯಿಂದ ಸುಮಾರು 9 ಲಕ್ಷ ರೂ. ಬೆಲೆ ಬಾಳುವ ಸುಮಾರು 155 ಗ್ರಾಂ ತೂಕದ ಚಿನ್ನದ ಒಡವೆಗಳನ್ನು ವಶಕ್ಕೆ ತೆಗೆದುಕೊಂಡು. ಕೃತ್ಯಕ್ಕೆ ಬಳಸಿದ್ದ ಹೋಂಡಾ ಆಕ್ಟಿವಾ ಸ್ಕೂಟರ್ ಮತ್ತು ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ಇಬ್ಬರು ಆರೋಪಿಗಳ ಪತ್ತೆ ಕಾರ್ಯದಲ್ಲಿ ಶ್ರಮಿಸಿರುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಯವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಶಂಸಿಸಿದ್ದಾರೆ.

ಮಂಡ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭಿಸಲು ಸಕಲ ಸಿದ್ಧತೆ


ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮವನ್ನು ಸಚಿವ ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮಂಡ್ಯ,ಜ.15– ರೈತರಿಗೆ ಕೃಷಿಯ ಮಾಹಿತಿ ನೀಡಿ ಕೃಷಿ ಅಧ್ಯಯನ ಮಾಡಲು ಸಹಕಾರಿಯಾಗುವ ಕೃಷಿ ವಿಶ್ವವಿದ್ಯಾಲಯವನ್ನು ವಿ.ಸಿ.ಫಾರಂ ಆವರಣದಲ್ಲಿ ಪ್ರಾರಂಭಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ನಾಗಮಂಗಲದ ದೇವಲಾಪುರದಲ್ಲಿ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರೈತರು ಕೃಷಿ ಪದ್ಧತಿಗಳ ಬಗ್ಗೆ ಮಾಹಿತಿ ಪಡೆಯಲು ಮಂಡ್ಯ ಜಿಲ್ಲೆಯಿಂದ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯಕ್ಕೆ ತೆರಳಬೇಕಿತು. ರೈತರು ಹೆಚ್ಚಿರುವ ಮಂಡ್ಯ ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾಲಯದ ಅವಶ್ಯಕತೆಯನ್ನು ಮನಗಂಡು ಪ್ರಾರಂಭಿಸಲಾಗುತ್ತಿದೆ. ರೈತರು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಕೃಷಿ ವಿಶ್ವವಿದ್ಯಾಲಯದಲ್ಲಿ ವಿವಿಧ ರೀತಿಯ ತಳಿಗಳು ಬೆಳೆಗೆ ಬಳಸಬೇಕಿರುವ ರಸಗೊಬ್ಬರ ಸೇರಿದಂತೆ ಪ್ರತಿಯೊಂದು ಮಾಹಿತಿ ಸಂಶೋಧಕರಿಂದ ದೊರಕಲಿದೆ. ಸಂಕ್ರಾಂತಿ ಹಬ್ಬ ಆದಾಯವನ್ನು ಸಂಭ್ರಮಿಸುವ ಹಬ್ಬ ಸಂಕ್ರಾಂತಿ ಹಬ್ಬ ರೈತರು ತಾವು ಬೆಳೆದ ಭತ್ತ, ರಾಗಿ, ಕಾಳುಗಳನ್ನು ಒಟ್ಟುಗೂಡಿಸಿ, ಪೂಜೆ ಮಾಡಿ ಮನೆಗೆ ಬೇಕಾದಷ್ಟನ್ನು ಶೇಖರಿಸಿ ಉಳಿದದನ್ನು ಮಾರಾಟ ಮಾಡುತ್ತಾರೆ. ರೈತರಿಗೆ ಉತ್ತಮ ಆದಾಯ ಬರಲಿ ಎಂದು ಅವರು ಹಲವಾರು ತಿಂಗಳಿಂದ ಶ್ರಮಪಟ್ಟಿ ಪಡೆದ ಫಲವನ್ನು ಪೂಜಿಸುವ ಹಬ್ಬ ಸಂಕ್ರಾಂತಿ ಹಬ್ಬ ಎಂದು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿ, ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಕೃಷಿಯ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದು, 17 ತಿಂಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕನಿಷ್ಠ 3 ಬಾರಿ ಭೇಟಿ ನೀಡಿ ಕೃಷಿಯ ಅಭಿವೃದ್ಧಿಯ ಬಗ್ಗೆ ಹೆಚ್ಚಿನ ಶ್ರಮ ವಹಿಸಿದ್ದಾರೆ. 84 ಲಕ್ಷ ಹೆಕ್ಟೇರ್ ಬಿತ್ತನೆ ಕಾರ್ಯಕ್ಕಾಗಿ 6 ಲಕ್ಷ ಟನ್ ಬಿತ್ತನೆ ಬೀಜವನ್ನು ರೈತರಿಗೆ ಯಾವುದೇ ತೊಂದರೆಯಿಲ್ಲದೇ ಒದಗಿಸಿದ್ದಾರೆ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಮಕರ ಸಂಕ್ರಾಂತಿ ಮಣ್ಣಿನ, ರೈತರ, ಸುಗ್ಗಿ ಹಾಗೂ ಸಂಭ್ರಮದ ಹಬ್ಬ. ಸಂಕ್ರಾಂತಿ ಹಬ್ಬ ರೈತರು ಬೆಳೆದ ಬೆಳೆಗಳನ್ನು ಪೂಜಿಸಿ ಸಂಭ್ರಮಿಸುತ್ತಾರೆ. ಮಕರ ಸಂಕ್ರಾಂತಿ ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕ. ಸಂಕ್ರಾಂತಿ ಹಬ್ಬವನ್ನು ಈ ಬಾರಿ ಮಂಡ್ಯ ಜಿಲ್ಲೆಯಲ್ಲಿ ವಿನೂತನವಾಗಿ ಆಚರಿಸುತ್ತಿರುವುದು ಸಂತೋಷದಾಯಕ ವಿಷಯ ಎಂದು ಹೇಳಿದರು.

ಮಕರ ಸಂಕ್ರಾಂತಿಯು ಗ್ರಾಮೀಣ ಸೊಗಡನ್ನು ಯುವ ಪೀಳಿಗೆಗೆ ಪರಿಚಯಿಸುವ ಹಬ್ಬ. ಇದರಲ್ಲಿ ಯುವ ಪೀಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರೈತರಿಗೆ ಗೌರವ ಸಲ್ಲಿಸಬೇಕು. ಇಂದಿನ ಯುವ ಪೀಳಿಗೆ ಹಾಗೂ ಮಕ್ಕಳು ಹೊಸತನದ ವೇಗದಲ್ಲಿ ಕೃಷಿ, ವಿವಿಧ ಬೆಳೆ, ಗಿಡಗಳ ಪರಿಚಯವೇ ಇಲ್ಲದಂತೆಯಾಗಿದ್ದರೆ. ಅವರು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡುವ ಪ್ರವೃತ್ತಿ ಬೆಳಸಿಕೊಳ್ಳಬೇಕು ಎಂದರು.

ಸಂಕ್ರಾಂತಿ ಹಬ್ಬವನ್ನು ಮನೆಯಲ್ಲೇ ಕುಳಿತು ನಾಲ್ಕು ಗೋಡೆಯ ಮಧ್ಯ ಆಚರಿಸದೇ ಎಲ್ಲರೂ ಒಟ್ಟಿಗೆಗೂಡಿ ಸಂಭ್ರಮದಿಂದ ಆಚರಿಸುವ ಹಬ್ಬವಿದು. ರೈತರಿಗೆ ಶಕ್ತಿ ನೀಡಿ ಕೃಷಿಯಲ್ಲಿ ಸದಾ ಜೊತೆಯಲ್ಲಿರುವ ಗೋವನ್ನು ಪೂಜಿಸುವ ಹಬ್ಬ. ದೇವಲಾಪುರದ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಮಕ್ಕಳಿಗೆ ಸೌಲಭ್ಯಗಳ ವಿದ್ಯೆ ಸುಗ್ಗಿಯನ್ನು ಒದಗಿಸಲು ಮಾಜಿ ವಿಧಾನಪರಿಷತ್ ಶಾಸಕ ಅಪ್ಪಾಜಿಗೌಡ ಅವರು ಮನವಿ ಮಾಡಿದರು. ಸಚಿವರು ಕಾರ್ಯಕ್ರಮದಲ್ಲಿ ಒಪ್ಪಿಗೆ ನೀಡಿದರು.


ಅಪರಿಚಿತ ವಾಹನ ಡಿಕ್ಕಿ: ಜಿಂಕೆ ಸಾವು



ನಾಗಮಂಗಲ: ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದು ಪರಾರಿಯಾಗಿರುವ ಪರಿಣಾಮ ಜಿಂಕೆಯೊಂದು ಸಾವನಪ್ಪಿದ ಘಟನೆ ತಾಲೂಕಿನ ಬೆಳ್ಳೂರು ರಾಷ್ಟ್ರಿಯ ಹೆದ್ದಾರಿಯಲ್ಲಿರುವ ನಕ್ಷತ್ರ ಪೆಟ್ರೋಲ್ ಬಂಕ್ ಬಳಿ ನಡೆದಿದೆ. ಶುಕ್ರವಾರ ರಾತ್ರಿ ಪಕ್ಕದಲ್ಲಿರುವ ಅರಣ್ಯದಿಂದ ಹೊರಬಂದಿದ್ದ ಜಿಂಕೆ ರಸ್ತೆ ದಾಟುತ್ತಿದ್ದಾಗ ಈ ಘಟನೆ ನಡೆದಿರಬಹುದೆಂದು ಪೊಲೀಸರು ಶಂಕಿಸಿದ್ದು, ರಸ್ತೆಯಲ್ಲಿ ಬಿದ್ದಿದ್ದ ಜಿಂಕೆಯ ಕಳೇಬರವನ್ನು ಕಂಡು ಪೊಲೀಸರಿಗೆ ತಿಳಿಸಲಾಗಿ ನಂತರ ಅರಣ್ಯ ಇಲಾಖೆಯ ಅಧಿಕಾರಿಗಳು ವಶಕ್ಕೆ ಪಡೆದರು.

ವಿದ್ಯುತ್ ಕಂಬಕ್ಕೆ ಬಲ್ಬ್ ಹಾಕುತ್ತಿದ್ದಾಗ ದುರಂತ

ವಿದ್ಯುತ್ ಸ್ಪರ್ಶಗೊಂಡು ಗುತ್ತಿಗೆ ನೌಕರ ಸಾವು



ಹಲಗೂರು,ಜ.15–ವಿದ್ಯುತ್ ಕಂಬಕ್ಕೆ ಬಲ್ಬ್ ಹಾಕುವ ವೇಳೆ ವಿದ್ಯುತ್ ಸ್ಪರ್ಶಿಸಿ, ಗುತ್ತಿಗೆ ನೌಕರ ಕೆಳಗೆ ಬಿದ್ದು, ಸಾವನ್ನಪ್ಪಿರುವ ಘಟನೆ ಸಮೀಪದ ದೇವಿರಹಳ್ಳಿ ಗ್ರಾಮದಲ್ಲಿ ನಡೆದಿದೆ. ಹಲಗೂರು ಸಮೀಪದ ಕೆಂಪಯ್ಯನದೊಡ್ಡಿ ಗ್ರಾಮದ ಕೆಂಚೇಗೌಡ(62) ಮೃತ ದುರ್ದೈವಿ. ಈತ ದಳವಾಯಿ ಕೋಡಿಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕಳೆದ ಹತ್ತು ವರ್ಷಗಳಿಂದ ಅಧ್ಯಕ್ಷ ಮತ್ತು ಪಿಡಿಓ ಅವರ ಮೌಖಿಕ ಆದೇಶದ ಮೇರೆಗೆ ಗುತ್ತಿಗೆ ಆಧಾರದಲ್ಲಿ ವಿದ್ಯುತ್ ಬಲ್ಬ್ ಅಳವಡಿಸುವ ಕೆಲಸ ಮಾಡುತ್ತಿದ್ದ.

ದೇವಿರಹಳ್ಳಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ವಾಟರ್‌ಮ್ಯಾನ್ ಬಸವಲಿಂಗೇಗೌಡರು ಕೆಂಚೇಗೌಡ ಅವರಿಗೆ ಕರೆ ಮಾಡಿ, ವಿದ್ಯುತ್ ಕಂಬಕ್ಕೆ ಬಲ್ಬ್ ಅಳವಡಿಸಲು ಕರೆದುಕೊಂಡು ಹೋಗಿದ್ದಾರೆ. ದೇವಿರಹಳ್ಳಿ ಗ್ರಾಮದಲ್ಲಿ ಬೀದಿ ದೀಪ ಅಳವಡಿಸುವಾಗ ವಿದ್ಯುತ್ ಸ್ಪರ್ಶಿಸಿ, ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ತೀವ್ರ ಗಾಯಗೊಂಡ ಕೆಂಚೇಗೌಡ ಅವರನ್ನು ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಲಮುರಿಯಲ್ಲಿ ಮೈಸೂರಿನ ಯುವಕ ಜಲಸಮಾಧಿ



ಶ್ರೀರಂಗಪಟ್ಟಣ: ಸಂಕ್ರಾಂತಿ ಹಬ್ಬದ ರಜೆ ಹಿನ್ನೆಲೆಯಲ್ಲಿ ಈಜಲು ತನ್ನ ಮೂವರು ಸ್ನೇಹಿತರೊಂದಿಗೆ ಬಂದಿದ್ದ ಮೈಸೂರು ಯುವಕ ನೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೆಳಗೊಳದ ಬಲಮುರಿ ಬಳಿಯ ಕಾವೇರಿ ನದಿಯಲ್ಲಿ ಸಂಭವಿಸಿದೆ.

ಮೈಸೂರು ತಾಲೂಕು ನಾಗನಹಳ್ಳಿ ನಿವಾಸಿ ಶಿವರಾಜು ಅವರ ಮಗ ಶರತ್.ಎಸ್ (19) ಮೃತ ಯುವಕ. ಈತ ಎಂಐಟಿ ಕಾಲೇಜಿನಲ್ಲಿ ಪ್ರಥಮ ವರ್ಷದ ಕಂಪ್ಯೂಟರ್ ಸೈನ್ಸ್ ವಿದ್ಯಾಭ್ಯಾಸ ಮಾಡುತ್ತಿದ್ದು, ಬುಧವಾರ ತನ್ನ ಮೂವರು ಸ್ನೇಹಿತರೊಂದಿಗೆ ಬಲಮುರಿ ಬಳಿಯ ಕಾವೇರಿ ನದಿಯಲ್ಲಿ ಆಟವಾಡಿ ನಂತರ ಈಜಲು ತೆರಳಿದ್ದಾರೆ.

ಈ ವೇಳೆ ಶರತ್ ಈಜಲು ಬಾರದೆ ನದಿಯಲ್ಲಿ ಮುಳುಗುತ್ತಿದ್ದ ವೇಳೆ ದಡದಲ್ಲಿದ್ದ ಸ್ನೇಹಿತರನ್ನು ಸಹಾಯಕ್ಕಾಗಿ ಕೂಗಿಕೊಂಡಿದ್ದಾರೆ. ಸ್ಥಳದಲ್ಲಿದ್ದ ಸಾರ್ವಜನಿಕರು, ನದಿಗೆ ಹಾರಿ ಶರತ್ ಉಳಿಸಲು ಪ್ರಯತ್ನಿಸಿದರಾದರೂ ಅಷ್ಟರಲ್ಲಿ ನೀರು ಕುಡಿದಿದ್ದರಿಂದ ಮೃತಪಟ್ಟಿರುವುದಾಗಿ ಸಾರ್ವಜನಿಕರು ಮಾಹಿತಿ ನೀಡಿದ್ದಾರೆ. ವಿಷಯ ತಿಳಿದ ಕೆಆರ್‌ಎಸ್ ಪೊಲೀಸರು ಸ್ಥಳಕ್ಕೆ ಆಗಮಿಸಿ ಪ್ರಕರಣ ದಾಖಲಿಸಿಕೊಂಡು ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ನಂತರ ಪೋಷಕರಿಗೆ ಹಸ್ತಾಂತರಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಮೃತ ಯುವಕನ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಜೊತೆಯಲ್ಲಿ ತೆರಳಿದ್ದ ಸ್ನೇಹಿತರು ಕೂಡಾ ಆತಂಕಗೊಂಡಿದ್ದು ಕಂಡುಬಂದಿತು.

ನಾಳೆ ಪ್ರಗತಿ ನ್ಯೂಟ್ರಿಷನ್ ಬಜಾರ್ ಎಕ್ಸ್‌ಪೋ

ಕೆ.ಆರ್.ಪೇಟೆ,ಜ.15– ಪಟ್ಟಣದ ಪ್ರಗತಿ ಅನುದಾನಿತ ಹಿರಿಯ ಪ್ರಾಥಮಿಕ ಹಾಗೂ ಅನುದಾನ ರಹಿತ ಪ್ರೌಢಶಾಲೆಯ ಆವರಣದಲ್ಲಿ ಜ.17ರಂದು ಪ್ರಗತಿ ನ್ಯೂಟ್ರಿಷನ್ ಬಜಾರ್ ಎಕ್ಸ್‌ಪೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಗತಿ ಸಂಸ್ಥೆಯ ಶಿಕ್ಷಣ ಸಂಸ್ಥೆಯ ಸಿಇಓ ಹಾಗೂ ಆಹಾರ ತಜ್ಞೆ ಡಾ.ಎಂ.ಕೆ.ಮೋನಿಕಾ ತಿಳಿಸಿದ್ದಾರೆ.

ಅವರು ಕಾರ್ಯಕ್ರಮದ ಹಿನ್ನೆಲೆಯಲ್ಲಿ ಪ್ರಗತಿ ಶಾಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ವಿವಿಧ ತರಕಾರಿ ಹಣ್ಣು ಅವುಗಳ ಮಹತ್ವವನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶದಿಂದ ಹಾಗೂ ಪೋಷಣೆ ಅಭಿಯಾನ್ ಕಾರ್ಯಕ್ರಮದ ಅಡಿಯಲ್ಲಿ ಈ ನ್ಯೂಟ್ರಿಷನ್ ಬಜಾರ್ ಎಕ್ಸ್‌ಪೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಇದು ಮಂಡ್ಯ ಜಿಲ್ಲೆಯಲ್ಲೇ ಪ್ರಥಮ ಕಾರ್ಯಕ್ರಮವಾಗಿದೆ ಎಂದರು.

ಆರತಿ ಉಕ್ಕಡಕ್ಕೆ ದರ್ಶನ್ ಕುಟುಂಬ ಸಮೇತರಾಗಿ ಭೇಟಿ



ಶ್ರೀರಂಗಪಟ್ಟಣ: ತಾಲೂಕಿನ ಆರತಿ ಉಕ್ಕಡದ ಶ್ರೀ ಅಹಲ್ಯಾ ದೇವಿ ಮಾರಮ್ಮ ದೇವಸ್ಥಾನಕ್ಕೆ ನಟ ದರ್ಶನ ಕುಟುಂಬ ಸಮೇತ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಬುಧವಾರ ಮಧ್ಯಾಹ್ನ ಪತ್ನಿ ವಿಜಯಲಕ್ಷ್ಮಿ ಹಾಗೂ ಪುತ್ರನೊಂದಿಗೆ ಆಗಮಿಸಿದ ದರ್ಶನ್ ಅವರನ್ನು ದೇವಾಲಯದ ಸಮಿತಿ ಅಧ್ಯಕ್ಷ ಚಂದ್ರು ಅವರು ಹೂವಿನ ಹಾರ ಹಾಕಿ ಸ್ವಾಗತಿಸಿದರು.

ನಂತರ ದರ್ಶನ್ ಕುಟುಂಬದ ಸಮೇತರಾಗಿ ಗರ್ಭಗುಡಿ ಬಳಿ ತೆರಳಿ ದೋಷ ನಿವಾರಣಾ ಪೂಜೆ ಸಲ್ಲಿಸಿ, ನಂತರ ತಡೆ ಹೊಡೆಸಿರುವುದಾಗಿ ತಿಳಿದು ಬಂದಿದೆ. ಈ ವೇಳೆ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸೇರಿದಂತೆ ಅಪಾರ ಪ್ರಮಾಣ ಅಭಿಮಾನಿಗಳು ಇದ್ದರು.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಆರೋಪದ ಮೇಲೆ ಜೈಲು ಸೇರಿ ಜಾಮೀನಿನ ಮೇಲೆ ಬಿಡುಗಡೆಯಾಗಿ ಹೊರಬಂದ ಮೇಲೆ ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡರು ದರ್ಶನ್. ಅಭಿಮಾನಿಗಳು ನಟ ದರ್ಶನ್ ಪರ ಜೈಕಾರ ಕೂಗಿದರು.

ಒಂದನೇ ಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ಧಾರ

ಮಾಡಿಕೊಂಡಿದ್ದರು. ತದನಂತರ ಸೋನಿಯಾ ಗಾಂಧಿ ಭೇಟಿ ಸಂದರ್ಭದಲ್ಲೂ ಶಿವಕುಮಾರ್, ಇದೇ ವಿಷಯದ ಬಗ್ಗೆ ಮಾಹಿತಿ ನೀಡಿ, ಮಧ್ಯೆ ಪ್ರವೇಶಿಸುವಂತೆ ಕೋರಿದ್ದರು. ಈ ಬೆಳವಣಿಗೆ ನಂತರ ಸಿದ್ದರಾಮಯ್ಯ ಅವರನ್ನು ಕರೆಸಿಕೊಂಡ ಉಭಯ ನಾಯಕರು ಶೈಕ್ಷಣಿಕ ವರದಿ ಮಂಡನೆ ಮುಂದೂಡುವಂತೆ ಸಲಹೆ ಮಾಡಿದರು.

ವರಿಷ್ಠರ ಸಲಹೆಗೆ ತಲೆಬಾಗಿದ ಮುಖ್ಯಮಂತ್ರಿ ಅವರು, ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದಲ್ಲದೆ, ಮಾಧ್ಯಮದ ಬಳಿಯೂ, ನಾಳಿನ ಮಂತ್ರಿಮಂಡಲ ಸಭೆಯಲ್ಲಿ, ಶೈಕ್ಷಣಿಕ ವರದಿ ಬರುತ್ತಿಲ್ಲ, ಒಂದು ವಾರದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು ಎಂದರು. ಇದರ ನಡುವೆ, ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿ ಗುರುವಾರ ಸಚಿವ ಸಂಪುಟ ಸಭೆಯಲ್ಲಿ ಮಂಡನೆಯಾಗಲಿದೆ ಎಂದಿದ್ದರು. ವರದಿ ಕುರಿತು ಯಾವುದೇ ನಿರ್ಧಾರ ಸರ್ಕಾರದ ವಿಶೇಷಾಧಿಕಾರವಾಗಿದ್ದು, ವಿಶ್ಲೇಷಣೆ ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಸಮಾಜದ ಕೆಲವು ವರ್ಗಗಳು ಮತ್ತು ಆಡಳಿತಾರೂಢ ಕಾಂಗ್ರೆಸ್‌ನ ಕೆಲವರು ವರದಿಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವರದಿ ಅನುಷ್ಠಾನ ಸರ್ಕಾರದ ವಿವೇಚನೆಗೆ ಬಿಟ್ಟಿದ್ದು, ವರದಿಯಲ್ಲಿ ಏನಿದೆ ಎಂಬುದನ್ನು ಸಾರ್ವಜನಿಕಗೊಳಿಸಬೇಕೆಂಬ ಬೇಡಿಕೆ ಇದೆ. ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯ ಸಮೀಕ್ಷೆಗೆ ಆಕ್ಷೇಪ ವ್ಯಕ್ತಪಡಿಸಿದ್ದು, 'ಅವೈಜ್ಞಾನಿಕ' ಎಂದು ಟೀಕಿಸಿರುವುದಲ್ಲದೆ, ಹೊಸದಾಗಿ ಸಮೀಕ್ಷೆಗೆ ಒತ್ತಾಯಿಸಿವೆ ಎಂದರು.

ಪೊಲೀಸರಲ್ಲಿ ಶರಣಾದ ಪತಿ

ಗಂಡು ಮಗು ಮತ್ತು ಮೂರು ವರ್ಷದ ಹೆಣ್ಣು ಮಗುವಿದೆ. ತೇಜಸ್ವಿನಿ ಕೆಲ ವರ್ಷಗಳಿಂದ ಹುಣಸೂರು ತಾಲೂಕು ಅಸ್ವಾಳು ಗ್ರಾಮದ ಯುವಕನೊಂದಿಗೆ ಸಂಬಂಧ ಹೊಂದಿದ್ದು, ಈ ವಿಚಾರ ವಾಗಿ ದಂಪತಿ ನಡುವೆ ಆಗಾಗ ಗಲಾಟೆಯಾಗಿ, ಪೊಲೀಸ್ ಠಾಣೆ ಮತ್ತು ಗ್ರಾಮಗಳಲ್ಲಿ ರಾಜಿ ಪಂಚಾಯಿತಿ ನಡೆದಿತ್ತು. ಗ್ರಾಮದ ಮುಖಂಡರು ಹಾಗೂ ಹೆಚ್.ಡಿ. ಕೋಟೆ ಠಾಣೆ ಪೊಲೀಸರು ತೇಜಸ್ವಿನಿಗೆ ಬುದ್ಧಿ ಮಾತು ಹೇಳಿದ್ದರು. ಅಲ್ಲದೇ ಆಕೆಗೆ ಪತಿಯಿಂದ ಏನಾದರೂ ಕಿರುಕುಳವಾಗುತ್ತಿದೆಯೇ? ಆ ಕಾರಣದಿಂದ ದಂಪತಿ ನಡುವೆ ಜಗಳವಾಗುತ್ತಿದೆಯೇ ಎಂಬುದರ ಬಗ್ಗೆಯೂ ಕೂಡ ಪೊಲೀಸರು ಪರಿಶೀಲಿಸಿ, ಕೊನೆಗೆ ತೇಜಸ್ವಿನಿಗೆ ಸಾಕಷ್ಟು ತಿಳುವಳಿಕೆ ಹೇಳಿ ಕಳುಹಿಸಿದ್ದರು.

ಸ್ವಲ್ಪ ದಿನ ಸರಿಯಾಗಿಯೇ ಇದ್ದ ತೇಜಸ್ವಿನಿ, ಮತ್ತೆ ತನ್ನ ಚಾಳಿ ಮುಂದುವರೆಸಿ, ಕೆಲ ದಿನಗಳ ಹಿಂದೆ ಅದೇ ಪ್ರಿಯಕರನೊಂದಿಗೆ ಪಲಾಯನಗೈದಿದ್ದಳು ಎನ್ನಲಾಗಿದ್ದು, ನಿನ್ನೆ ಆಕೆಯನ್ನು ಪತ್ತೆ ಮಾಡಿ ಊರಿಗೆ ಕರೆತಂದು ರಾಜೀ ಪಂಚಾಯ್ತಿ ಮಾಡಿ ದಂಪತಿಯನ್ನು ಒಂದುಗೂಡಿಸಿದ್ದರು ಎನ್ನಲಾಗಿದೆ. ಆದರೆ ಇಂದು ಮಧ್ಯಾಹ್ನ ಇದೇ ವಿಚಾರವಾಗಿ ದಂಪತಿ ನಡುವೆ ಗಲಾಟೆ ನಡೆದಿದ್ದು, ಕೊನೆಗೆ ದೇವರಾಜು ತನ್ನ ಪತ್ನಿಯನ್ನು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಿ, ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದಾನೆ. ಇದರಿಂದ ತಾಯಿ ಮತ್ತು ತಂದೆಯನ್ನು ಕಳೆದುಕೊಂಡ ಮಕ್ಕಳು ಇದೀಗ ಅನಾಥರಾಗಿದ್ದಾರೆ. ಆರೋಪಿಯನ್ನು ಬಂಧಿಸಿದ ಹೆಚ್.ಡಿ.ಕೋಟೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಮೃತದೇಹವನ್ನು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಲೋಕಾಯುಕ್ತ ತನಿಖೆ ವರದಿ ಸಲ್ಲಿಕೆಗೆ ಆದೇಶ

ಮೇಲೆಯೇ ಆರೋಪ ಗಳಿರುವಾಗ ಅವರ ಅಧೀನದಲ್ಲಿ ಬರುವ ತನಿಖಾ ಸಂಸ್ಥೆಗಳಿಂದ ನಾವು ಯಾವ ರೀತಿ ತನಿಖೆಯನ್ನು ನಿರೀಕ್ಷಿಸಬಹುದು. ಆದ್ದರಿಂದ, ಸ್ವತಂತ್ರ ಸಂಸ್ಥೆ ಯಿಂದ ತನಿಖೆ ಅಗತ್ಯವಿದೆ ಎಂದರು. ಸರ್ಕಾರದಿಂದ ನೇಮಕಗೊಂಡ ಪೋಲಿಸರೇ ತನಿಖೆ ನಡೆಸುತ್ತಾರೆ. 14 ನಿವೇಶನಗಳ ಬೆಲೆ 56 ಕೋಟಿ ರೂ. ಮೊತ್ತದ್ದು. ಪ್ರಕರಣ ನ್ಯಾಯಾಲಯದ ಮೆಟ್ಟಿಲು ಹತ್ತುತ್ತಿದ್ದಂತೆ ಆರೋಪಿಗಳು ಮುಡಾಕ್ಕೆ ನಿವೇಶನ ಹಿಂತಿರುಗಿಸುತ್ತಾರೆ. ರಾಜ್ಯ ಸರ್ಕಾರ ಈ ಪ್ರಕರಣದ ಆರೋಪಿಗಳನ್ನು ರಕ್ಷಿಸಲು ಮುಂದಾಗಿದೆ. ಬಿಡಿ ನಿವೇಶನ ಹಿಂತಿರುಗಿಸಿದ ದಿನವೇ ಸರ್ಕಾರವೂ ಒಪ್ಪಿಗೆ ನೀಡಿದೆ.

ಲೋಕಾಯುಕ್ತ ಡಿವೈಎಸ್ಪಿ ಅವರು ತನಿಖೆಗಾಗಿ 140 ಕಡತಗಳನ್ನು ಪರಿಶೀಲಿಸಲು ಮುಡಾಗೆ ತೆರಳಿದ್ದರು. ಆದರೆ, ಸದರಿ ಕಡತಗಳನ್ನು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಕೊಂಡೊಯ್ದಿದ್ದಾರೆ ಎಂದು ಲೋಕಾಯುಕ್ತ ಡಿವೈಎಸ್ಪಿ ಅವರಿಗೆ ಮುಡಾ ಅಧಿಕಾರಿಗಳು ತಿಳಿಸಿದ್ದರಿಂದ ಆ ಕಡತಗಳ ಪರಿಶೀಲನೆ ಆಗಲೇ ಇಲ್ಲ. ಈ ಬಗ್ಗೆ ಅಲ್ಲಿನ ಲೋಕಾಯುಕ್ತ ಡಿವೈಎಸ್‌ಪಿ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ಕಡತಗಳ ಕಥೆ ಏನಾಗಿದೆ ಎಂಬುದು ಗೊತ್ತಿಲ್ಲ. ಇವುಗಳನ್ನು ಪರಿಶೀಲಿಸದೆ ಲೋಕಾಯುಕ್ತ ತನಿಖೆ ಹೇಗೆ ನಡೆಸುತ್ತದೆ ಎಂದು ಪ್ರಶ್ನಿಸಿದರಲ್ಲದೆ, ಲೋಕಾಯುಕ್ತ ಅಧಿಕಾರಿಗಳು ರಾಜ್ಯ ಗೃಹ ಇಲಾಖೆಯಿಂದ ನಿಯೋಜನೆ ಮೇರೆಗೆ ಲೋಕಾಯುಕ್ತಕ್ಕೆ ಬರುತ್ತಾರೆ. ಅವರು ರಾಜ್ಯ ಸರ್ಕಾರದ ಮರ್ಜಿಗೆ ಒಳಪಡುವ ಸಾಧ್ಯತೆ ಇರುತ್ತದೆ. ಹೀಗಾಗಿ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಮಣೀಂದರ್ ಸಿಂಗ್ ವಾದ ಮಂಡಿಸಿದರು. ಮಣೀಂದರ್ ಸಿಂಗ್ ವಾದವನ್ನು ಒಪ್ಪದ ಮುಖ್ಯಮಂತ್ರಿ ಪರ ವಕೀಲರುಗಳಾದ ಪ್ರೊ. ರವಿವರ್ಮ ಕುಮಾರ್, ಕಪಿಲ್ ಸಿಬಲ್, ಸರ್ಕಾರದ ಪರ ಎಜಿ ಶಶಿಕಿರಣ್ ಶೆಟ್ಟಿ, ಭೂಮಾಲೀಕ ದೇವರಾಜ್ ಪರ ದುಷ್ಯಂತ್ ದವೆ ಅವರುಗಳು ಸಂಬಂಧವಿಲ್ಲದೆ ವಾದ ಮಂಡನೆ ಮಾಡುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಇದೇ ಸಮಯದಲ್ಲಿ ಕಪಿಲ್ ಸಿಬಲ್, ರಿಟ್ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ತಮಗೆ ಕಾಲಾವಕಾಶ ಬೇಕೆಂದು ಕೋರಿದ್ದರಿಂದ ನ್ಯಾಯಮೂರ್ತಿಗಳು ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿದರು.

ಶ್ರೀ ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕರಾದ ಶಿವಕುಮಾರ್‌ಗೆ 'ಉದ್ಯೋಗದಾತ ಸುಖೀ ಭವ' ಅನ್ವಯಿಸುತ್ತದೆ

- ತುಮಕೂರು ತಪೋವನ ಹಿರೇಮಠದ ಡಾ.ಶಿವಾನಂದ ಶಿವಾಚಾರ್ಯ ಶ್ರೀಗಳು ಅಭಿಮತ
- ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸ್ವಾಮಿ ವಿವೇಕಾನಂದ ಜಯಂಯೋತ್ಸವ; ಕಾರ್ಮಿಕ ಬಂಧುಗಳಿಗೆ ಬಹುಮಾನ ವಿತರಣೆ





ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಜಯಂತೋತ್ಸವ ಮತ್ತು ಕಾರ್ಮಿಕ ಬಂಧುಗಳಿಗೆ ಬಹುಮಾನ ವಿತರಿಸುವ ಕಾರ್ಯಕ್ರಮದಲ್ಲಿ ಡಾ.ಶಿವಾನಂದ ಶಿವಾಚಾರ್ಯ ಶ್ರೀಗಳು ಮಾತನಾಡುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಸಭಿಕರನ್ನು ಕಾಣಬಹುದು.

ಮೈಸೂರು,ಜ.15(ಎಸ್‌ಪಿಎನ್)– ಜಗತ್ತಿನಲ್ಲಿ ಈಗ ನಿರುದ್ಯೋಗ ಹೆಚ್ಚಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕೌಶಲಯುತ ನೂರಾರು ಯುವಕರಿಗೆ ಉದ್ಯೋಗ ನೀಡಿ, ಅವರ ಮುಂದಿನ ಬದುಕನ್ನು ರೂಪಿಸುವ ಮಾಲೀಕರಿಗೆ 'ಉದ್ಯೋಗದಾತ ಸುಖೀ ಭವ' ಎಂದರೆ ತಪ್ಪಿಲ್ಲ ಎಂದು ತುಮಕೂರು ತಪೋವನ ಹಿರೇಮಠದ ಡಾ.ಶಿವಾನಂದ ಶಿವಾಚಾರ್ಯ ಶ್ರೀಗಳು ಅಭಿಪ್ರಾಯಪಟ್ಟರು.

ಮೈಸೂರು ವಿದ್ಯಾರಣ್ಯಪುರಂ ಮಾಧವ ಶೆಣೈ ಕಲ್ಯಾಣ ಮಂಟಪದಲ್ಲಿ ಶ್ರೀ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಜಯಂತೋತ್ಸವ ಮತ್ತು ಕಾರ್ಮಿಕ ಬಂಧುಗಳಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಈ ಹಿಂದೆ ಹಸಿದವರಿಗೆ ಅನ್ನ ನೀಡಿದವರನ್ನು 'ಅನ್ನದಾತ ಸುಖೀ ಭವ' ಸಂಸ್ಕೃತದ ಉಕ್ತಿಯನ್ನು ಉಲ್ಲೇಖಿಸುತ್ತಿದ್ದರು. ಇದೀಗ ಉದ್ಯೋಗ ನೀಡಿದ(ಮಹಾಲಕ್ಷ್ಮಿ ಸ್ವೀಟ್ಸ್ ಮಾಲೀಕರಾದ ಶಿವಕುಮಾರ್)ವರನ್ನು 'ಉದ್ಯೋಗದಾತ ಸುಖೀಭವ' ಎಂದರೆ ತಪ್ಪಿಲ್ಲ ಎಂದು ಸಮರ್ಥಿಸಿದರು. ನಿರುದ್ಯೋಗ ತಾಂಡವಾಡುವ ಕಾಲಘಟ್ಟದಲ್ಲಿ 5 ಸಾವಿರ ರೂ.ಗಳಿಂದ ಆರಂಭವಾದ ಸಿಹಿ–ತಿನಿಸುಗಳ ತಯಾರಿಸುವ ಉದ್ಯಮ ಇಂದು 1300 ಮಂದಿಗೆ ಉದ್ಯೋಗ ನೀಡುವಷ್ಟು ಬೆಳೆದಿದೆ. ಇದರ ಜೊತೆಗೆ ಮಹಾಲಕ್ಷ್ಮಿ ಟ್ರಸ್ಟ್ ವತಿಯಿಂದ ಶೈಕ್ಷಣಿಕವಾಗಿಯೂ ಬಡವರಿಗೆ ಸಹಾಯ ಹಸ್ತ ಚಾಚುತ್ತಿರುವುದು ಸಂತೋಷದ ಸಂಗತಿ. ಸಾಧಕರಾಗಲಿ ಇಲ್ಲವೇ ಬೇರೆ ಯಾರೇ ಆಗಲೀ ಸಂಘ–ಸಂಸ್ಥೆ, ಸರ್ಕಾರಗಳು ಮಾಡುವ ಸನ್ಮಾನವನ್ನು ನಂಬಿಕೊಂಡು ಬದುಕುವ ಸಾಧನೆಗೆ ಮುಂದಾಗಬಾರದು. ಬದಲಾಗಿ, ತಾವು ಇಷ್ಟಪಟ್ಟ ಕ್ಷೇತ್ರದಲ್ಲಿ ಶ್ರದ್ಧಾಭಕ್ತಿಯಿಂದ ಕೆಲಸ ಮಾಡಿದರಷ್ಟೇ ಬದುಕು ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಇಂದಿನ ವೇದಿಕೆಯಲ್ಲಿ ಅಭಿನಂದನೆಗೊಂಡಿರುವ 'ಮುದ್ದುರಾಮ' ಅಂಕಿತ ನಾಮಾಂಕಿತದೊಂದಿಗೆ ಚೌಪದಿಗಳನ್ನು ರಚಿಸಿ, ರಾಜ್ಯದ ಮನೆ ಮಾತಾಗಿರುವ ಖ್ಯಾತ ಸಾಹಿತಿ ಪ್ರೊ.ಕೆ.ಸಿ. ಶಿವಪ್ಪ ಅವರಿಗೆ ಇದೀಗ 88ರ ಹರೆಯ. ಅವರು, ನೂರಕ್ಕೂ ಹೆಚ್ಚು ವರುಷ ಬಾಳಲಿ ಎಂದು ಬಾಳಲಿ ಹರಿಸಿದ ಶ್ರೀಗಳು, ಡಿ.ವಿ.ಗುಂಡಪ್ಪ ರಚಿತ 'ಮಂಕುತಿಮ್ಮನ ಕಗ್ಗ' ಕನ್ನಡದ ಭಗವದ್ಗೀತೆ ಎಂದು ಪ್ರಸಿದ್ಧಿಗೊಂಡಿವೆ. ಅದೇ ರೀತಿ ಪ್ರೊ.ಕೆ.ಸಿ. ಶಿವಪ್ಪ ರಚಿತ 'ಮುದ್ದುರಾಮ' ನಾಮಾಂಕಿತ ಚೌಪದಿಗಳು ಮುಂದಿನ ಜನಮಾನಸದಲ್ಲಿ ಆ ಸಾಲಿಗೆ ಸೇರಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಾಧಕನಿಗೆ 'ಆಸ್ತಿ' ಅಸ್ತಿತ್ವ ಆಗಬಾರದು. ಅಸ್ತಿತ್ವವೇ ಆಸ್ತಿಯಾಗಬೇಕು. ಅಂತೆಯೇ ವಿವೇಕಾನಂದರ ಹೆಸರಿನಲ್ಲಿ 'ವಿವೇಕ' ಮತ್ತು 'ಆನಂದ' ಎರಡೂ ಸಮ್ಮಿಳಿತವಾಗಿವೆ. ವಿವೇಕಾನಂದರು ಸಮಾಜಕ್ಕೆ ಆದರ್ಶಪ್ರಾಯರಷ್ಟೇ ಅಲ್ಲ, ಅವರ 'ವ್ಯಕ್ತಿತ್ವ' ಎಲ್ಲ ಯುವಕ–ಯುವತಿಯರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತವೆ. ಅವರ ಸಂದೇಶಗಳಲ್ಲಿ 'ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ' ಯುವಜನರಿಗೆ ಶಕ್ತಿ ಸಂಜೀವಿನಿಯನ್ನು ಬೋಧಿಸಿದ ಕೀರ್ತಿ ವಿವೇಕಾನಂದರಿಗೆ ಸಲ್ಲುತ್ತದೆ ಎಂದು ವಿವೇಕಾನಂದರ ಗುಣಗಾನ ಮಾಡಿದರು.

ತಮ್ಮ ವಿದ್ವತ್‌ನಿಂದ ಸ್ವಾಮಿ ವಿವೇಕಾನಂದರು ಎಲ್ಲಾ ವಯೋಮಾನದವರೂ ಪ್ರೀತಿಸುವ ವ್ಯಕ್ತಿಯಾಗಿದ್ದರು. ಹಾಗಾಗಿ 'ತಾರುಣ್ಯ' ಎಂದರೆ ವಿವೇಕಾನಂದ, ವಿವೇಕಾನಂದ ಎಂದರೆ 'ತಾರುಣ್ಯ' ಎಂಬುದನ್ನು ನಾವಿಲ್ಲಿ ಅರಿತುಕೊಳ್ಳಬೇಕು. ಈ ಭೂಮಿಯ ಮೇಲೆ ಬದುಕಿರುವಷ್ಟು ದಿನ ನಾವು ಬಳಕೆದಾರರಷ್ಟೇ, ವಾರಸುದಾರರಲ್ಲ. ಈ ದೇಶ 'ಕ್ಷಮೆ' ನೀಡುವುದರಲ್ಲಿ ಜಗತ್ತಿನಲ್ಲಿ ಪ್ರಸಿದ್ಧಿ ಹೊಂದಿದೆ. ಪಕ್ಕದ ಪಾಕಿಸ್ತಾನ ಅನೇಕ ಬಾರೀ ನಮ್ಮ ಮೇಲೆ ಯುದ್ಧ ಸಾರಿದರೂ ನಮ್ಮ ದೇಶ ಅದರ ಕುಕೃತ್ಯವನ್ನು ಕ್ಷಮಿಸಿದೆ. ಸಂಸ್ಕೃತದಲ್ಲಿ ಕ್ಷಮೆಗೆ 'ಕ್ಷಮಾ ಧರಿತ್ರಿ' ಎಂಬ ಉಲ್ಲೇಖವಿದೆ. ಹಾಗಾಗಿ ಭಾರತ, ಜಗತ್ತಿಗೆ ಕ್ಷಮಿಸುವ ಗುಣವನ್ನು ತೋರಿಸಿಕೊಟ್ಟಿದೆ ಎಂದರು.


'ಅವಿಭಕ್ತ ಕುಟುಂಬ'ದ ಪರಿಕಲ್ಪನೆ ಭಾರತದದ್ದು, ಆದರೆ, ಇತ್ತೀಚೆಗೆ ಭಾರತದಲ್ಲಿ ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಇದರಿಂದ ಜನರ ಮನಸ್ಸು ಸಂಕುಚಿತಗೊಳ್ಳುತ್ತಿದೆ. ಪ್ರಸ್ತುತ ಕುಟುಂಬಗಳಲ್ಲಿ 'ಅವಿಭಕ್ತ ಕುಟುಂಬ' ಮಾಯವಾಗಿ, ಪ್ರತಿಯೊಬ್ಬರಲ್ಲೂ ಜಾಯಿಂಟ್ ಪೇಯಿನ್ ಹೆಚ್ಚಾಗುತ್ತಿದೆ ಎಂದು ಹಾಸ್ಯಧಾಟಿಯಲ್ಲಿ ಕುಟುಂಬ ವ್ಯವಸ್ಥೆಯನ್ನು ವಿವರಿಸಿದ ಶ್ರೀಗಳು, ಭಾರತೀಯರು, ಪಾಶ್ಚಿಮಾತ್ಯ ರಾಷ್ಟ್ರಗಳ ಪರಂಪರೆಗೆ ಮನಸ್ಥಿತಿಗೆ ಮನಸೋತು, ನಮ್ಮತನವನ್ನು ಮರೆತಿರುವುದರ ಪರಿಣಾಮವೇ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಲು ಕಾರಣ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಹಿರಿಯ ಸಾಹಿತಿ ಪ್ರೊ.ಕೆ.ಸಿ.ಶಿವಪ್ಪ, ಈ ಭೂಮಿಯಲ್ಲಿ ಇರುವಷ್ಟು ದಿನ ಸಂತೋಷದಿಂದ ಬದುಕು ನಡೆಸಿ, ಈ ಭೂಮಿ ಮೇಲೆ ಎಲ್ಲವನ್ನೂ ಬಿಟ್ಟು ಹೋಗಬೇಕು. ಅವಿಭಕ್ತ ಕುಟುಂಬ ಪರಿಕಲ್ಪನೆ ಉಳಿಯಬೇಕಾದರೆ ಕುಟುಂಬದ ಸದಸ್ಯರನ್ನು ನನ್ನವರು ಎಂದು ಭಾವಿಸಬೇಕು. ಸ್ವಾರ್ಥ ಮನೋಭಾವ ತೊರೆದು ನಿಸ್ವಾರ್ಥದಿಂದ ಕೆಲಸ ಮಾಡಬೇಕು. ಆಗ ಮಾತ್ರ ತನ್ನ ಬೆಳವಣಿಗೆಯೊಂದಿಗೆ, ತಾವು ಹುಟ್ಟುಹಾಕಿದ ಸಂಸ್ಥೆ ಬೆಳವಣಿಗೆಯಾಗಲು ಸಾಧ್ಯ ಎಂದರು.

ಪ್ರೀತಿ, ವಿಶ್ವಾಸ ಇರುವ ಜಾಗದಲ್ಲಿ ಯಾವುದೇ ಮಾತು ಇರಲಿ ಅದಕ್ಕೆ ಒಲ್ಲೆ ಎನ್ನುವುದು ಅಸಾಧ್ಯ. ಮನಸ್ಸು ಮನಸ್ಸಲ್ಲಿ ಮಾತಾಡಿದರೆ, ಪ್ರೀತಿ, ಪ್ರೀತಿಯಿಂದ ಮಾತಾಡುತ್ತದೆ. ಒಬ್ಬ ವ್ಯಕ್ತಿ ಐದು ಸಾವಿರದಿಂದ ಪ್ರಾರಂಭ ಮಾಡಿ ಅನೇಕ ಸಿಬ್ಬಂದಿಗೆ ದಾರಿದೀಪವಾಗಿದ್ದು ಇದಕ್ಕೆಲ್ಲಾ ಉದ್ಯಮಿ ಶಿವಕುಮಾರ್ ಅವರ ಶ್ರಮದ ಪ್ರತಿಫಲ. ತಮ್ಮ ಭಾಷಣದ ಕೊನೆಯಲ್ಲಿ ವೃತ್ತಿ ಗೌರವ ಬಿಂಬಿಸುವ 'ರಾಮಣ್ಣ–ಭೀಮಣ್ಣ' ಹಾಗೂ ಸುಬ್ಬಚಾರಿ' ಸಣ್ಣಕಥೆ ಹೇಳಿ, ಸಭಿಕರ ಮನಗೆದ್ದರು.

ಈ ವೇಳೆ ಮಹಾಲಕ್ಷ್ಮಿ ಸ್ವೀಟ್ಸ್ ಸಂಸ್ಥೆಯಲ್ಲಿ ಹಲವು ವರ್ಷಗಳಿಂದ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತಿರುವ ಇಪ್ಪತ್ತು ನೌಕರರು ಸಹಾಯಧನ ವಿತರಿಸಲಾಯಿತು. ನಂತರ ತಮ್ಮ ಸಂಸ್ಥೆ ನೌಕರರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ನಂತರ ಅನೇಕ ನಾಡು–ನುಡಿಗೆ ಸೇವೆ ಸಲ್ಲಿಸಿದ ಸಾಧಕರನ್ನು ಅಭಿನಂದಿಸಲಾಯಿತು. ಈ ವೇಳೆ ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಹಿರಿಯ ಸಾಹಿತಿ ಡಾ.ಎಂ.ಜಿ.ಆರ್.ಅರಸು, ಮಹಾಲಕ್ಷ್ಮೀ ಸ್ವೀಟ್ಸ್ ಮಾಲೀಕ ಶಿವಕುಮಾರ್, ಕಸಾಪ ಮಾಜಿ ಜಿಲಾಧ್ಯಕ್ಷ ಎಂ.ಚಂದ್ರಶೇಖರ್ ಸೇರಿದಂತೆ ಇತರರಿದ್ದರು.

ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.15– ಜನವರಿ 17, 19, 21, 23 ಹಾಗೂ 25 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಲಿಂಕ್ ಲೈನ್ ಕೆಲಸದ ನಿಮಿತ್ತ ಗುಂಗ್ರಾಲ್‌ಛತ್ರ, ಯಡ್ಡಹಳ್ಳಿ, ಯಾಚೇಗೌಡನಹಳ್ಳಿ, ಹೊಸಕೋಟೆ, ದಡದಕಲ್ಲಹಳ್ಳಿ, ಛತ್ರದಕೊಪ್ಪಲು, ರಾಮೇನಹಳ್ಳಿ, ಕಲ್ಲೂರು ನಾಗನಹಳ್ಳಿ, ಕಲ್ಲೂರು, ಮೀನಾಕ್ಷಿಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಈ ಪ್ರದೇಶಗಳ ವ್ಯಾಪ್ತಿಯಲ್ಲಿನ ಕೃಷಿ ಪಂಪ್‌ಸೆಟ್‌ಗಳಿಗೆ ಸದರಿ ದಿನಗಳಂದು ರಾತ್ರಿ 10 ಗಂಟೆಯಿಂದ ಮಾರನೇ ದಿನದ ಬೆಳಿಗ್ಗೆ 10 ಗಂಟೆಯವರೆಗೆ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಚಿತ್ರ ನಟ ದರ್ಶನ್ ಭೇಟಿ

ಶಸ್ತ್ರಚಿಕಿತ್ಸೆ ಬಗ್ಗೆ ವಾರದ ನಂತರ ನಿರ್ಧರಿಸುವುದಾಗಿ ಡಾ. ಅಜಯ್ ಹೆಗಡೆ ಸಲಹೆ



ಚಿಕಿತ್ಸೆ ಪಡೆದು ಮೈಸೂರಿನ ಮಣಿಪಾಲ್ ಆಸ್ಪತ್ರೆಯಿಂದ ಬುಧವಾರ ಹೊರಬಂದ ನಟ ದರ್ಶನ್.

ಮೈಸೂರು, ಜ. 15(ಆರ್‌ಕೆ)– ಇಂದು ಮೈಸೂರಿನ ಖ್ಯಾತ ಮೂಳೆ ತಜ್ಞ ಡಾ. ಅಜಯ್ ಹೆಗಡೆ ಅವರನ್ನು ಚಿತ್ರನಟ ದರ್ಶನ್ ಮಣಿಪಾಲ್ ಆಸ್ಪತ್ರೆಯಲ್ಲಿ ಭೇಟಿ ಮಾಡಿದರು.

ಎಡಗಾಲಿನ ಎಲ್5 ಎಸ್1 ಡಿಸ್ಕ್ ಸಮಸ್ಯೆಯಿಂದ ಬಳಲುತ್ತಿರುವ ನಟ ದರ್ಶನ್‌ಗೆ ಎಪಿಡ್ಯೂರಲ್ ಮತ್ತು ನರ್ವ್ ಬ್ಲಾಕ್ ಇಂಜೆಕ್ಷನ್ ಹಾಗೂ ನಿರಂತರ ಫಿಸಿಯೋಥೆರಪಿ ತೆಗೆದುಕೊಳ್ಳುವಂತೆ ವೈದ್ಯರು ಸಲಹೆ ನೀಡಿದ್ದಾರೆ. ಇಂದು ಮಧ್ಯಾಹ್ನ 12.10 ಗಂಟೆಗೆ ಮಣಿಪಾಲ್ ಆಸ್ಪತ್ರೆಗೆ ಆಗಮಿಸಿದ ದರ್ಶನ್‌ರನ್ನು ನೇರವಾಗಿ ಆಪರೇಷನ್ ಥಿಯೇಟರ್‌ಗೆ ಕೊಂಡೊಯ್ದು ಆರೋಗ್ಯ ತಪಾಸಣೆ ಮಾಡಲಾಯಿತು. ನಂತರ ಮಧ್ಯಾಹ್ನ 12.45 ಗಂಟೆ ವೇಳೆಗೆ ಅವರು ಆಸ್ಪತ್ರೆ ಯಿಂದ ಮೈಸೂರಿನ ತೋಟದ ಮನೆಗೆ ಹಿಂದಿರುಗಿದರು.

ದರ್ಶನ್ ಕಾಲಿನ ನೋವಿಗೆ ಸರ್ಜರಿ ಬಗ್ಗೆ 1 ವಾರ ನಿಗಾ ವಹಿಸಿದ ಬಳಿಕ ತೀರ್ಮಾನಿಸಲಾಗುವುದು. ಮೊದಲಿಗಿಂತ ಈಗ ಅವರ ಆರೋಗ್ಯದಲ್ಲಿ ಸುಧಾರಣೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಾ. ಅಜಯ್ ಹೆಗಡೆ, ವಾರದ ಬಳಿಕ ದರ್ಶನ್‌ಗೆ ಶಸ್ತ್ರ ಚಿಕಿತ್ಸೆಗೊಳಪಡಿಸುವ ಸಂಬಂಧ ನಿರ್ಧರಿಸಲಾಗುವುದು ಎಂದು ಹೇಳಿದರು.

ಹಸುಗಳ ಕೆಚ್ಚಲು ಕೊಯ್ದ ಘಟನೆ

ಮಾಲೀಕರಿಗೆ ಮೂರು ಹಸುಗಳನ್ನು ಉಡುಗೊರೆಯಾಗಿ ನೀಡಿದ ಸಚಿವ ಜಮೀರ್



ಸಂತ್ರಸ್ತರಿಗೆ 3 ಲಕ್ಷ ರೂ. ಮೌಲ್ಯದ 3 ಹಸುಗಳನ್ನು ಸಚಿವ ಜಮೀರ್ ಹಸ್ತಾಂತರಿಸಿದರು.

ಬೆಂಗಳೂರು: ನಗರದ ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕೊಯ್ದ ಘಟನೆಗೆ ಸಂಬಂಧಿಸಿದಂತೆ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಜಾನುವಾರುಗಳ ಮಾಲೀಕರಿಗೆ ಬುಧವಾರ ಮೂರು ಹಸುಗಳನ್ನು ಉಡುಗೊರೆಯಾಗಿ ನೀಡಿದ್ದಾರೆ.

ಇದರೊಂದಿಗೆ ಕುಟುಂಬಕ್ಕೆ ಮೂರು ಲಕ್ಷ ರೂ.ಗಳ ಪರಿಹಾರವನ್ನು ಜಮೀರ್ ನೀಡಿದ್ದಾರೆ. ಈ ವೇಳೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಾಸೀರ್ ಅಹ್ಮದ್, ಕೆಎಂಡಿಸಿ ಅಧ್ಯಕ್ಷ ಅಲ್ತಾಫ್ ಖಾನ್, ಮುಖಂಡರಾದ ಅತುಷ್, ಗೌಸಿ, ವಿನಾಯಕ್, ಪ್ರಸಾದ್ ಇದ್ದರು.

ಚಾಮರಾಜಪೇಟೆಯ ವಿನಾಯಕ ನಗರ ಪ್ರದೇಶದಲ್ಲಿ ಅಪರಿಚಿತ ದುಷ್ಕರ್ಮಿಗಳು ಮೂರು ಹಸುಗಳ ಕೆಚ್ಚಲು ಕತ್ತರಿಸಿದ್ದರು. ಈ ಹಿನ್ನೆಲೆಯಲ್ಲಿ ಬೆಂಗಳೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), 2023ರ ಸೆಕ್ಷನ್ 325 ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಬಿಹಾರದ ಚಂಪಾರಣ್ ಮೂಲದ ಶೇಖ್ ನಸ್ರು (30) ಎಂಬಾತನನ್ನು ಭಾನುವಾರ ಹಸುಗಳ ಕೆಚ್ಚಲು ಕತ್ತರಿಸಿದ ಆರೋಪದ ಮೇಲೆ ಬಂಧಿಸಲಾಗಿದೆ.

ಹಸುಗಳ ಮಾಲೀಕ ಕರ್ಣ ಮಾತನಾಡಿ, 'ನನಗೆ ತೀವ್ರ ಬೇಸರವಾಗಿದೆ, ರಾತ್ರಿ ನಮ್ಮ ಮನೆ ಬಳಿಯಲ್ಲಿ ಹಸುಗಳನ್ನು ಕಟ್ಟಿ ಹಾಕಲಾಗಿತ್ತು. ಬೆಳಗ್ಗೆ ಈ ಅಮಾನುಷ ಕೃತ್ಯ ಬೆಳಕಿಗೆ ಬಂದಿದೆ. ಯಾರು ಈ ಕೃತ್ಯ ಎಸಗಿದ್ದಾರೆ ಎಂಬುದು ನಮಗೆ ತಿಳಿದಿಲ್ಲ. ಆದರೆ, ನಾವು ದೂರು ದಾಖಲಿಸಿದ್ದೇವೆ. ನನಗೆ ನ್ಯಾಯ ಬೇಕು ಎಂದರು. ಗಾಯಗೊಂಡ ಹಸುಗಳನ್ನು ಚಿಕಿತ್ಸೆಗಾಗಿ ಚಾಮರಾಜಪೇಟೆಯ ಪಶು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಸಂಕ್ರಾಂತಿ ಹಬ್ಬಕ್ಕೂ ಮುನ್ನ ಅಪರಾಧಿಗಳನ್ನು ಬಂಧಿಸದಿದ್ದರೆ 'ಕಪ್ಪು ಸಂಕ್ರಾಂತಿ' ಆಚರಿಸುವುದಾಗಿ ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆ ನೀಡಿತ್ತು

ಹಿರಿಯ ನಟ ಸರಿಗಮ ವಿಜಿ ನಿಧನ



ಬೆಂಗಳೂರು: ಕನ್ನಡ ಚಿತ್ರರಂಗ ಹಾಗೂ ಟಿವಿ ಲೋಕದ ಹಿರಿಯ ನಟ ಸರಿಗಮ ವಿಜಿ ಅವರು ನಿಧನ ಹೊಂದಿದ್ದಾರೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಅವರು ಕಳೆದ ಕೆಲ ದಿನಗಳಿಂದಲೂ ಅನಾರೋಗ್ಯದಿಂದ ಬಳಲುತ್ತಿದ್ದರು.

ವಿಜಿ ಅವರಿಗೆ ಶ್ವಾಸಕೋಶದ ಸಮಸ್ಯೆ ಎದುರಾಗಿತ್ತು. ಯಶವಂತಪುರದ ಬಳಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನ್ಯುಮೋನಿಯಾಗೆ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ವಿಜಿ ಅವರು ಇಂದು ಬೆಳಗ್ಗೆ ನಿಧನ ಹೊಂದಿದ್ದಾರೆ. ಸರಿಗಮ ವಿಜಿ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಜ.16 ಬೆಳಗ್ಗೆ ಚಾಮರಾಜಪೇಟೆಯ ಟಿಆರ್ ಮಿಲ್ ಬಳಿ ಬರುವ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ವಿಜಿ ಅವರದ್ದು ಬಲು ಸುದೀರ್ಘವಾದ ಸಿನಿಮಾ ಮತ್ತು ರಂಗಭೂಮಿ ಪಯಣ. ನಾಟಕಗಳಲ್ಲಿ ನಟಿಸುತ್ತಿದ್ದ ವಿಜಿ ಅವರ 'ಸಂಸಾರದಲ್ಲಿ ಸರಿಗಮ' ನಾಟಕ ಬಹಳ ಹೆಸರು ಕೊಟ್ಟಿತ್ತು. ಇದೇ ಕಾರಣಕ್ಕೆ ಅವರಿಗೆ ಸರಿಗಮ ವಿಜಿ ಹೆಸರು ಬಂದಿತ್ತು. ನಾಟಕದಿಂದ ಸಿನಿಮಾಕ್ಕೆ ಪದಾರ್ಪಣೆ ಮಾಡಿದ ವಿಜಿ ಅವರು ಹಲವಾರು ಸಿನಿಮಾಗಳಲ್ಲಿ ಪೋಷಕ ಪಾತ್ರ, ಹಾಸ್ಯ ಪಾತ್ರ ಕೆಲವೆಡೆ ವಿಲನ್ ಪಾತ್ರಗಳಲ್ಲಿಯೂ ನಟಿಸಿದ್ದಾರೆ.

ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್‌ಗೆ ಸಂಸದ ಯದುವೀರ್ ಮನವಿ

ಮೈಸೂರಿನ ಪಾರಂಪರಿಕತೆ, ಐತಿಹಾಸಿಕತೆ, ಸಂರಕ್ಷಣೆಯೊಂದಿಗೆ ಪ್ರವಾಸೋದ್ಯಮಕ್ಕೆ ನೆರವು ಕಲ್ಪಿಸಿ

- ಬನ್ನಿಮಂಟಪ ಸಮೀಪದ ಎಲ್‌ಐಸಿ ಸರ್ಕಲ್ ಬಳಿ 'ಅರ್ಜುನ'ನ ಸ್ಮಾರಕ ನಿರ್ಮಾಣಕ್ಕೆ ಮನವಿ
- ಮೈಸೂರು ಹಳೆಯ ಜಿಲ್ಲಾಧಿಕಾರಿ ಕಚೇರಿಯನ್ನು ಯೋಗ ಮ್ಯೂಸಿಯಂ ಮಾಡುವಂತೆ ಒತ್ತಾಯ

ನವದೆಹಲಿ,ಜ.15–ಪಾರಂಪರಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ರಾಜಧಾನಿ ಎಂದೇ ವಿಶ್ವಮಟ್ಟದಲ್ಲಿ ಖ್ಯಾತಿ ಹೊಂದಿರುವ ಮೈಸೂರಿನಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಯೋಜನೆಗಳಿಗೆ ನೆರವು ಒದಗಿಸಬೇಕೆಂದು ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ಈ ಸಂಬಂಧ ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಸಂಸದರು, ಮೈಸೂರಿನ ಪಾರಂಪರಿಕತೆಗೆ ತಕ್ಕಂತೆ ಎಲ್‌ಐಸಿ ಸರ್ಕಲ್ ಬಳಿ ಅರ್ಜುನ ಸ್ಮಾರಕ ಮತ್ತು ಮೈಸೂರಿನ ಹಳೆಯ ಜಿಲ್ಲಾಧಿಕಾರಿ ಕಚೇರಿಯನ್ನು ಯೋಗ ಮ್ಯೂಸಿಯಂ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಯದುವೀರ್, ಮೈಸೂರಿನ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಕೆಲವು ಯೋಜನೆಗಳ ಕುರಿತು ಚರ್ಚಿಸಲಾಗಿದೆ. ಇದರಲ್ಲಿ ಪ್ರಮುಖವಾಗಿರುವುದು ದಸರಾ ಆನೆ ಅರ್ಜುನನ ಸ್ಮರಣಾರ್ಥ ಸ್ಮಾರಕ ಹಾಗೂ ಯೋಗ ಮ್ಯೂಸಿಯಂ ಬಗ್ಗೆ ಸಚಿವರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಹೇಳಿದರು.


ಮೈಸೂರು ಮತ್ತು ದಸರಾ ಆನೆಗಳ ನಡುವೆ ಭಾವನಾತ್ಮಕ ಸಂಬಂಧವಿದೆ. ಎಲ್ಲರ ಮನ ಸೆಳೆದಿದ್ದ ಅರ್ಜುನ ಆನೆ ದುರದೃಷ್ಟವಶಾತ್ ನಮ್ಮನ್ನು ಅಗಲಿದೆ. ಹಲವು ವರ್ಷಗಳ ಕಾಲ ತಾಯಿ ಚಾಮುಂಡೇಶ್ವರಿ ವಿಗ್ರಹವನ್ನು ಚಿನ್ನದ ಅಂಬಾರಿಯಲ್ಲಿ ಹೊತ್ತು ಗಾಂಭೀರ್ಯದಿಂದ ಸಾಗಿದ ಈ ಗಜ ನೆನಪಿನಲ್ಲಿ ಸ್ಮಾರಕ ನಿರ್ಮಾಣ ಮಾಡುವುದು ಸೂಕ್ತ ಎನಿಸಿದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅರ್ಜುನ ಸ್ಮಾರಕ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಕೇಂದ್ರ ಸಚಿವರಿಗೆ ಈ ಸಂಬಂಧ ಮನವಿ ಸಲ್ಲಿಸಲಾಗಿದೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಆದಷ್ಟು ಬೇಗ ಇದು ಅನುಷ್ಠಾನಕ್ಕೆ ಬರುವ ನಿರೀಕ್ಷೆ ಇದೆ ಎಂದು ವಿವರಿಸಿದರು.

ಮೈಸೂರು ಮತ್ತು ದಸರಾ ಆನೆಗಳಿಗೆ ದಶಕಗಳ ಅವಿನಾಭಾವ ಸಂಬಂಧವಿದೆ. ಮೈಸೂರು ಎಂದರೆ ದಸರಾ ಆನೆಗಳು ಎನ್ನುವಷ್ಟರ ಮಟ್ಟಿಗೆ ಸಮ್ಮಿಳಿತಗೊಂಡಿವೆ. ಈ ನಿಟ್ಟಿನಲ್ಲಿ ದಸರಾ ಜಂಬೂಸವಾರಿ ರಾತ್ರಿ ವೇಳೆ ಪಂಜಿನ ಕವಾಯತು ನಡೆಯುವ ಬನ್ನಿಮಂಟಪ ಸಮೀಪದ ಎಲ್‌ಐಸಿ ಸರ್ಕಲ್ ಬಳಿ ದಸರಾ ಆನೆ ಅರ್ಜುನ ಹೆಸರಿನಲ್ಲಿ ಸ್ಮಾರಕ ನಿರ್ಮಿಸಿದರೆ ತಕ್ಕ ಶ್ರದ್ಧಾಂಜಲಿ ಸಲ್ಲಿಸಿದಂತಾಗುತ್ತದೆ ಎಂದು ಸಂಸದರು ಹೇಳಿದ್ದಾರೆ.

ಮೈಸೂರಿನ ಶ್ರೀಮಂತ ಪಾರಂಪರಿಕತೆ ಹಾಗೂ ವಿಶ್ವವಿಖ್ಯಾತ ದಸರಾ ಹಬ್ಬದ ಆಚರಣೆಗೆ ಇದು ಮತ್ತೊಂದು ಕಳಶವಿಟ್ಟಂತೆ ಇರುತ್ತದೆ. ಅರ್ಜುನ ಸ್ಮರಣಾರ್ಥ ಸ್ಮಾರಕ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಅರ್ಜುನ ಆನೆ ಹಲವಾರು ವರ್ಷಗಳ ಕಾಲ ತನ್ನ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದೆ. ಆದರೆ ಕಾಡಾನೆಯೊಂದರ ದಾಳಿಯಿಂದಾಗಿ ನಾವು ಅರ್ಜುನ ಆನೆಯನ್ನು ಕಳೆದುಕೊಂಡಿದ್ದೇವೆ. ಈಗ ಈ ಅರ್ಜುನ ಆನೆಯ ಸ್ಮರಣಾರ್ಥ, ಗೌರವ ಸೂಚಕವಾಗಿ ಎಲ್‌ಐಸಿ ಸರ್ಕಲ್‌ಗೆ ಅರ್ಜುನ ಆನೆಯ ಹೆಸರಿಡಬೇಕು. ಇದನ್ನು ಐತಿಹಾಸಿಕ ಹಾಗೂ ಪ್ರಮುಖ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬೇಕು ಎಂದು ಸಂಸದರು ತಮ್ಮ ಪತ್ರದಲ್ಲಿ ಕೋರಿದ್ದಾರೆ.

ಈ ಅರ್ಜುನ ಆನೆ ಸ್ಮಾರಕ, ಮೈಸೂರಿನ ಚರಿತ್ರೆಗೆ, ಸಾಂಸ್ಕೃತಿಕತೆ, ಐತಿಹಾಸಿಕತೆ ಹಾಗೂ ಪಾರಂಪರಿಕತನಕ್ಕೆ ಸಾಕ್ಷಿಯಾಗುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಬೇಕು. ಪರಿಸರಸ್ನೇಹಿ ಹಾಗೂ ಸಾಂಸ್ಕೃತಿಕತೆಯ ಸಂಗಮದೊಂದಿಗೆ ಇದನ್ನು ಅಭಿವೃದ್ಧಿಪಡಿಸಿದರೆ ಮೈಸೂರಿನ ಪ್ರವಾಸೋದ್ಯಮ ಕ್ಷೇತ್ರ ಹಾಗೂ ಆರ್ಥಿಕತೆಗೆ ಮತ್ತಷ್ಟು ಕೊಡುಗೆ ನೀಡಿದಂತಾಗುತ್ತದೆ.

ಮೈಸೂರಿನ ಇತಿಹಾಸದ ಚಿತ್ರಣ ಮೈಸೂರಿನ ಇತಿಹಾಸ ಹಾಗೂ ದಸರಾ ಚಿತ್ರಣವನ್ನು ತೋರಲು ವೃತ್ತದ ಸುತ್ತಲೂ ಭಿತ್ತಿಚಿತ್ರಗಳು, ಫಲಕಗಳು ಮತ್ತು ಪ್ರಾಚೀನ ಸಂಪ್ರದಾಯದಲ್ಲಿ ಆನೆಗಳ ಪ್ರಾಮುಖ್ಯತೆಯನ್ನು ತೋರಬಹುದು. ಸೌರ–ಚಾಲಿತ ಬೆಳಕಿನ ವ್ಯವಸ್ಥೆ ಹಾಗೂ ಮಳೆನೀರು ಕೊಯ್ಲು, ವ್ಯವಸ್ಥೆ, ಉದ್ಯಾನವನ ಅಭಿವೃದ್ಧಿಪಡಿಸುವ ಮೂಲಕ ಯೋಜನೆಯನ್ನು ಪರಿಸರಸ್ನೇಹಿ ಯೋಜನೆಯಾಗಿ ರೂಪಿಸಬಹುದು ಎಂದು ಪತ್ರದಲ್ಲಿ ವಿವರಿಸಿರುವ ಅವರು, ಸಂಪೂರ್ಣ ಯೋಜನೆ ವರದಿ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಅರ್ಜುನ ಆನೆಯ ಬೃಹತ್ ಪ್ರತಿಮೆ ನಿರ್ಮಾಣ ಸೇರಿದಂತೆ ಈ ಐತಿಹಾಸಿಕ ಹಾಗೂ ಪಾರಂಪರಿಕ ಯೋಜನೆಯ ಒಟ್ಟು ವೆಚ್ಚ 20 ಕೋಟಿ ರೂ. ಆಗಲಿದೆ ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.



ಮೈಸೂರಿನಲ್ಲಿ ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ಯೋಜನೆಗಳಿಗೆ ಅಗತ್ಯ ನೆರವು ಒದಗಿಸಬೇಕೆಂದು ಕೋರಿ ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಮೈಸೂರು–ಕೊಡಗು ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಪತ್ರ ಸಲ್ಲಿಸಿದರು.

> "ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯನ್ನು ಯೋಗ ಮ್ಯೂಸಿಯಂ ಆಗಿ ಪರಿವರ್ತಿಸುವ ಬಗ್ಗೆಯೂ ಮನವಿ ಮಾಡಿದ್ದೇನೆ ಎಂದ ಸಂಸದರು, ಈಗ ಜಾಗತಿಕವಾಗಿ ಮನ್ನಣೆ ಗಳಿಸಿರುವ ಯೋಗ ಜನ್ಮ ತಾಳಿದ್ದು ಮೈಸೂರಿನಲ್ಲಿ. ಹೀಗಾಗಿ ಯೋಗ ಕುರಿತು ಜನರಿಗೆ ಇನ್ನಷ್ಟು ಮಾಹಿತಿ ತಿಳಿಸಿಕೊಡುವ ನಿಟ್ಟಿನಲ್ಲಿ ಹಳೆಯ ಜಿಲ್ಲಾಧಿಕಾರಿ ಕಚೇರಿಯನ್ನು ಯೋಗ ಮ್ಯೂಸಿಯಂ ಆಗಿ ಪರಿವರ್ತಿಸುವುದು ಸೂಕ್ತ ಎಂದರು. ಈಗಾಗಲೇ ಇದನ್ನು ನವೀಕರಣ ಮಾಡಲು ರಾಜ್ಯ ಸರ್ಕಾರವು 'ಸ್ವದೇಶಿ ದರ್ಶನ್' ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಮನವಿ ಸಲ್ಲಿಸಿದೆ, ಈ ನಿಟ್ಟಿನಲ್ಲಿ ಯೋಗ ಮಹತ್ವ ಮತ್ತು ಯೋಗ ಶ್ರೀಮಂತ ಇತಿಹಾಸವನ್ನು ಪ್ರಚುರಪಡಿಸಲು ಅನುವಾಗುವಂತೆ ಮ್ಯೂಸಿಯಂ ನಿರ್ಮಿಸಲು ಕೇಂದ್ರ ಸರ್ಕಾರ ಕೂಡ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಲು ಮನವಿ ಸಲ್ಲಿಸಲಾಗಿದೆ. ಬಿಕೆಎಸ್ ಅಯ್ಯಂಗಾರ್ ಅವರು ಮೈಸೂರಿಗೆ ಯೋಗದ ಬಗ್ಗೆ ವಿಶ್ವ ಮನ್ನಣೆ ಕೊಡಿಸಿದ್ದಾರೆ. ನಮ್ಮ ಅರಮನೆಯಲ್ಲಿಯೂ ನಿರಂತರವಾಗಿ ಯೋಗ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ಮೈಸೂರಿಗೆ ಯೋಗಕ್ಕೆ ವಿಶೇಷ ನಂಟಿದೆ. ಈ ನಿಟ್ಟಿನಲ್ಲಿ ಹಳೆಯ ಜಿಲ್ಲಾಧಿಕಾರಿ ಕಚೇರಿಯನ್ನು ಯೋಗ ಮ್ಯೂಸಿಯಂ ಆಗಿ ಪರಿವರ್ತಿಸಿದರೆ ಪ್ರವಾಸೋದ್ಯಮಕ್ಕೆ ಹಾಗೂ ಯೋಗಕ್ಕೆ ಮನ್ನಣೆ ನೀಡಿದಂತಾಗುತ್ತದೆ ಎಂದು ಕೇಂದ್ರ ಸಚಿವರಿಗೆ ವಿವರಿಸಲಾಗಿದೆ.
>
> – ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ವಕೀಲರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಲಾಗೈಡ್ ವೆಂಕಟೇಶ್ ಅವರಿಗೆ ಸನ್ಮಾನ



ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ವಕೀಲರು, ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಎಚ್.ಎನ್.ವೆಂಕಟೇಶ್ ಅವರನ್ನು ಮೈಸೂರಿನ ನ್ಯಾಯಾಲಯದ ಆವರಣದಲ್ಲಿರುವ ಮೈಸೂರು ಜಿಲ್ಲಾ ವಕೀಲರ ಗೃಹ ನಿರ್ಮಾಣ ಸಂಘದ ಕಚೇರಿಯಲ್ಲಿ ಸಂಘದ ಅಧ್ಯಕ್ಷ ಲೋಕೇಶ್‌ಗೌಡ, ಉಪಾಧ್ಯಕ್ಷ ಪ್ರಸನ್ನಕುಮಾರ್ ಮೈಸೂರು ಪೇಟ ತೊಡಿಸಿ, ಹಾರ ಹಾಕಿ ಶಾಲು ಹೊದಿಸಿ, ಗೌರವಿಸಿದರು. ಸಂಘದ ನಿರ್ದೇಶಕರಾದ ಗ್ರೇಸಿ ಸಿಂಗ್, ಗೋಪಾಲಗೌಡ, ಶಂಭುಗೌಡ, ತೇಜಸ್ವಿ, ರಾಜು, ಮನು, ಶ್ರೀಧರ್, ಶಿವಣ್ಣ ಹಲವರು ಉಪಸ್ಥಿತರಿದ್ದರು.

ಸ್ವಯಂ ಸೇವಾ ಸಂಘ ಸಂಸ್ಥೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜ.15– 2024–25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸರ್ಕಾರೇತರ ಸಂಘ, ಸಂಸ್ಥೆಗಳ ಸಮನ್ವಯದೊಂದಿಗೆ ಜಾಗೃತಿ, ಅರಿವು ಮೂಡಿಸಲು ವಿಚಾರಗೋಷ್ಠಿ, ಕಾರ್ಯಾಗಾರ ಮತ್ತು ಇತರೆ ಕಾರ್ಯಕ್ರಮಗಳನ್ನು ಜಿಲ್ಲಾ, ತಾಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸದರಿ ಸಂಘ ಸಂಸ್ಥೆಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಜ.22ರಂದು ಸಂಜೆ 5 ಗಂಟೆಯೊಳಗೆ ಅರ್ಜಿಯನ್ನು ಸಲ್ಲಿಸಬೇಕು. ಸ್ವಯಂ ಸೇವಾ ಸಂಘ ಸಂಸ್ಥೆಯು ನೋಂದಾಯಿತ ಸಂಸ್ಥೆಯಾಗಿದ್ದು, ನೋಂದಣಿ ಚಾಲ್ತಿಯಲ್ಲಿರಬೇಕು. ಸ್ವಯಂ ಸೇವಾ ಸಂಘ ಸಂಸ್ಥೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಕನಿಷ್ಠ 5 ವರ್ಷಗಳ ಸೇವೆಯೊಂದಿಗೆ ಅನುಭವ ಹೊಂದಿರಬೇಕು. ಸ್ವಯಂ ಸೇವಾ ಸಂಘ ಸಂಸ್ಥೆ ಪ್ರತಿ ವರ್ಷ ಆಡಿಟ್ ಮಾಡಿಸಿರಬೇಕು. ಸ್ವಯಂ ಸೇವಾ ಸಂಘ ಸಂಸ್ಥೆಯ ಪರೀಕ್ಷಾ ನೋಂದಣಿ ಪ್ರಮಾಣ ಪತ್ರ, ನವೀಕರಣ ಪ್ರಮಾಣ ಪತ್ರ, ಮೂರು ವರ್ಷದ ಲೆಕ್ಕಪರಿಶೋಧನಾ ವರದಿ. ಸ್ವಯಂಸೇವಾ ಸಂಘ, ಸಂಸ್ಥೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ 5 ವರ್ಷ ಸೇವೆ ಸಲ್ಲಿಸಿರುವ ಬಗ್ಗೆ ದೃಢೀಕೃತ ದಾಖಲೆ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಆಯೋಜಿಸಿರುವ ಬಗ್ಗೆ ದಾಖಲೆಗಳ ಛಾಯಾಚಿತ್ರ ಹಾಗೂ ಪತ್ರಿಕಾ ವರದಿ ಸಲ್ಲಿಸಬೇಕು.

ಗಣರಾಜ್ಯೋತ್ಸವಕ್ಕೆ ಮೈಸೂರಲ್ಲಿ ಸರ್ವ ಸಿದ್ಧತೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಗಣರಾಜ್ಯೋತ್ಸವ ಆಚರಣೆ ಸಂಬಂಧ ಅಧಿಕಾರಿಗಳೊಂದಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಪೂರ್ವಭಾವಿ ಸಭೆ ನಡೆಸಿದರು.

ಮೈಸೂರು, ಜ.15(ಆರ್‌ಕೆ)–ಜನವರಿ 26ರಂದು ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆಯಲಿರುವ ಗಣರಾಜ್ಯೋತ್ಸವಕ್ಕೆ ಸರ್ವ ರೀತಿಯಲ್ಲಿ ಸಿದ್ಧತೆ ನಡೆಸಲಾಗಿದೆ.

ಅಂದು ಬೆಳಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಧ್ವಜಾರೋಹಣ ನೆರವೇರಿಸುವರು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದ್ದಾರೆ. ಇಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗಣರಾಜ್ಯೋತ್ಸವ ಆಚರಣೆ ಸಂಬಂಧ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಪೊಲೀಸ್ ಇಲಾಖೆಯಿಂದ ಪರೇಡ್, ಧ್ವಜ ಸ್ತಂಭ, ವೇದಿಕೆ, ಸ್ವಚ್ಛತೆ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ನೋಡಿಕೊಳ್ಳಬೇಕಾ ಎಂದರು.

ಅಂದು ಸಂಜೆ ಕಲಾಮಂದಿರದಲ್ಲಿ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಕೆಎಸ್‌ಆರ್‌ಟಿಸಿಯಿಂದ ಬಸ್‌ಗಳ ವ್ಯವಸ್ಥೆ ಮಾಡುವುದು. ಸ್ವಾಗತ ಸಮಿತಿಯಿಂದ ಶಿಷ್ಟಾಚಾರದ ಅನ್ವಯ ಗಣರಾಜ್ಯೋತ್ಸವದ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರು, ಅಧಿಕಾರಿಗಳು, ಸರ್ಕಾರೇತರ ಸಂಘ–ಸಂಸ್ಥೆಗಳಿಗೆ ತಲುಪಿಸಬೇಕು ಎಂದ ಅವರು, ಮೈಸೂರು ಹಾಲು ಒಕ್ಕೂಟದ ವತಿಯಿಂದ ಭಾಗವಹಿಸುವ ಶಾಲಾ ಮಕ್ಕಳಿಗೆ ಸಿಹಿ ತಿಂಡಿ ಪೂರೈಸಬೇಕೆಂದು ತಿಳಿಸಿದರು.

ನಿಷೇಧಿಸಿರುವ ಪ್ಲಾಸ್ಟಿಕ್ ರಾಷ್ಟ್ರಧ್ವಜ ಮಾರಾಟ ಮಾಡದಂತೆ ಕ್ರಮ ವಹಿಸಬೇಕು. ಕಾರ್ಯಕ್ರಮಕ್ಕೆ ಸರ್ಕಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಡ್ಡಾಯವಾಗಿ ಹಾಜರಾಗಬೇಕು. ಆಯಾ ಇಲಾಖಾ ಮುಖ್ಯಸ್ಥರು ಹಾಜರಾತಿಯನ್ನು ತಪ್ಪದೇ ತೆಗೆದುಕೊಳ್ಳಬೇಕೆಂದು ಎಡಿಸಿ ಡಾ.ಶಿವರಾಜ್ ತಿಳಿಸಿದರು.


ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.15– ರೈಲ್ವೇ ವಿದ್ಯುತ್ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕೆಲಸ ನಿಮಿತ್ತ ಜನವರಿ 16 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ರೈಲ್ವೇ ಲೇಔಟ್, ವಿಪ್ರೋ ಲೇಔಟ್, ಶಾದನ ಲೇಔಟ್, ಭಾರತೀಯ ಶೃಂಗ ಲೇಔಟ್, ಮೈಪಾಲ್ ರಸ್ತೆ, ಜಿ.ಜೆ ಇಂಜನಿಯರಿಂಗ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಜಯನಗರ ವಿದ್ಯುತ್ ಮಾರ್ಗದ ಪ್ರೀತಿ ಬಡಾವಣೆ, ಚಿಕ್ಕಹರದನಹಳ್ಳಿ, ಶ್ರೀರಾಂಪುರ 2ನೇ ಹಂತದ ಭಾಗಶಃ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಬ್ರಿಟನ್ ಹಣಕಾಸು ಸಚಿವೆ ಸ್ಥಾನಕ್ಕೆ ಶೇಖ್ ಹಸೀನಾ ಸೊಸೆ ಟ್ಯೂಲಿಪ್ ಸಿದ್ಧಿಕ್ ರಾಜೀನಾಮೆ



ಲಂಡನ್: ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಸೋದರ ಸೊಸೆ ಮತ್ತು ಲೇಬರ್ ಪಕ್ಷದ ಸಂಸದೆ ಟ್ಯೂಲಿಪ್ ಸಿದ್ದಿಕ್ ಬ್ರಿಟನ್ ಹಣಕಾಸು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕಳೆದ ವಾರ ಲಂಡನ್‌ನಲ್ಲಿರುವ ಅವರ ಆಸ್ತಿಗಳಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಮತ್ತು ಪಾರದರ್ಶಕತೆಯ ಕೊರತೆಯ ಆರೋಪವನ್ನು ಎದುರಿಸಿದ್ದರು. ಬಾಂಗ್ಲಾದೇಶ ಸರ್ಕಾರದ ಉಸ್ತುವಾರಿ ಮುಖ್ಯಸ್ಥ ಡಾ. ಮುಹಮ್ಮದ್ ಯೂನಸ್, ಅವರ ವಿರುದ್ಧ ಭ್ರಷ್ಟಾಚಾರದ ಗಂಭೀರ ಆರೋಪಗಳನ್ನು ಮಾಡಿದ ಕೆಲವು ದಿನಗಳ ನಂತರ ರಾಜೀನಾಮೆ ನೀಡಲಾಗಿದೆ. ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ಸಿದ್ದಿಕಿ ತಮ್ಮ ರಾಜೀನಾಮೆ ಪತ್ರದಲ್ಲಿ ಈ ಆರೋಪ ತಳ್ಳಿಹಾಕಿದ್ದು, ಎಲ್ಲಾ ವಿಷಯಗಳಲ್ಲಿ ಸಂಪೂರ್ಣ ಪಾರದರ್ಶಕತೆ ಮತ್ತು ಅಧಿಕಾರಿಗಳ ಸಲಹೆಯನ್ನು ಪಾಲಿಸಿದ್ದೇನೆ. ಟ್ಯೂಲಿಪ್ ಸಿದ್ದಿಕಿ ಬದಲಿಗೆ ಲೇಬರ್ ಸಂಸದೆ ಎಮ್ಮಾ ರೆನಾಲ್ಡ್ಸ್ ಹೊಸ ಹಣಕಾಸು ಮಂತ್ರಿಯಾಗಲಿದ್ದಾರೆ. ಟ್ಯೂಲಿಪ್ ವಿರುದ್ಧ ಸಂಹಿತೆ ಉಲ್ಲಂಘನೆಯ ಯಾವುದೇ ಪ್ರಕರಣ ಕಂಡುಬಂದಿಲ್ಲ ಅಥವಾ ಆಕೆಯಿಂದ ಹಣಕಾಸಿನ ಅಕ್ರಮಗಳ ಬಗ್ಗೆ ಯಾವುದೇ ಪುರಾವೆಗಳಿಲ್ಲ ಎಂದು ಪ್ರಧಾನಿ ಕೀರ್ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮನೆಯವರು ನಿಶ್ಚಯಿಸಿದ್ದ ಮದುವೆಗೆ ಒಪ್ಪದ ಮಗಳನ್ನು ಕೊಂದ ತಂದೆ

ಭೋಪಾಲ್: ಮಧ್ಯಪ್ರದೇಶದ ಗ್ವಾಲಿಯರ್‌ನ ವ್ಯಕ್ತಿಯೊಬ್ಬ ತನ್ನ 20 ವರ್ಷದ ಮಗಳನ್ನು ಪೊಲೀಸ್ ಅಧಿಕಾರಿಗಳು ಮತ್ತು ಪಂಚಾಯತಿಯವರ ಎದುರೇ ಕೊಲೆ ಮಾಡಿದ್ದಾನೆ. ಮನೆಯವರು ನಿಶ್ಚಯಿಸಿದ್ದ ಮದುವೆಗೆ ಮೃತ ಯುವತಿ ತನು ಒಪ್ಪಿರಲಿಲ್ಲ, 6 ವರ್ಷಗಳಿಂದ ತಾನು ಪ್ರೀತಿಸುತ್ತಿದ್ದ ಯುವಕನನ್ನು ಮದುವೆಯಾಗಲು ಬಯಸಿದ್ದಳು. ಮನೆಯವರ ಬಲವಂತದ ಮದುವೆಗೆ ಒಲ್ಲೆ ಎಂದಿದ್ದ ಆಕೆ ನನ್ನ ಇಷ್ಟದ ವಿರುದ್ಧವಾಗಿ ಮದುವೆ ಮಾಡುತ್ತಿದ್ದಾರೆ ಎಂದು ಸೋಷಿಯಲ್ ವಿಡಿಯೋದಲ್ಲಿ ಹೇಳಿದ್ದಳು. ಇದರಿಂದ ಕೆರಳಿದ ಅವಳ ತಂದೆ ಆಕೆಯನ್ನು ಹತ್ಯೆ ಮಾಡಿದ್ದಾನೆ. ತನ್ನ ಕೊಲೆಗೆ ಕೆಲವೇ ಗಂಟೆಗಳ ಮೊದಲು ತನು, ತನ್ನ ಕುಟುಂಬವು ತನಗೆ ಇಷ್ಟವಿಲ್ಲದ ಮದುವೆಗೆ ಒತ್ತಾಯಿಸಿದೆ ಎಂದು ಆರೋಪಿಸಿದ್ದಾರೆ. ತನ್ನ ತಂದೆ ಮಹೇಶ್ ಮತ್ತು ಇತರ ಸಂಬಂಧಿಕರನ್ನು ತನ್ನ ಪರಿಸ್ಥಿತಿಗೆ ಕಾರಣವೆಂದು ಹೆಸರಿಸಿದ್ದಾಳೆ. ಸೂಪರಿಂಟೆಂಡೆಂಟ್ ಧರ್ಮವೀರ್ ಸಿಂಗ್ ನೇತೃತ್ವದ ತಂಡ ತನು ಮನೆಗೆ ಧಾವಿಸಿತು. ಸಮುದಾಯ ಪಂಚಾಯತ್ ಕೂಡ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಿತ್ತು. ಅಷ್ಟರಲ್ಲಿ ಕಂಟ್ರಿಮೇಡ್ ಪಿಸ್ತೂಲ್ ಹಿಡಿದುಕೊಂಡಿದ್ದ ತಂದೆ ಮಹೇಶ್, ಮಗಳ ಎದೆಗೆ ಗುಂಡು ಹಾರಿಸಿದ್ದಾನೆ. ಕುಸಿದು ಬಿದ್ದ ತನು ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಕೂಡಲೇ ಪೊಲೀಸರು ಮಹೇಶ್‌ರನ್ನು ಬಂಧಿಸಿದ್ದಾರೆ.

ಕದನ ವಿರಾಮ; ಒತ್ತೆಯಾಳುಗಳ ಬಿಡುಗಡೆ ಕರಡು ಒಪ್ಪಂದಕ್ಕೆ ಹಮಾಸ್ ಸಮ್ಮತಿ



ಗಾಜಾ: ಇಸ್ರೇಲ್ ಮತ್ತು ಹಮಾಸ್ ನಡುವಿನ ಯುದ್ಧ ನಿಲ್ಲುವ ಹಂತಕ್ಕೆ ತಲುಪಿದೆ. ಗಾಜಾ ಕದನ ವಿರಾಮ ಮತ್ತು ಒತ್ತೆಯಾಳುಗಳ ಬಿಡುಗಡೆ ಕುರಿತ ಕರಡು ಒಪ್ಪಂದವನ್ನು ಹಮಾಸ್ ಒಪ್ಪಿಕೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇಸ್ರೇಲ್ ಸಹ ಒಪ್ಪಂದವನ್ನು ಪರಿಗಣಿಸಲಿದೆ. ಸೋಮವಾರವೇ ಕದನ ವಿರಾಮದ ಬಗ್ಗೆ ಅಧಿಕಾರಿಗಳು ಮಾಹಿತಿ ನೀಡಿದ್ದರು. ಕದನ ವಿರಾಮ ಮಾತುಕತೆಯಲ್ಲಿನ ಪ್ರಗತಿಯನ್ನು ಒಪ್ಪಿಕೊಂಡ ಅಧಿಕಾರಿಗಳು, ಪಶ್ಚಿಮ ಏಷ್ಯಾದ ಬಹುಭಾಗವನ್ನು ಅಸ್ಥಿರಗೊಳಿಸಿರುವ ಈ ಯುದ್ಧವನ್ನು ಕೊನೆಗೊಳಿಸಲು ಮುಂಬರುವ ದಿನಗಳು ನಿರ್ಣಾಯಕವಾಗುತ್ತವೆ ಎಂದು ಹೇಳಿದ್ದರು. 2023ರ ಅ.7ರಂದು ಹಮಾಸ್ ನಡೆಸಿದ್ದ ಮಾರಣಾಂತಿಕ ದಾಳಿ ಹಾಗೂ ನೂರಾರು ಮಂದಿಯನ್ನು ಅಪಹರಿಸಿ ಒತ್ತೆಯಾಳುಗಳನ್ನಾಗಿ ಮಾಡಿಕೊಂಡಿತ್ತು. ನಂತರ ಇಸ್ರೇಲ್ ಗಾಜಾಪಟ್ಟಿ ಮೇಲೆ ದಾಳಿ ಶುರು ಮಾಡಿತ್ತು. ಇದೀಗ ಕದನ ವಿರಾಮಕ್ಕೆ ಹಮಾಸ್ ಮುಂದಾಗಿದೆ. ಇನ್ನು ಒತ್ತೆಯಾಳ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳಲು ಯುನೈಟೆಡ್ ಸ್ಟೇಟ್ಸ್, ಈಜಿಪ್ಟ್ ಮತ್ತು ಕತಾರ್ ಮಧ್ಯಸ್ಥಿಕೆ ವಹಿಸಲು ಪ್ರಯತ್ನಿಸಿವೆ. ಕದನ ವಿರಾಮದಲ್ಲಿ ಉತ್ತಮ ಪ್ರಗತಿ ಕಂಡುಬಂದಿದೆ. ಆದರೆ ಇನ್ನೂ ಕೆಲವು ದಿನ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಈಜಿಪ್ಟ್ ಅಧಿಕಾರಿ ತಿಳಿಸಿದ್ದಾರೆ.

ಸಂಭೋಗ ಮಾಡಲು ಬಂದವನ ಒದ್ದು ಕೊಂದ ಹಸು!

ಸಮಂಬಾಯ: ದುರ್ತನೋರ್ವ ಹಸುವನ್ನು ಸಂಭೋಗಿಸಲು ಹೋಗಿ ಪ್ರಾಣವನ್ನೇ ಕಳೆದುಕೊಂಡಿರುವ ಘಟನೆ ಬ್ರೆಜಿಲ್‌ನಲ್ಲಿ ವರದಿಯಾಗಿದೆ.

ಬ್ರೆಜಿಲ್‌ನ ಸಮಂಬಾಯ ಜಿಲ್ಲೆಯ ಲಾಜೆ ಡ ಜಿಬೋಯಾ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ತನ್ನನ್ನು ಸಂಭೋಗಿಸಲು ಯತ್ನಿಸಿದ್ದ ವ್ಯಕ್ತಿಯನ್ನು ಹಸು ಒದ್ದು ಕೊಂದು ಹಾಕಿದೆ. ಪ್ರಜ್ಞಾಹೀನನಾಗಿ ಬಿದ್ದಿದ್ದವನನ್ನು ಆತನ ಸ್ನೇಹಿತರು ನೋಡಿ ಪೊಲೀಸರಿಗೆ ಕರೆ ಮಾಡಿದಾಗ ವಿಚಾರ ಬಯಲಾಗಿದೆ.

ಇನ್ನು ಮೂಲತಃ ಕೃಷಿ ಕಾರ್ಮಿಕನಾಗಿದ್ದ ಆತ ಹಸುಗಳನ್ನು ಕಟ್ಟಿಹಾಕಿದ್ದ ಜಾಗದಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿದ್ದ, ಆತ ಕಾಂಡೋಮ್ ಧರಿಸಿದ್ದ ಎನ್ನಲಾಗಿದೆ. ಪಕ್ಕದಲ್ಲೇ ಹೊದಿಕೆಯೂ ಇತ್ತು. ಆತ ಸಾಯುವ ಮೊದಲು ಅಂದರೆ ಘಟನೆಯ ಹಿಂದಿನ ರಾತ್ರಿ ತನ್ನ ಸ್ನೇಹಿತರ ಜೊತೆ ಮದ್ಯಪಾನ ಮಾಡಿದ್ದ.

ಬಳಿಕ ಬೆಳಗ್ಗೆ 5 ಗಂಟೆ ಸುಮಾರಿನಲ್ಲಿ ಹಾಲು ಕರೆಯಲು ಹೋದಾಗ ಹಸುವಿನೊಂದಿಗೆ ಸಂಭೋಗಕ್ಕೆ ಮುಂದಾಗಿದ್ದಾನೆ. ಈ ವೇಳೆ ಹಸು ಆತನ ಹಣೆಗೆ ಒದ್ದಿದೆ. ಈ ವೇಳೆ ಆತ ಪ್ರಜ್ಞಾಹೀನನಾಗಿದ್ದು, ತಲೆಗೆ ಬಲವಾದ ಪೆಟ್ಟು ಬಿದ್ದು ಆತ ಸಾವಿಗೀಡಾಗಿದ್ದಾನೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉತ್ತರಾಯಣ ಹಬ್ಬದ ವೇಳೆ ಕುತ್ತಿಗೆಗೆ ಗಾಳಿಪಟ ದಾರ ಸಿಲುಕಿ ನಾಲ್ವರು ಸಾವು



ಅಹಮದಾಬಾದ್: ಗುಜರಾತ್‌ನಲ್ಲಿ ನಡೆಯುತ್ತಿರುವ ಉತ್ತರಾಯಣ ಹಬ್ಬದ ವೇಳೆ ಗಾಳಿಪಟ ಹಾರಿಸುವಾಗ ಅದರ ದಾರದಿಂದ ಕುತ್ತಿಗೆ ಸೀಳಿ ನಾಲ್ಕು ವರ್ಷದ ಬಾಲಕ ಸೇರಿದಂತೆ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ರಾಜ್‌ಕೋಟ್, ಪಂಚಮಹಲ್, ಮೆಹ್ಸಾನಾ ಮತ್ತು ಸುರೇಂದ್ರನಗರ ಜಿಲ್ಲೆಗಳಲ್ಲಿ ತಲಾ ಒಂದೊಂದು ಸಾವಿನ ಪ್ರಕರಣ ವರದಿಯಾಗಿದ್ದು, ರಾಜ್ಯಾದ್ಯಂತ ಹಲವು ಮಂದಿ ಗಾಯಗೊಂಡಿರುವುದಾಗಿ ತಿಳಿದುಬಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಂಚಮಹಲ್ ಜಿಲ್ಲೆಯ ಹಲೋಲ್ ಪಟ್ಟಣದಲ್ಲಿ ಕುನಾಲ್ ಪರ್ಮಾರ್ ಎಂಬ ನಾಲ್ಕು ವರ್ಷದ ಬಾಲಕ ಗಾಳಿಪಟದ ದಾರದಿಂದ ಕುತ್ತಿಗೆ ಸೀಳಿ ರಕ್ತಸ್ರಾವದಿಂದ ಸಾವನ್ನಪ್ಪಿದ್ದಾನೆ.

ಮೆಹ್ಸಾನಾ ಜಿಲ್ಲೆಯ ವಡ್ನಗರ ತಾಲೂಕಿನಲ್ಲಿ ಮಾನಸಾಜಿ ಠಾಕೋರ್(35) ಎಂಬ ರೈತ ಬೈಕ್‌ನಲ್ಲಿ ತನ್ನ ಜಮೀನಿಗೆ ಹೋಗುತ್ತಿದ್ದಾಗ ಗಾಳಿಪಟದ ದಾರ ಕುತ್ತಿಗೆ ಸೀಳಿದೆ. ಅವರನ್ನು ಆಸ್ಪತ್ರೆಗೆ ಕೊಂಡೊಯ್ಯಲಾಯಿತಾದರೂ ಅವರು ಅಲ್ಲಿ ಸಾವನ್ನಪ್ಪಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

45 ಎಕರೆಯಲ್ಲಿ 800 ಕ್ವಿಂಟಾಲ್ ಭತ್ತ ಬೆಳೆದ ಭೂಪ

● ಗುತ್ತಿಗೆ ಆಧಾರದ ಗದ್ದೆಗಳಲ್ಲಿ ಕೃಷಿ ● ಕೆದಮುಳ್ಳೂರು ಗ್ರಾಮದ ಶುಶಾಂತ್ ರಾಯ್ ಯಶೋಗಾಥೆ



ಯಂತ್ರದ ಮೂಲಕ ಭತ್ತದ ಕಟಾವು.



ಕೆದಮುಳ್ಳೂರು ಗ್ರಾಮದಲ್ಲಿ ಶುಶಾಂತ್ ರಾಯ್ ಭತ್ತ ಕಟಾವು ಮಾಡಿ ರಾಶಿ ಹಾಕಿರುವುದು.

ಮಡಿಕೇರಿ, ಜ.15–ಹವಾಮಾನದ ಜೂಜಾಟಾದ ವಿವಿಧ ಸಮಸ್ಯೆಗಳಿಂದ ಬೆಳೆಗಾರರು ಭತ್ತದ ಕೃಷಿಯ ಸಹವಾಸವೇ ಬೇಡ ಎಂದು ಬೆನ್ನು ತಿರುಗಿಸುತ್ತಿರುವ ನಡುವೆಯೇ, ಇಲ್ಲೊಬ್ಬ ರೈತ ಭತ್ತ ಬೆಳೆಯುವ ದುಸ್ಸಾಹಸಕ್ಕೆ ಕೈ ಹಾಕಿ ಸೈ ಎನಿಸಿಕೊಂಡಿದ್ದಾರೆ.

ಮೂಲತಃ ರಾಯಚೂರು ಜಿಲ್ಲೆಯಿಂದ ಕೊಡಗಿಗೆ 4 ದಶಕಗಳ ಹಿಂದೆ ವಲಸೆ ಬಂದು ಕೊಡಗಿನಲ್ಲಿ ನೆಲೆಯೂರಿದ ಕುಟುಂಬದ ಯಶೋಗಾಥೆ ಇದು. ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮದ ಶುಶಾಂತ್ ರಾಯ್ ಎಂಬವರೇ ಸದ್ದಿಲ್ಲದೇ ಭತ್ತದ ಕೃಷಿ ಸಾಧನೆ ಮಾಡಿದ್ದು, ಒಟ್ಟು 45 ಎಕರೆಯಲ್ಲಿ ವಿವಿಧ 4 ತಳಿಗಳ 800 ಕ್ವಿಂಟಾಲ್‌ಗೂ ಅಧಿಕ ಭತ್ತ ಬೆಳೆದು ತಾನು ಮಣ್ಣಿನ ಮಗ ಎಂಬುದನ್ನು ಸಾಬೀತು ಪಡಿಸಿದ್ದಾರೆ.

ವಿದ್ಯೆಗೆ ಗುಡ್ ಬೈ–ಕೃಷಿಗೆ ಸೈ: ಮೂಲತಃ ರಾಯಚೂರಿನ ಶುಶಾಂತ್ ರಾಯ್ ಕುಟುಂಬ 40 ವರ್ಷಗಳ ಹಿಂದೆ ಅರಮೇರಿ ಗ್ರಾಮದ ಪಾಲೆಕಂಡ ಕುಟುಂಬಸ್ಥರ ಭತ್ತದ ಗದ್ದೆ ಕೆಲಸಕ್ಕೆ ಆಗಮಿಸಿತ್ತು. ಚಿಕ್ಕ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡ ಶುಶಾಂತ್ ರಾಯ್, ಕೇವಲ 8ನೇ ತರಗತಿ ಮಾತ್ರ ವಿದ್ಯಾಭ್ಯಾಸ ಮಾಡಿ ಬಳಿಕ ವ್ಯಾಸಂಗಕ್ಕೆ ಪೂರ್ಣ ವಿರಾಮ ಹಾಕಿ ತನ್ನ ತಾಯಿ ಮಮತಾ ರಾಯ್ ಜೊತೆ ಭತ್ತದ ಕೃಷಿ ಮುಂದುವರೆಸಿದರು. ಶುಶಾಂತ್ ರಾಯ್ ಭತ್ತ ಕೃಷಿ ಮೇಲಿನ ಒಲವು ಹಾಗೂ ಶ್ರಮ ನೋಡಿದ ಅಲ್ಲಿನ ಕೆಲ ಗದ್ದೆಗಳ ಮಾಲೀಕರು ಶುಶಾಂತ್ ರಾಯ್ ಅವರಿಗೆ ತಮ್ಮ ಗದ್ದೆಯನ್ನು ಗುತ್ತಿಗೆ ಆಧಾರದಲ್ಲಿ ಭತ್ತ ಬೆಳೆಯಲು ಬಿಟ್ಟು ಕೊಟ್ಟಿದ್ದರು.

2 ರಿಂದ 45ಕ್ಕೆ ಏರಿಕೆ: ಒಂದು ಕಾಲಘಟ್ಟದಲ್ಲಿ 'ಭತ್ತದ ಬಟ್ಟಲು' ಎಂದೇ ಕರೆಯಲ್ಪಡುತ್ತಿದ್ದ ಕೊಡಗಿನ ಭತ್ತದ ಗದ್ದೆಗಳ ವಿಸ್ತೀರ್ಣ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಇದಕ್ಕೆ ಹತ್ತಾರು ಕಾರಣಗಳು ಇದ್ದು, ಈ ಅಂಕಿ–ಅಂಶಗಳು ಕೃಷಿ ಇಲಾಖೆ ಕಡತಗಳಲ್ಲಿ ದಾಖಲಾಗಿದೆ. ಎಲ್ಲಾ ಬೆಳವಣಿಗೆಗಳ ನಡುವೆಯೇ ಶುಶಾಂತ್ ರಾಯ್ ಶ್ರಮ ಮತ್ತು ಒಲವು ಭಿನ್ನವಾಗಿ ಕಾಣುತ್ತದೆ.

ಆರಂಭದಲ್ಲಿ ಕೇವಲ 2 ಎಕರೆಯಲ್ಲಿ ಭತ್ತ ಬೆಳೆಯುತ್ತಿದ್ದ ಶುಶಾಂತ್ ಕುಟುಂಬ ಇಂದು ಬರೋಬ್ಬರಿ 45 ಎಕರೆಯಲ್ಲಿ ಭತ್ತ ಬೆಳೆಯುವ ಮೂಲಕ ಭತ್ತದ ಕೃಷಿಯನ್ನು ವಿಸ್ತರಿಸಿ ಕೊಂಡಿರುವುದು ಅಸಮಾನ್ಯ ಸಾಧನೆಯಾಗಿದೆ. ಮಳೆಯ ಅಸಮತೋಲನ, ಹವಾಮಾನ ವೈಪರೀತ್ಯ, ಕಾಡುಪ್ರಾಣಿಗಳ ಉಪಟಳ, ಅಕಾಲಿಕ ಮಳೆ ನಡುವೆಯೇ ಈ ಬಾರಿ 800 ಕ್ವಿಂಟಾಲ್‌ಗೂ ಅಧಿಕ ಭತ್ತ ಬೆಳೆದು ಶುಶಾಂತ್ ರಾಯ್ ಕುಟುಂಬ ಭತ್ತದ ಕೃಷಿಗೆ ಜೈ ಎಂದಿದೆ. ಇದೀಗ ಭತ್ತ ಕಟಾವಿಗೆ ಬಂದಿದ್ದು, ಯಂತ್ರೋಪಕರಣಗಳ ಮೂಲಕ ಕಟಾವು ಕಾರ್ಯ ಭರದಿಂದ ನಡೆಯುತ್ತಿದೆ.

ಭತ್ತದ ಕೃಷಿಯಲ್ಲೇ ಆನಂದ!: ಶ್ರಮ, ಲಾಭಾಂಶ ಕಡಿಮೆ ಸಹಿತ ವಿವಿಧ ಸಮಸ್ಯೆಗಳನ್ನು ಮುಂದಿಟ್ಟು ಇತ್ತೀಚಿನ ವರ್ಷಗಳಲ್ಲಿ ಭತ್ತದ ಕೃಷಿಗೆ ರೈತರು ಬೆನ್ನು ತಿರುಗಿಸುತ್ತಿರುವುದು ಕಂಡು ಬರುತ್ತಿದೆ. ಕಡಿಮೆ ಲಾಭ ಇರುವ ಕೆಲಸ ಏಕೆ ಮಾಡುತ್ತೀರಾ ಎಂಬ ಪ್ರಶ್ನೆಗೆ ರೈತ ಶುಶಾಂತ್ ಅವರು ನೀಡುವ ಉತ್ತರವೇ ಬೇರೆ. ಸೆಪ್ಟೆಂಬರ್‌ನಲ್ಲಿ ಭತ್ತದ ಪೈರುಗಳಲ್ಲಿ ಒಂದು ರೀತಿಯ ಅಲೆಗಳು ಬರುತ್ತದೆ. ಅದನ್ನು ನಾನು ಚಿಕ್ಕ ವಯಸ್ಸಿನಲ್ಲೇ ನೋಡಿ ಆನಂದಿಸುತ್ತಿದ್ದೆ. ಪ್ರತಿ ವರ್ಷವೂ ಇದನ್ನು ನೋಡಿ ಆನಂದಿಸಬೇಕು, ಅದೇ ಆಸೆ ನನ್ನದು. ಅಲ್ಲದೇ, ಈ ಕೆಲಸ ನನಗೆ ತೃಪ್ತಿ ತಂದಿದೆ ಎಂದು ಮನದಾಳದ ಮಾತುಗಳನ್ನು ಹಂಚಿಕೊಂಡರು.

> ▶ ಕೊರೊನಾ ಸಂದರ್ಭ ನನ್ನ ತಮ್ಮ ಸುಬ್ರತ್ ಬೆಂಗಳೂರಿನ ಒಂದು ಸಂಸ್ಥೆಯಲ್ಲಿ ಕೆಲಸ ಮಾಡಿಕೊಂಡಿದ್ದ. ಬಳಿಕ ಅದನ್ನು ಬಿಟ್ಟು ಊರಿಗೆ ಬಂದು ನನಗೆ ಬೆಂಬಲ ನೀಡುತ್ತಿದ್ದಾನೆ. ಇದರಿಂದ ಮುಂದಿನ ವರ್ಷ ಮತ್ತೆ ಹೆಚ್ಚುವರಿ 10 ಎಕರೆ ಗದ್ದೆಯಲ್ಲಿ ಭತ್ತ ಬೆಳೆಯಲಾಗುವುದು.
> –ಶುಶಾಂತ್ ರಾಯ್, ಭತ್ತ ಬೆಳೆದ ರೈತ

> ▶ ನಾನು ಇದೇ ಗ್ರಾಮದಲ್ಲಿ ಹುಟ್ಟಿದ ವ್ಯಕ್ತಿ. ಇತ್ತೀಚಿನ ವರ್ಷಗಳಲ್ಲಿ ಭತ್ತದ ಗದ್ದೆ ಮಾಡಲು ಯಾರೂ ಮುಂದೆ ಬರುತ್ತಿಲ್ಲ. ಇದರಿಂದ ಹೊರ ರಾಜ್ಯದ ಅಕ್ಕಿಯನ್ನು ಉಪಯೋಗಿಸುವ ಸ್ಥಿತಿ ಬಂದಿದೆ. ಶುಶಾಂತ್ ಮಾತ್ರ ನಮ್ಮ ಗ್ರಾಮದಲ್ಲಿ ಉಮಾ, ದೊಡ್ಡಿ, ಹತ್ತಿರ, ಸಣ್ಣಮಾದು ಎಂಬ 4 ವಿವಿಧ ಬಗೆಯ ಭತ್ತವನ್ನು ಇಲ್ಲಿನ ಮಣ್ಣಿಗೆ ಹೊಂದಿಕೊಳ್ಳುವ ರೀತಿ ಬೆಳೆಯುತ್ತಿದ್ದಾರೆ. ಇದು ನಮ್ಮ ಊರಿಗೆ ಒಂದು ದೊಡ್ಡ ಗೌರವ.
> –ರವಿ, ವಿದ್ಯುತ್ ಗುತ್ತಿಗೆದಾರ

ಕಾರ್ಮಿಕನ ಹತ್ಯೆ ಖಂಡಿಸಿ ಆದಿವಾಸಿಗಳ ಪ್ರತಿಭಟನೆ



ಕಾರ್ಮಿಕ ಪಣಿಎರವರ ಪೊನ್ನಣ್ಣ ಹತ್ಯೆ ಖಂಡಿಸಿ ಆದಿವಾಸಿ ಸಂಘರ್ಷ ಮೋರ್ಚಾ ವತಿಯಿಂದ ತಹಸೀಲ್ದಾರ್ ರಾಮಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ವಿರಾಜಪೇಟೆ, ಜ.15–ತಾಲೂಕಿನ ಚೆಂಬೆ ಬೆಳ್ಳೂರು ಗ್ರಾಮದಲ್ಲಿ ಕಾರ್ಮಿಕ ಪಣಿಎರವರ ಪೊನ್ನಣ್ಣನನ್ನು ಗುಂಡಿಕ್ಕಿ ಹತ್ಯೆ ಮಾಡಿರುವುದನ್ನು ಖಂಡಿಸಿ ಆದಿವಾಸಿ ಸಂಘರ್ಷ ಮೋರ್ಚಾ ವತಿಯಿಂದ ಪಟ್ಟಣದ ಮುಖ್ಯಬೀದಿಯಲ್ಲಿ ಬುಧವಾರ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಗಡಿಯಾರ ಕಂಬದ ಬಳಿಯಿಂದ ಖಾಸಗಿ ಬಸ್ ನಿಲ್ದಾಣ, ಸುಣ್ಣ ಬೀದಿ, ಗೋಣಿಕೊಪ್ಪ ರಸ್ತೆ, ಬಸ್ ನಿಲ್ದಾಣ, ದೊಡ್ಡಟಿ ಚೌಕಿ ಮುಖ್ಯರಸ್ತೆ ಮಾರ್ಗವಾಗಿ ತಾಲೂಕು ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಸಿಪಿಐಎಂಎಲ್ ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ಡಿ.ರೋಜಾರಿಯೊ ಮಾತನಾಡಿ, ಚೆಂಬೆಬೆಳ್ಳೂರು ಗ್ರಾಮದ ಲೈನ್ ಮನೆಯಲ್ಲಿ ಪತ್ನಿ ಗೀತಾಳೊಂದಿಗೆ ವಾಸವಿದ್ದ ಕಾರ್ಮಿಕ ಪಣಿಎರವರ ಪೊನ್ನಣ್ಣನನ್ನು, ಕಳೆದ ಡಿ.27ರಂದು ಗುಂಡಿಕ್ಕಿ ಹತ್ಯೆ ಮಾಡಿರುವುದು ಖಂಡನೀಯ. ಸಂಬಾರು ಮಾಡಲು ಪಕ್ಕದ ಚಿಣ್ಣಪ್ಪ ಅವರ ತೋಟದಲ್ಲಿ ಹಲಸಿನ ಮಿಡಿ ಕುಯ್ಯಲು ಹೋದ ಸಂದರ್ಭ ಆತನನ್ನು ಚಿಣ್ಣಪ್ಪ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಏಕಾಏಕಿ ಗುಂಡು ಹಾರಿಸಿ ಕೊಂದಿರುವುದು ಅಮಾನವೀಯ ಕೃತ್ಯ. ಆದ್ದರಿಂದ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಮೃತನ ಪತ್ನಿಗೆ ಉದ್ಯೋಗ ನೀಡಬೇಕು ಮತ್ತು ಕುಟುಂಬಕ್ಕೆ 20 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಬಳಿಕ ತಹಸೀಲ್ದಾರ್ ರಾಮಚಂದ್ರ ಅವರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್, ಖಂಡಿತವಾಗಿ ಅಪರಾಧಿಗಳಿಗೆ ಶಿಕ್ಷೆ ಆಗುತ್ತದೆ. ಮೃತನ ಕುಟುಂಬಕ್ಕೆ 8.25 ಲಕ್ಷ ರೂ. ಪರಿಹಾರ ಮಂಜೂರಾಗಿದ್ದು, ಬಳಿಕ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣ ಇಲಾಖೆಯಿಂದ ಅಗತ್ಯ ಸೌಕರ್ಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಎಐಸಿಸಿಟಿಯು ರಾಜ್ಯ ಸಲಹ ಮಂಡಳಿ ಸದಸ್ಯ ಪಿ.ಪಿ.ಅಪ್ಪಣ್ಣ, ಜಿಲ್ಲಾ ಅಧ್ಯಕ್ಷ ಎಂ.ಜಿ.ಮೋಹನ್, ಕಾರ್ಯದರ್ಶಿ ಗೌರಿ, ರಾಜ್ಯ ಸಮಿತಿ ಉಪಾಧ್ಯಕ್ಷ ಕೆ.ಇ.ಮೋಹನ್, ಬೊಳಕ ಅಪ್ಪಣ್ಣ, ಜಿಲ್ಲಾ ಸದಸ್ಯ ಗಪ್ಪು, ದಕ್ಷಿಣ ಕನ್ನಡದ ಜಿಲ್ಲಾಧ್ಯಕ್ಷ ವಿಟ್ಲಾ ರಾಮಣ್ಣ, ತಾಲೂಕಿನ ಆದಿವಾಸಿಗಳು ಭಾಗವಹಿಸಿದ್ದರು.

ಕಾಡಾನೆ ದಾಳಿಗೆ ಸಿಲುಕಿ ವೃದ್ಧ ಸಾವು

ಸೋಮವಾರಪೇಟೆಯ ಯಡವನಾಡಿನ ಕೂಪಾಡಿ ಹಾಡಿಯಲ್ಲಿ ಘಟನೆ





ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟ ಯಡವನಾಡಿನ ಕೂಪಾಡಿ ಹಾಡಿಯ ತಮ್ಮು ಶವದ ಬಳಿ ಸ್ಥಳೀಯರು ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಡಿಕೇರಿ: ಕಾಡಾನೆ ದಾಳಿಗೆ ಸಿಲುಕಿ ವೃದ್ಧ ಸಾವನ್ನಪ್ಪಿರುವ ಘಟನೆ ಸೋಮವಾರಪೇಟೆ ಬಳಿಯ ಯಡವನಾಡಿನ ಕೂಪಾಡಿ ಹಾಡಿಯಲ್ಲಿ ಸಂಭವಿಸಿದೆ.

ಹಾಡಿಯ ನಿವಾಸಿ ಜೇನು ಕುರುಬರ ಮರಿಯಾ ಅವರ ಮಗ ತಮ್ಮು(65) ಸಾವನ್ನಪ್ಪಿದ ಅವಿವಾಹಿತ ವೃದ್ಧ. ಈತ ಕುರಿಗಳನ್ನು ಮೇಯಿಸಿಕೊಂಡು ಜೀವನ ಸಾಗಿಸುತ್ತಿದ್ದು, ಭಾನುವಾರ ಎಂದಿನಂತೆ ಕುರಿಗಳನ್ನು ಮೇಯಿಸಲು ತೆರಳಿದ ತಮ್ಮು ಸಂಜೆಯಾದರೂ ಹಾಡಿಗೆ ಹಿಂತಿರುಗಿರಲಿಲ್ಲ. ಆದರೆ, ಕುರಿಗಳು ಮಾತ್ರ ಮನೆಗೆ ಬಂದಿದ್ದವು. ಇದನ್ನು ಗಮನಿಸಿದ ಸ್ಥಳೀಯರು ಸುತ್ತಮುತ್ತಲಿನ ಪ್ರದೇಶದಲ್ಲಿ ಹುಡುಕಾಟ ನಡೆಸಿದ್ದರೂ ತಮ್ಮು ಪತ್ತೆಯಾಗಿರಲಿಲ್ಲ.

ಮಂಗಳವಾರ ಸಂಜೆ ಹಾಡಿ ಸಮೀಪದ ಹಳೇ ಸಮಾಧಿಯ ಹುಣಸೆ ಮರದ ಬಳಿ ತಮ್ಮು ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಸೋಮವಾರಪೇಟೆ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇದೇ ವೇಳೆ ಅರಣ್ಯಾಧಿಕಾರಿ ಚಂದ್ರೇಶ್ ಹೊರತುಪಡಿಸಿ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಪಳಂಗಂಡ ಕಾವೇರಿಯಪ್ಪ ನಿಧನ



ನಾಪೋಕ್ಲು, ಜ.15–ಮೀಪದ ಬೇತು ಗ್ರಾಮದ ಮಾಜಿ ಸೈನಿಕ ಪಳಂಗಂಡ ಕಾವೇರಿಯಪ್ಪ (ರಘು (79) ಸೋಮವಾರ ನಿಧನರಾದರು.

ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ತೋಟದಲ್ಲಿ ಮಂಗಳವಾರ ಅಂತ್ಯಕ್ರಿಯೆ ನೆರವೇರಿ ಸಲಾಯಿತು.

ಪಾರ್ವತಿ



ನಾಪೋಕ್ಲು, ಜ.15–ಸಮೀಪದ ಬೇತು ಗ್ರಾಮದ ದಿವಂಗತ ಆಲಚಂಡ ಭೀಮಯ್ಯ ಅವರ ಪತ್ನಿ ಪಾರ್ವತಿ (ರಾಣಿ (79) ಮಂಗಳವಾರ ನಿಧನರಾದರು.

ಮೃತರು ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಬುಧವಾರ ಮೃತರ ಸ್ವಗೃಹ ಆವರಣದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ರಾಜರಾಜೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕೋತ್ಸವ



ನಗರದ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ವಾರ್ಷಿಕೋತ್ಸವ ಪೂಜೆ ನಡೆಯಿತು.

ಮಡಿಕೇರಿ: ಇಲ್ಲಿನ ಶಕ್ತಿ ಪೀಠಗಳಲ್ಲಿ ಒಂದಾದ ಮಂಗಳಾದೇವಿನಗರದ ಶ್ರೀ ರಾಜರಾಜೇಶ್ವರಿ ಕ್ಷೇತ್ರದ ಪುನರ್ ಪ್ರತಿಷ್ಠಾ ವಾರ್ಷಿಕೋತ್ಸವ ನಡೆಯಿತು.

ಪ್ರಾರ್ಥನೆ, ಪುಣ್ಯಾ, ಸಪ್ತಶುದ್ಧಿ, ಪ್ರಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತು ಪೂಜೆ, ವಾಸ್ತು ಹೋಮ, ದಿಶಾ ಬಲಿ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ವಿಧಿವಿಧಾನಗಳು ನೆರವೇರಿಸಲಾಯಿತು. ಮೊದಲಿಗೆ ಪುಣ್ಯಾಹ, ಗಣಪತಿ, ಚಂಡಿಕಾ ಹೋಮ, ನವಕಲಶ ಪೂಜೆ, ಪ್ರಧಾನ ಹೋಮ, ನಾಗದೇವರಿಗೆ ತಂಬಿಲ, ಆಶ್ಲೇಷ ಬಳಿ ಕಲಶಾಭಿಶೇಕ ಜರುಗಿತು.

ನಂತರ ಮಹಾಪೂಜೆ, ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನೆರವೇರಿತು. ರಂಜ ಪೂಜೆ, ದೇವಾಲಯ ಆವರಣದಲ್ಲಿ ಬಲಿ ಉತ್ಸವ, ರಾಜಾಂಗಣ ಪ್ರಸಾದ, ಪೀಠ ಪೂಜೆ, ಶುದ್ಧಿ ಕಲಶಾಭಿಶೇಕ, ಮಂತ್ರಾಕ್ಷತೆ ನಡೆಯಿತು.

ಹಸು ಕೆಚ್ಚಲು ಕತ್ತರಿಸಿದವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

ಮಡಿಕೇರಿ: ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕತ್ತರಿಸಿ ವಿಕೃತಿ ಮೆರೆದಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಹಿರಿಯ ಸಹಕಾರಿ, ಕೃಷಿಕ ಸೂದನ ಎಸ್.ಈರಪ್ಪ ಒತ್ತಾಯಿಸಿದ್ದಾರೆ.

ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದಲ್ಲಿ ಸರ್ಕಾರ ಜನಸಾಮಾನ್ಯರಿಂದ ಭಾರೀ ಪ್ರತಿರೋಧ ಎದುರಿಸಬೇಕಾಗುತ್ತದೆ. ಮುಖ್ಯಮಂತ್ರಿಗಳು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಹಸುಗಳ ಮೇಲೆ ಈ ರೀತಿಯ ಪೈಶಾಚಿಕ ಕೃತ್ಯ ನಡೆಯುವುದನ್ನು ಸಹಿಸಿಕೊಳ್ಳುವುದು ಅಸಾಧ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪರಿಹಾರ ನೀಡುವುದಕ್ಕೆ ಆದ್ಯತೆ ನೀಡುವ ಬದಲು ಕೃತ್ಯವೆಸಗಿದ ಆರೋಪಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಲಿ ಎಂದು ಒತ್ತಾಯಿಸಿದ್ದಾರೆ.

ನಾಲ್ವರು ಕಾಂಗ್ರೆಸ್ ನಗರಸಭೆ ಸದಸ್ಯರ ಸದಸ್ಯತ್ವ ಅನರ್ಹ

ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಅಡ್ಡ ಮತದಾನ ಹಿನ್ನೆಲೆ



ಎಸ್.ನೀಲಮ್ಮ,



ಆರ್.ಪಿ.ನಂಜುಂಡಸ್ವಾಮಿ,



ಚಂದ್ರಕಲಾ,



ಭಾಗ್ಯ

ಚಾಮರಾಜನಗರ: ಸೆಪ್ಟೆಂಬರ್‌ನಲ್ಲಿ ನಡೆದ ಚಾಮರಾಜನಗರ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಚುನಾವಣೆ ವೇಳೆ ಪಕ್ಷದ ವ್ಹಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿದ ಹಿನ್ನೆಲೆಯಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯಡಿ ನಾಲ್ವರು ಕಾಂಗ್ರೆಸ್ ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಿ ಜಿಲ್ಲಾಧಿಕಾರಿ ಶಿಲ್ಪನಾಗ್ ಆದೇಶಿಸಿದ್ದಾರೆ.

ನಗರಸಭೆ 1ನೇ ವಾರ್ಡ್ ಸದಸ್ಯೆ ಎಸ್.ನೀಲಮ್ಮ, 15ನೇ ವಾರ್ಡ್ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, 16ನೇ ವಾರ್ಡ್ ಚಂದ್ರಕಲಾ ಹಾಗೂ 24ನೇ ವಾರ್ಡ್ ಸದಸ್ಯೆ ಭಾಗ್ಯ ಅವರ ಸದಸ್ಯತ್ವ ಅನರ್ಹಗೊಂಡಿದೆ. ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕಳೆದ ಸೆ.9ರಂದು ಚುನಾವಣೆ ನಡೆದಿತ್ತು. ಅಧಿಕಾರ ಹಿಡಿಯಲು 17 ಮತಗಳು ಬೇಕಾಗಿತ್ತು. ಕಾಂಗ್ರೆಸ್ 8, ಎಸ್‌ಡಿಪಿ 6, ಪಕ್ಷೇತರ 1 ಮತ, ಶಾಸಕ, ಸಂಸದ ತಲಾ ಒಂದು ಮತಗಳು ಕಾಂಗ್ರೆಸ್ ಪಾಲಿಗಿದ್ದವು. ಆದರೆ, ಕಾಂಗ್ರೆಸ್ ಸದಸ್ಯರಾದ ಆರ್.ಪಿ.ನಂಜುಂಡಸ್ವಾಮಿ,



ಎಸ್.ನೀಲಮ್ಮ, ಭಾಗ್ಯ ಚುನಾವಣಾ ಸಭೆಗೆ ಗೈರಾಗಿದ್ದರು. ಮತ್ತೋರ್ವ ಸದಸ್ಯೆ ಚಂದ್ರಕಲಾ ಬಿಜೆಪಿ ಪರವಾಗಿ ಮತ ಚಲಾಯಿಸಿದ್ದರು. ಹೀಗಾಗಿ ಬಿಜೆಪಿ ಅಧಿಕಾರ ಹಿಡಿದಿತ್ತು.

ಪಕ್ಷದ ಸದಸ್ಯರೇ ಕೈಕೊಟ್ಟ ಕಾರಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಹಾಗೂ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಆರ್.ಎಂ.ರಾಜಪ್ಪ ಅವರು, ನಗರಸಭೆ ವರಿಷ್ಠ ಸ್ಥಾನಗಳ ಚುನಾವಣೆ ವೇಳೆ ತಮ್ಮ ಪಕ್ಷದ ನಾಲ್ವರು ಸದಸ್ಯರು ವ್ಹಿಪ್ ಉಲ್ಲಂಘಿಸಿದ್ದು, ಅವರ ವಿರುದ್ಧ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ದೂರು ನೀಡಿದ್ದರು.

ಅದರನ್ವಯ ದೂರುದಾರರು ನೀಡಿರುವ ದಾಖಲೆ, ಪಕ್ಷದ ನಿರ್ದೇಶನಕ್ಕೆ ವಿರುದ್ಧವಾಗಿ ನಡೆದುಕೊಂಡಿರುವುದು ಹಾಗೂ ಪ್ರತಿವಾದಿಗಳು ಗೈರಿಗೆ ಸಮಂಜಸ ಉತ್ತರ ನೀಡದಿರುವುದರಿಂದ ಕರ್ನಾಟಕ ಸ್ಥಳೀಯ ಪ್ರಾಧಿಕಾರ ಅಧಿನಿಯಮ 1987ರ ಸೆಕ್ಷನ್ 3(1) ಬಿ (ಪಕ್ಷಾಂತರ ನಿಷೇಧ) ಅನ್ವಯ ನಾಲ್ವರು ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲೆಯ ವಿವಿಧ ಕ್ರೈಸ್ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಸ್ತುತ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ದಾಖಲಾತಿಗಳೊಂದಿಗೆ ಜ.25ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಳಿಗಿರಿರಂಗನಬೆಟ್ಟದಲ್ಲಿ ವಿಜೃಂಭಣೆಯ ರಥೋತ್ಸವ

● ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಕ್ರಾಂತಿ ಚಿಕ್ಕಜಾತ್ರೆ ● ಹರಕೆ ತೀರಿಸಿದ ನವಜೋಡಿಗಳು



ಬಿಳಿಗಿರಿರಂಗನಬೆಟ್ಟದಲ್ಲಿ ರಂಗನಾಥಸ್ವಾಮಿಯ ಸಂಕ್ರಾಂತಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಯಳಂದೂರು, ಜ.15– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ರಂಗನಾಥಸ್ವಾಮಿಯ ಸಂಕ್ರಾಂತಿ ರಥೋತ್ಸವ (ಚಿಕ್ಕಜಾತ್ರೆ) ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಪ್ರತಿವರ್ಷ ಸಂಕ್ರಾಂತಿ ಹಬ್ಬದ ಮಾರನೇ ದಿನ ರಂಗನಾಥಸ್ವಾಮಿ ರಥೋತ್ಸವ ನಡೆಯಲಿದೆ. ರಥೋತ್ಸವ ಹಿನ್ನೆಲೆಯಲ್ಲಿ ವಿವಿಧ ಬಗೆಯ ಹೂಗಳಿಂದ ತೇರನ್ನು ಸಿಂಗರಿಸಲಾಗಿತ್ತು. ಬೆಳಗ್ಗೆ 11.55 ರಿಂದ 12.06ರೊಳಗೆ ಸಲ್ಲುವ ಮೀನಾ ಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಸಾವಿರಾರು ಭಕ್ತರು ಗೋವಿಂದ ಗೋವಿಂದ ಎಂಬ ಜಯ ಘೋಷದೊಂದಿಗೆ ತೇರನ್ನು ಎಳೆದರು.

ರಥೋತ್ಸವದಲ್ಲಿ ಪ್ರಮುಖವಾಗಿ ಶಂಖ, ಜಾಗಟೆಯ ನೀನಾದ ಮೊಳಗಿದವು. ಸಾವಿರಾರು ಭಕ್ತರು ದೇವಸ್ಥಾನದ ಗೋಡೆಗಳ ಮೇಲೆ ಕುಳಿತು ರಥೋತ್ಸವ ವೀಕ್ಷಿಸಿದರು. ದೇವಸ್ಥಾನಕ್ಕೆ ಸುತ್ತು ಹಾಕಿದ ತೇರು ಬಳಿಕ ಸ್ವಸ್ಥಾನಕ್ಕೆ ಬಂದು ಸೇರಿತ್ತು. ರಥೋತ್ಸವಕ್ಕೆ ಆಗಮಿಸಿದ ನವಜೋಡಿಗಳು ಹಾಗೂ ಭಕ್ತರು ತೇರಿಗೆ ಹಣ್ಣು, ದವನ ಎಸೆದು ಹರಕೆ ತೀರಿಸಿದರು. ಅಲ್ಲದೆ, ಹೊಸವರ್ಷದ ಮೊದಲ ರಥೋತ್ಸವ ಹಿನ್ನೆಲೆಯಲ್ಲಿ ಈ ಭಾಗದ ರೈತರು ತಾವು ಬೆಳೆದ ದವಸ, ಧಾನ್ಯಗಳನ್ನು ತೇರಿಗೆ ಎಸೆದು ಸಮರ್ಪಿಸಿದರು. ಆ ಮೂಲಕ ಮುಂದಿನ ಇಳುವರಿ ವೃದ್ಧಿಸುವಂತೆ ದೇವರಲ್ಲಿ ಮೊರೆ ಇಟ್ಟರು.

ಪೋಡುಗಳಿಂದ ಆಗಮಿಸಿದ ಸೋಲಿಗರು: ಬಿಳಿಗಿರಿ ರಂಗನಬೆಟ್ಟ ಸೇರಿದಂತೆ ಸುತ್ತಮುತ್ತಲಿನ ಪೋಡುಗಳಲ್ಲಿ ವಾಸಿಸುವ ಸಾವಿರಾರು ಸೋಲಿಗರು ಕಾಲ್ನಡಿಗೆಯಲ್ಲಿ ಬೆಟ್ಟಕ್ಕೆ ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡರು. ಸೋಲಿಗರೆ ಈ ತೇರು ಕಟ್ಟುವುದು ಇಲ್ಲಿನ ವಿಶೇಷ. ಬಿಳಿಗಿರಿರಂಗನಾಥಸ್ವಾಮಿ ಸೋಲಿಗರ ಕುಸುಮಾಲೆಯನ್ನು ವರಿಸಿದ್ದ ಹಿನ್ನೆಲೆಯಲ್ಲಿ ಸೋಲಿಗರು ರಂಗಭಾವ ಎಂದು ರಂಗಪ್ಪನನ್ನು ಕರೆಯುತ್ತಾರೆ.

ಬ್ಯಾಟ ಮಣೆ ಸೇವೆ: ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಆಗಮಿಸಿದ ಬಿಳಿಗಿರಿರಂಗನಾಥ ಸ್ವಾಮಿ ಒಕ್ಕಲಿನವರು ಹಾಗೂ ಭಕ್ತರು ಅಕ್ಕಿ, ಬೆಲ್ಲ, ಕಾಯಿಯನ್ನು ನೀರಿನಲ್ಲಿ ನೆನೆಸಿ ಅದಕ್ಕೆ ಕಜ್ಜಾಯ ಬೆರೆಸಿ ಬ್ಯಾಟಿ ಮಣೆ ಹಾಕಿ ಅದನ್ನು ಪ್ರಸಾದ ಎಂದು ಸ್ವೀಕರಿಸಿದರು. ಅಲ್ಲದೆ, ಭಕ್ತರಿಗೆ ನೀರು, ಮಜ್ಜಿಗೆ, ಪಾನಕ, ಪುಳಿಯೋಗರೆಯನ್ನು ವಿತರಿಸಲಾಯಿತು.

ಕೆಎಸ್‌ಆರ್‌ಟಿಸಿ ವತಿಯಿಂದ 80 ಬಸ್‌ಗಳನ್ನು ಬಿಡಲಾಗಿತ್ತು. ಜಾತ್ರೆ ಹಿನ್ನೆಲೆಯಲ್ಲಿ ಟ್ರಾಫಿಕ್ ಜಾಮ್ ತಪ್ಪಿಸುವ ನಿಟ್ಟಿನಲ್ಲಿ ಬೆಟ್ಟಕ್ಕೆ ದ್ವಿಚಕ್ರ ವಾಹನಗಳನ್ನು ನಿಷೇಧಿಸಲಾಗಿತ್ತು. ಬೈಕ್‌ನಲ್ಲಿ ಬಂದ ಭಕ್ತರು ಚೆಕ್‌ಪೋಸ್ಟ್ ಬಳಿ ಬೈಕ್‌ಗಳನ್ನು ನಿಲ್ಲಿಸಿ ಅಲ್ಲಿಂದ ಸಾರಿಗೆ ಬಸ್‌ಗಳಲ್ಲಿ ಬೆಟ್ಟಕ್ಕೆ ತೆರಳಿದರು.

ಬೆಟ್ಟದಲ್ಲಿ ಪ್ರಾಣಿ ಬಲಿ ನಿಷೇಧ ಹಿನ್ನೆಲೆಯಲ್ಲಿ ಚೆಕ್‌ಪೋಸ್ಟ್‌ನಲ್ಲಿ ಪ್ರಾಣಿಗಳನ್ನು ಕೊಂಡೊಯ್ಯದಂತೆ ತಡೆ ಹಿಡಿಯಲಾಯಿತು. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮೊಲ ಬೇಟೆ ಪೂಜೆ

ಯಳಂದೂರು: ಬಿಳಿಗಿರಿರಂಗನಾಥಸ್ವಾಮಿ ದೇವಾಲಯಕ್ಕೆ ಅರ್ಪಿಸಲು ವೈಕೆಮೋಳೆ ಗ್ರಾಮಸ್ಥರು ಮೊಲ ಬೇಟೆಯಾಡಿ ಮೆರವಣಿಗೆ ನಡೆಸಿದರು.

ವೈ.ಕೆ.ಮೋಳೆ ಗ್ರಾಮದ ಉಪ್ಪಾರ ಸಮುದಾಯದವರು ಪ್ರತಿವರ್ಷ ಬಿಳಿಗಿರಿರಂಗನಾಥ ಸ್ವಾಮಿಗೆ ರಥೋತ್ಸವದ ದಿನ ಮೊಲ ಬೇಟೆಯಾಡಿ ವಿಶೇಷ ಪೂಜೆ ಸಲ್ಲಿಸಿ, ಕೊಂಬು, ಕಹಳೆ, ಸತ್ತಿಗೆ, ಸೂರಪಾನಿ, ಚಾಮರ, ವಾದ್ಯಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಬಿಳಿಗಿರಿರಂಗನಾಥಸ್ವಾಮಿ ದೇವಾಲಯಕ್ಕೆ ಅರ್ಪಿಸಿದರು.



ಯಳಂದೂರು ಪ್ರಮುಖ ಬೀದಿಗಳಲ್ಲಿ ಭೇಟಿಯಾಡಿದ ಮೊಲವನ್ನು ಮೆರವಣಿಗೆ ನಡೆಸಲಾಯಿತು.

ಇಂದು 'ದುಗ್ಗಹಟ್ಟಿ ಧೀಮಂತ' ಕೃತಿ ಲೋಕಾರ್ಪಣೆ

ಯಳಂದೂರು, ಜ.15–ಸಮಾಜ ಸೇವಕ ದುಗ್ಗಹಟ್ಟಿ ಪಿ.ವೀರಭದ್ರಪ್ಪ ಅವರ ದುಗ್ಗಹಟ್ಟಿ ಧೀಮಂತ ಕೃತಿಯನ್ನು ಜ.16ರಂದು ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯಲ್ಲಿ ಸುತ್ತೂರು ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗಸ್ವಾಮೀಜಿ ಬಿಡುಗಡೆಗೊಳಿಸಲಿದ್ದಾರೆ ಎಂದು ಎಸ್‌ಡಿವಿಎಸ್ ವಿದ್ಯಾಸಂಸ್ಥೆ ಅಧ್ಯಕ್ಷ ವಿ.ಮಲ್ಲಿಕಾರ್ಜುನಸ್ವಾಮಿ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ಎಸ್‌ಡಿವಿಎಸ್ ಸಂಸ್ಥೆ ಅಧ್ಯಕ್ಷ ವಿ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದುಗ್ಗಹಟ್ಟಿ ಪಿ.ವೀರಭದ್ರಪ್ಪ ಅವರು ಜಿಲ್ಲೆಯ ಸಕ್ಕರೆ ಕಾರ್ಖಾನೆಯ ಪ್ರಥಮ ನಿರ್ದೇಶಕರಾಗಿ ಮತ್ತು ರಾಜ್ಯ ಗಿರಿಜನರ ಮಂಡಳಿ ಹಾಗೂ ತಿ.ನರಸೀಪುರ ವಿದ್ಯೋದಯ ಸಂಸ್ಥೆ ನಿರ್ದೇಶಕರಾಗಿ ಸಾಕಷ್ಟು ಸಮಾಜ ಸೇವೆ ಸಲ್ಲಿಸಿದ್ದಾರೆ ಎಂದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಮದ್ದೂರು ವಿರೂಪಾಕ್ಷ ಮಾತನಾಡಿ, ದುಗ್ಗಹಟ್ಟಿ ಧೀಮಂತ ಕೃತಿ 300 ಪುಟವಿರುವ ಒಂದು ಅಭಿನಂದನಾ ಗ್ರಂಥವಾಗಿದೆ. ಇದರಲ್ಲಿ 140 ಪುಟಗಳಲ್ಲಿ 24 ಲೇಖಕರು ದುಗ್ಗಹಟ್ಟಿ ವೀರಭದ್ರಪ್ಪ ಅವರ ಸೇವೆಯನ್ನು ದಾಖಲಿಸಿದ್ದಾರೆ. ಇನ್ನುಳಿದ ಪುಟಗಳಲ್ಲಿ ತಾಲೂಕಿನ ಇತಿಹಾಸ ಕುರಿತ ಮಾಹಿತಿಗಳಿವೆ. ಡಾ.ಶೀಲಾಕುಮಾರಿ ಪುಸ್ತಕದ ಸಂಪಾದಕರಾಗಿದ್ದು, ಕಾರ್ಯಕ್ರಮವನ್ನು ಮಾಜಿ ಗೃಹ ಸಚಿವ ಪಿ.ಜಿ.ಆರ್.ಸಿಂಧ್ಯಾ ಉದ್ಘಾಟಿಸಲಿದ್ದಾರೆ. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಪರಿಮಳಾ ನಾಗಪ್ಪ, ಜಿ.ಎನ್. ನಂಜುಂಡಸ್ವಾಮಿ, ಎಸ್.ಬಾಲರಾಜು, ಕಾಡಾ ಅಧ್ಯಕ್ಷ ಮರಿಸ್ವಾಮಿ, ಡಾ.ಶ್ರೀಶರತ್ ಚಂದ್ರ ಸ್ವಾಮೀಜಿ, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ, ಪಪಂ ಅಧ್ಯಕ್ಷೆ ಲಕ್ಷ್ಮೀ ಮಲ್ಲು ಇತರರು ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯ ವಿಖ್ಯಾತ್, ಶಿಕ್ಷಕರಾದ ಗುಂಬಳ್ಳಿ ಬಸವರಾಜು, ಮಹಾದೇವ ಇದ್ದರು.

ಸುತ್ತೂರು ಜಾತ್ರಾ ಪ್ರಚಾರ ರಥಕ್ಕೆ ಸ್ವಾಗತ...



ಬೇಗೂರು ಗ್ರಾಮದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮುಂಭಾಗ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥವನ್ನು ವೀರಶೈವ ಲಿಂಗಾಯತ ಮುಖಂಡರು ಸ್ವಾಗತಿಸಿದರು. ಬಸವ ಬಳಗದ ಬೇಗೂರು ಹೋಬಳಿ ಕೇಂದ್ರದ ಅಧ್ಯಕ್ಷ ಆರ್.ಎಸ್.ನಾಗರಾಜು, ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ನಿರ್ದೇಶಕ ಬಿ.ಸಿ.ಮಹದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳ್ ಶಿವಾನಂದ, ಮುಖಂಡರಾದ ಎಲ್‌ಐಸಿ ಗುರು, ಬಸವರಾಜು, ಕೆ.ಪಿ.ಪುಟ್ಟಣ್ಣ, ಸದಾ ಭೋಗಯ್ಯನಹುಂಡಿ, ರೇಚಣ್ಣ ಇದ್ದರು.

ಚಿರತೆಗೆ ಇಟ್ಟ ಬೋನಿನಲ್ಲಿ ಸೆರೆಯಾದ ಮನುಷ್ಯ!



ಪಡುಗೂರು ಹೊರವಲಯದಲ್ಲಿ ಅರಣ್ಯ ಇಲಾಖೆ ಚಿರತೆ ಸೆರೆಗೆ ಇರಿಸಿದ್ದ ಬೋನಿನ ಒಳಗೆ ಹೊಕ್ಕಿರುವ ಮನುಷ್ಯ.

ಗುಂಡ್ಲುಪೇಟೆ,ಜ.15– ಬೋನ್ ಇಟ್ಟಿದ್ದು ಉಪಟಳ ನೀಡುತ್ತಿದ್ದ ಚಿರತೆ ಸೆರೆಗೆ! ಆದರೆ ಅದರಲ್ಲಿ ಸೆರೆ ಸಿಕ್ಕಿದ್ದು ಮಾತ್ರ ಮನುಷ್ಯ! ಅಚ್ಚರಿಯಾಗುತ್ತಿದೆಯಾ ಇದು ನಿಜ ಸಂಗತಿ!!

ತಾಲೂಕಿನ ಪಡಗೂರು ಗ್ರಾಮದಲ್ಲಿ ಚಿರತೆ ಉಪಟಳದಿಂದ ಬೇಸತ್ತ ಗ್ರಾಮಸ್ಥರು ಅರಣ್ಯ ಇಲಾಖೆಗೆ ದುಂಬಾಲು ಬಿದ್ದರು. ಅಂತು ಕೊನೆಗೂ ಅರಣ್ಯ ಇಲಾಖೆ ಬೋನಿಟ್ಟಿತ್ತು. ಆದರೆ, ಅರಣ್ಯ ಇಲಾಖೆ ಸಿಬ್ಬಂದಿಗೆ ಕೊನೆಗೆ ಅಚ್ಚರಿ ಕಾದಿತ್ತು.

ಇತ್ತೀಚೆಗೆ ಪಡುಗೂರು ಗ್ರಾಮದ ಹೊರವಲಯದಲ್ಲಿ ಚಿರತೆ ಓಡಾಟ ಹಾಗೂ ಉಪಟಳ ಹೆಚ್ಚಾಗಿತ್ತು. ಗ್ರಾಮಸ್ಥರು ಅರಣ್ಯ ಇಲಾಖೆ ಸಿಬ್ಬಂದಿಗೆ ಮನವಿ ಮಾಡಿ ಬೋನ್ ಅಳವಡಿಸಿ ಚಿರತೆ ಹಿಡಿಯುವಂತೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿ ಮೂರು ದಿನಗಳ ಹಿಂದೆ ಗ್ರಾಮದ ಹೊರವಲಯದಲ್ಲಿ ಚಿರತೆ ಚಲನವಲನವಿರುವ ಸ್ಥಳದಲ್ಲಿ ಬೋನು ಅಳವಡಿಸಿದ್ದರು.

ಆದರೆ, ಬುಧವಾರ ಮಧ್ಯಾಹ್ನ ಗ್ರಾಮಸ್ಥರಿಗೆ ಮಾಹಿತಿ ಬಂತು. ಅಂತೂ ನಮ್ಮ ಚಿರತೆ ಆತಂಕ ದೂರವಾಯ್ತು. ಚಿರತೆ ಸೆರೆಸಿಕ್ತು ಎಂದು ಖುಷಿಯಿಂದಲೇ ಗ್ರಾಮಸ್ಥರು ದಂಡು ದಂಡಾಗಿ ಬೋನಿಟ್ಟಿದ್ದ ಜಾಗಕ್ಕೆ ದೌಡಾಯಿಸಿ ಬಂದರು. ಹೀಗೆ ಬರುತ್ತಲೇ ಚಿರತೆ ಹೇಗಿರಬಹುದು, ಹೆಣ್ಣೋ–ಗಂಡೋ, ಘಾಸಿಗೊಂಡು ಬೋನಿನ ರಾಡುಗಳಿಗೆ ಅಪ್ಪಳಿಸಿ ಗಾಯಗೊಂಡಿರಬಹುದೋ ಹೀಗೆ ನಾನಾ ಕಲ್ಪನೆ ಕಟ್ಟಿಕೊಂಡು ಅಂತೂ ಬೋನಿನ ಬಳಿ ಬರುತ್ತಾರೆ; ಆದರೆ, ಮಹಾ ಅಚ್ಚರಿ ಕಾದಿತ್ತು. ಆ ಬೋನಿನಲ್ಲಿ ಚಿರತೆ ಬದಲು ಮನುಷ್ಯ ಕುಳಿತಿದ್ದಂತೆ ಕಾಣಿಸಿದೆ. ಅರೆ, ಇದ್ದೇಗಾಯಿತಪ್ಪಾ ಎಂದು ಕೆಲಕ್ಷಣ ತಲೆ ಕೆರೆದುಕೊಂಡು ದಿಟ್ಟಿಸಿದ್ದಾರೆ. ಅದು ಮನುಷ್ಯನ್ನೇ. ಅದನ್ನು ಕಂಡು ಎಲ್ಲರೂ ಪರಸ್ಪರ ಮುಖ–ಮುಖ ನೋಡಿಕೊಂಡು, ಕಕ್ಕಾಬಿಕ್ಕಿಯಾಗಿದರು. ಕೊನೆಗೆ ತಿಳಿಯಿತು ಆತ ಮಾನಸಿಕ ಅಸ್ವಸ್ಥನಂತೆ. ಏನು ಮಾಡೋದು, ಚಿರತೆ ಆತಂಕ ಇನ್ನು ದೂರವಾಗಲಿಲ್ಲವಲ್ಲಾ ಎಂಬುದು ಗ್ರಾಮಸ್ಥರ ಚಿಂತೆಯಾಗಿದೆ.



ಕೆ.ದಿವ್ಯಾ ಅವರಿಗೆ ಪಿಹೆಚ್.ಡಿ

ಮೈಸೂರು, ಜ.15– ದಿವ್ಯಾ.ಕೆ ಅವರು ಡಾ. ಕೆ.ನಾಗೇಂದ್ರ ಬಾಬು ಅವರ ಮಾರ್ಗದರ್ಶನದಲ್ಲಿ ಸಾದರಪಡಿಸಿದ ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯದ ಪಿಹೆಚ್.ಡಿ ಪದವಿಗೆ ಅಂಗೀಕರಿಸಲಾಗಿದೆ.

ಜಪ್ತಿ ಮಾಡಲಾದ ಅಕ್ರಮ ಮಾದಕ ಪದಾರ್ಥ ನಾಶ

ಮೈಸೂರು,ಜ.15(ಎಸ್‌ಪಿಎನ್)– ಮೈಸೂರು ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ವಶಪಡಿಸಿಕೊಂಡಿದ್ದ 1,53,95,000 ರೂ., ಮೌಲ್ಯದ ಮಾದಕ ವಸ್ತುಗಳನ್ನು ಬುಧವಾರ ಮೈಸೂರು ತಾಲೂಕು ಜಯಪುರ ಹೋಬಳಿಯ ಪ್ಲಾಂಟ್‌ನಲ್ಲಿ ಡ್ರಗ್ಸ್ ಡಿಸ್ಪೋಸಲ್ ಸಮಿತಿ ಸದಸ್ಯರ ಸಮ್ಮುಖದಲ್ಲಿ ನಾಶಪಡಿಸಲಾಯಿತು.

ಎನ್‌ಡಿಪಿಎಸ್ ಕಾಯ್ದೆಯ 36 ಪ್ರಕರಣಗಳಲ್ಲಿ ಒಟ್ಟು 376 ಕೆಜಿ.276 ಗ್ರಾಂ ಗಾಂಜಾ, 5 ಪ್ರಕರಣಗಳಲ್ಲಿ 49 ಗ್ರಾಂ 298 ಮಿಲಿ ಎಂಡಿಎಂಎ ಹಾಗೂ ಒಂದು ಪ್ರಕರಣದಲ್ಲಿ ವಶಪಡಿಸಿಕೊಂಡಿದ್ದ 28 ಗ್ರಾಂ 74 ಮಿಲಿ ಚರಸ್ ಸೇರಿದಂತೆ 1,53,95,000 ರೂ. ಮೌಲ್ಯದ ಮಾದಕ ವಸ್ತುಗಳನ್ನು ನಾಶಪಡಿಸಲಾಗಿದೆ.

ಈ ವೇಳೇ ಮೈಸೂರು ನಗರ ಡ್ರಗ್ ಡಿಸ್ಪೋಸಲ್ ಸಮಿತಿಯ ಛೇರ್‌ಮನ್, ಕೇಂದ್ರ ಸ್ಥಾನ, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ, ಸಮಿತಿ ಸದಸ್ಯರಾದ ಎಸಿಪಿ ಎಸ್.ಎನ್.ಸಂದೇಶ್ ಕುಮಾರ್(ಅಪರಾಧ ವಿಭಾಗ), ಸಿಸಿಬಿ ಘಟಕದ ಪೊಲೀಸ್ ಇನ್ಸ್‌ಪೆಕ್ಟರ್ ಮುಸ್ತಾಕ್ ಪಾಷ, ಉಪ ತಹಸೀಲ್ದಾರ್ ನಿಂಗಪ್ಪ, ಉಪಪರಿಸರ ಅಧಿಕಾರಿ ನೇತ್ರಾವತಿ ಹಾಗೂ ಇತರೆಗಳು ಸಿಬ್ಬಂದಿ, ಅಧಿಕಾರಿಗಳು ಉಪಸ್ಥಿತರಿದ್ದರು.

ವಿಜೃಂಭಣೆಯ ಮೂಗೂರು ಶ್ರೀ ತ್ರಿಪುರಸುಂದರಿ ಅಮ್ಮನವರ ಮಹಾರಥೋತ್ಸವ



ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವ ನಡೆಯಿತು.

ಮೂಗೂರು, ಜ.15– ಪಟ್ಟಣದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ದಿವ್ಯ ಮಹಾ ರಥೋತ್ಸವವು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬುಧವಾರ ವಿಜೃಂಭಣೆಯಿಂದ ನಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹಾಗೂ ವಾಟಾಳು ಶ್ರೀ ಸಿದ್ದಲಿಂಗ ಸ್ವಾಮೀಜಿ, ಸಂಸದ ಸುನೀಲ್ ಬೋಸ್, ತಾಲೂಕು ತಹಸೀಲ್ದಾರ್ ಸುರೇಶ್ ಆಚಾರ್ ಅವರುಗಳು ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸುವುದರ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವ ಹೆಚ್.ಸಿ. ಮಹದೇವಪ್ಪ, ಸಕಾಲದಲ್ಲಿ ಮಳೆಯಾಗಿ ರೈತರು ಸಂತೃಪ್ತಿಯ ಜೀವನ ನಡೆಸುವಂತಾಗಲಿ, ನಾಡಿನ ಗ್ರಾಮದ ಜನತೆಗೆ ಒಳಿತು ಮಾಡಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು.

ರಥೋತ್ಸವದ ಅಂಗವಾಗಿ ದೇಗುಲದಲ್ಲಿ ಸಾಂಪ್ರದಾಯಿಕವಾಗಿ ಪೂಜಾ ವಿಧಿ–ವಿಧಾನಗಳು ನೆರವೇರಿದವು. ಸಂಜೆ 4 ಗಂಟೆಗೆ ಅಲಂಕೃತಗೊಂಡ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಿಸಿದ ನಂತರ ಉತ್ಸವವು ರಥದ ಬೀದಿಯಲ್ಲಿ ಸಾಗಿತು.

ನೆರೆದಿದ್ದ ಅಸಂಖ್ಯಾತ ಭಕ್ತ ಸಮೂಹ ತಿಬ್ಬಾದೇವಿಗೆ ಜೈ ಎಂದು ಜಯ ಘೋಷಣೆ ಕೂಗುತ್ತಾ ರಥ ಎಳೆದು ಧನ್ಯತೆ ಮೆರೆದರು. ಬೆಳಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತ ಭಕ್ತರು ಅಮ್ಮನವರ ದರ್ಶನ ಪಡೆದರು. ಪ್ರತಿ ವರ್ಷದಂತೆ ಈ ಬಾರಿಯೂ ಮೂಗೂರು ಗೆಳೆಯರ ಬಳಗದ ವತಿಯಿಂದ ನೂತನ ರಥಕ್ಕೆ ಬೃಹತ್ ಗಾತ್ರದ ಹೂವಿನ ಹಾರ ಅರ್ಪಿಸಿದರು. ಸ್ಥಳದಲ್ಲಿದ್ದ ಮುತ್ತೈದೆ, ದಂಪತಿಗಳು, ಭಕ್ತರು ತಮ್ಮ ಇಷ್ಟಾರ್ಥಗಳು ನೆರವೇರಲೆಂದು ಪ್ರಾರ್ಥಿಸಿ ಹಣ್ಣು–ಜವನ ಅರ್ಪಿಸಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಅನ್ನಸಂತರ್ಪಣೆ ಏರ್ಪಡಿಸಿದ್ದರು.

ನಡೆಯದ ತೆಪ್ಪೋತ್ಸವ, ಭಕ್ತರಲ್ಲಿ ಮತ್ತೆ ನಿರಾಸೆ

ಮೂಗೂರು, ಜ.15– ಇಲ್ಲಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ 2ನೇ ದಿನದ ಜಾತ್ರಾ ಕಾರ್ಯಕ್ರಮದ ಪ್ರಯುಕ್ತ ಹೂವಿನ ಪಲ್ಲಕ್ಕಿ ಉತ್ಸವ ಮಂಗಳವಾರ ರಾತ್ರಿ ಮೂಗೂರಿನಲ್ಲಿ ವಿಜೃಂಭಣೆಯಿಂದ ನಡೆಯಿತು.

ತೆಪ್ಪೋತ್ಸವ ಅಂಗವಾಗಿ ಶ್ರೀ ತ್ರಿಪುರ ಸುಂದರಿ ಅಮ್ಮನವರ ಉತ್ಸವ ಮೂರ್ತಿಯನ್ನು ಆಭರಣಗಳಿಂದ ಶೃಂಗಾರಗೊಳಿಸಿ ವಿವಿಧ ಬಗೆಯ ಹೂಗಳಿಂದ ಅಲಂಕೃತವಾದ ಹೂವಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ರಾತ್ರಿ 8ರ ಸಮಯದಲ್ಲಿ ಪೂಜೆ ಸಲ್ಲಿಸಿದ ನಂತರ ಹೂವಿನ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿತು. ದಾರಿಯುದ್ದಕ್ಕೂ ಪಟಾಕಿ ಸಿಡಿಸಿ ಸಂಭ್ರಮಿಸಿದರು. ನೂತನ ಕಲ್ಯಾಣಿ ಬಳಿ ಅಮ್ಮನವರಿಗೆ ಪೂಜೆ ಸಲ್ಲಿಸಲಾಯಿತು. ಗ್ರಾಮದಲ್ಲಿ ನೂತನ ಕಲ್ಯಾಣಿ ನಿರ್ಮಿಸಿ 3 ವರ್ಷಗಳು ಕಳೆದರೂ ಗ್ರಾಮಸ್ಥರ ನಿರಾಸಕ್ತಿಯಿಂದ ಗ್ರಾಮದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯಬೇಕಿದ್ದ ತೆಪ್ಪೋತ್ಸವ ಈ ಬಾರಿಯೂ ನಡೆಯದ ಹಿನ್ನೆಲೆಯಲ್ಲಿ ಶ್ರೀ ತ್ರಿಪುರ ಸುಂದರಿ ಅಮ್ಮನವರ ಭಕ್ತರಲ್ಲಿ ಮತ್ತೆ ನಿರಾಸೆ ತಂದಿತು.

ಚುಂಚನಕಟ್ಟೆಯಲ್ಲಿ ವೈಭವದ ಶ್ರೀರಾಮ ದೇವರ ಬ್ರಹ್ಮರಥೋತ್ಸವ

ಲಕ್ಷಾಂತರ ಭಕ್ತರು ಭಾಗಿ, ಮೊಳಗಿದ ಜೈ ಶ್ರೀರಾಮ್ ಘೋಷಣೆ, ನವ ವಧು-ವರರು ಭಾಗಿ



ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ನಡೆದ ಶ್ರೀರಾಮ ರಥೋತ್ಸವ.

ಚುಂಚನಕಟ್ಟೆ, ಜ.15– ದಕ್ಷಿಣ ಭಾರತದಲ್ಲಿ ಸುಗ್ಗಿಯ ನಂತರ ನಡೆಯುವ ಇತಿಹಾಸ ಪ್ರಸಿದ್ಧ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಶ್ರೀರಾಮ ದೇವರ ಬ್ರಹ್ಮ ರಥೋತ್ಸವ ಬುಧವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿತು

ಬೆಳಗ್ಗೆ 10.50ರಲ್ಲಿ ಶ್ರೀರಾಮ ದೇವಾಲಯದಿಂದ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆ ನಂತರ ಅವುಗಳನ್ನು ಮೆರವಣಿಗೆಯಲ್ಲಿ ತಂದು ವೇದ ಘೋಷಗಳೊಂದಿಗೆ ರಥದಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ಆನಂತರ ಬೆಳಗ್ಗೆ 11.5 ರಿಂದ 12.5 ರಲ್ಲಿ ಸಲ್ಲುವ ಶುಭ–ಮೀನಾ ಲಗ್ನದಲ್ಲಿ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಶ್ರೀ, ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮೀಜಿ, ಕೆ.ಆರ್.ನಗರ ಕಾಗಿನೆಲೆ ಮಠದ ಶಿವನಂದಾಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ರಥಕ್ಕೆ ಶಾಸಕ ಡಿ.ರವಿಶಂಕರ್ ಪೂಜೆ ಸಲ್ಲಿಸಿ ಚಾಲನೆ ನೀಡಿದರು.

ನಂತರ ನೆರೆದಿದ್ದ ಲಕ್ಷಾಂತರ ಮಂದಿ ಶ್ರೀರಾಮನ ಭಕ್ತರು ದೇವರಿಗೆ ಜಯಕಾರ ಕೂಗಿ ರಥವನ್ನು ದೇವಾಲಯದ ಸುತ್ತ ಒಂದು ಸುತ್ತು ಎಳೆದಾಗ ಈ ಅಭೂತಪೂರ್ವ ದೃಶ್ಯವನ್ನು ಕಣ್ತುಂಬಿಕೊಂಡ ಭಕ್ತ ಸಾಗರ ಭಾವಪರವಶವಾಯಿತು. ಅಲ್ಲದೇ ರಥವನ್ನು ಎಳೆದು ತಂದು ನಿಲ್ಲಿಸಿದಾಗ ಭಕ್ತರು ಜೈ ಶ್ರೀರಾಮ್ ಘೋಷಣೆ ಕೂಗಿ ಚಪ್ಪಾಳೆ ತಟ್ಟಿ ಸಂಭ್ರಮಿಸಿದರು.

ರಥವನ್ನು ಎಳೆಯುವಾಗ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಮತ್ತು ಸ್ಥಳೀಯ ಭಕ್ತಗಣ ದೇವರಿಗೆ ಬಾಳೆಹಣ್ಣು, ಜವನ ಎಸೆದು ತಮ್ಮ ಭಕ್ತಿ ಭಾವ ಸಮರ್ಪಿಸಿದರಲ್ಲದೇ ನೂತನ ನವ ವಧು–ವರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಭಕ್ತಾದಿಗಳು ಸರತಿ ಸಾಲಿನಲ್ಲಿ ನಿಂತು ಸೀತಾ ಸಮೇತ ಶ್ರೀರಾಮ ಮತ್ತು ಲಕ್ಷ್ಮಣ ದೇವರ ದರ್ಶನ ಪಡೆದು ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ಪ್ರಾರ್ಥಿಸಿದರು

ಕೆಲವರು ದೇವಾಲಯದ ಸಮೀಪ ಅಡುಗೆ ಮಾಡಿ ಭಕ್ತರಿಗೆ ಉಣ ಬಡಿಸಿ ತಮ್ಮ ಹರಕೆ ತೀರಿಸಿದರೆ ಇದರ ಜತೆಗೆ ಬಸವನ ವೃತ್ತದಿಂದ ಶ್ರೀರಾಮ ದೇವಾಲಯದವರೆಗೆ ರಸ್ತೆಯ ಎರಡೂ ಬದಿಯಲ್ಲಿ ಹಾಕಿರುವ ಸಿಹಿತಿಂಡಿ ಮತ್ತು ವಿವಿಧ ಆಟಿಕೆಯ ಅಂಗಡಿಗಳು ಗಮನ ಸೆಳೆದವು

ರಥೋತ್ಸವದಲ್ಲಿ ಸುನೀತಾ ರವಿಶಂಕರ್, ಹಿರಿಯ ಕಾಂಗ್ರೆಸ್ ಮುಖಂಡ ದೊಡ್ಡಸ್ವಾಮೇಗೌಡ, ತಾಪಂ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಕುಪ್ಪಳ್ಳಿ ಸೋಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಮ್ಮನಹಳ್ಳಿ ಉದಯಶಂಕರ್, ಎಂ.ಎಸ್.ಮಹದೇವ್, ಕಾಂಗ್ರೆಸ್ ಮುಖಂಡರಾದ ಡೈರಿಮಾದು, ಸಯ್ಯದ್ ಸಲಿಂ, ಚಿಕ್ಕಕೊಪ್ಪಲು ಗಿರೀಶ್, ಸರಿತಾ ಜವರಪ್ಪ, ಉಷಾಪ್ರಸನ್ನ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ನಟರಾಜು, ನಿರ್ದೇಶಕರಾದ ಸತೀಶ್ ಕರ್ತಾಳ್, ತಹಸೀಲ್ದಾರ್ ನರಗುಂದ, ತಾಪಂ ಇಓ ಕುಲದೀಪ್, ಉಪ ತಹಸೀಲ್ದಾರ್ ಕೆ.ಜೆ.ಶರತ್, ದೇವಾಲಯದ ಇಓ ರಘು, ಪಾರುಪತ್ತೇದಾರ್ ಯತಿರಾಜ್, ಎಇಇ ಗಳಾದ ಅರ್ಕೇಶ್, ಸುಮಿತಾ ಸೇರಿದಂತೆ ಮತ್ತಿತರರು ಹಾಜರಿದ್ದರು.

ಇತಿಹಾಸದಲ್ಲಿ ಪ್ರಥಮ ಬಾರಿಗೆ ಬಾರ್ ಬಂದ್

ಚುಂಚನಕಟ್ಟೆ ಶ್ರೀರಾಮ ರಥೋತ್ಸವದ ಇತಿಹಾಸದಲ್ಲಿಯೇ ಗ್ರಾಮದಲ್ಲಿರುವ ಮತ್ತು ಗ್ರಾಮದ ಪಕ್ಕಪಕ್ಕದಲ್ಲಿ ಇರುವ ಬಾರ್‌ಗಳನ್ನು ಇದೇ ಪ್ರಥಮವಾಗಿ ಬಂದ್ ಮಾಡಿಸಲಾಗಿತ್ತು. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಅನ್ನ ಪ್ರಸಾದ –ಲಾಡು, ಪಾನಕ ವಿತರಣೆ: ರಥೋತ್ಸವಕ್ಕೆ ಬಂದಿದ್ದವರಿಗೆ ಶಾಸಕ ಡಿ.ರವಿಶಂಕರ್ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಅನ್ನ ಪ್ರಸಾದ ಮತ್ತು ದೇವಾಲಯಕ್ಕೆ ಆಗಮಿಸಿದವರಿಗೆ ಲಾಡು ವಿತರಣೆ ವ್ಯವಸ್ಥೆ ಮಾಡಿದ್ದರು. ಭಕ್ತರಿಗೆ ಮಜ್ಜಿಗೆ, ಪಾನಕವನ್ನು ಜಿಲ್ಲಾ ಜೆಡಿಎಸ್ ಮುಖಂಡ ಹಳಿಯೂರು ಮಧುಚಂದ್ರ, ಉದ್ಯಮಿ ಎಚ್.ಕೆ.ಶ್ರೀಧರ್ ವಿತರಣೆ ಮಾಡಿದರು.

ನಾಗರಹೊಳೆ ಕಾಡಂಚಿನ ಗ್ರಾಮದಲ್ಲಿ ವಿಜೃಂಭಣೆಯ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವ



ಹನಗೋಡು ಸಮೀಪದ ದೊಡ್ಡಹೆಜ್ಜೂರಿನಲ್ಲಿ ನಡೆದ ವೀರಾಂಜನೇಯ ರಥೋತ್ಸವ.

ಹನಗೋಡು, ಜ.15– ನಾಗರಹೊಳೆ ಅಂಚಿನ ಇತಿಹಾಸ ಪ್ರಸಿದ್ಧ ದೊಡ್ಡಹೆಜ್ಜೂರಿನ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವವು ಬುಧವಾರ ಮಧ್ಯಾಹ್ನ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ಹನಗೋಡು ಹೋಬಳಿಯ ದೊಡ್ಡಹೆಜ್ಜೂರಿನ ರಥೋತ್ಸವಕ್ಕೂ ಮುನ್ನ ದೇವಸ್ಥಾನದಿಂದ ಶ್ರೀ ಆಂಜನೇಯ ಉತ್ಸವಮೂರ್ತಿಯನ್ನು ಮಂಗಳವಾದ್ಯದೊಂದಿಗೆ ಹೊತ್ತು ತಂದು ದೇವಾಲಯದ ಸುತ್ತ ಒಂದು ಸುತ್ತು ಪ್ರದಕ್ಷಿಣೆ ಹಾಕಿ ನಂತರ ರಥಕ್ಕೆ ಶ್ರೀ ವೀರಾಂಜನೇಯ ಉತ್ಸವ ಮೂರ್ತಿ ಏರಿಸಲಾಯಿತು. ನಂತರ ಸಾವಿರಾರು ಭಕ್ತರು ಸ್ವಾಮಿಗೆ ಜೈಕಾರ ಹಾಕುತ್ತಾ ರಥವನ್ನು ದೇವಾಲಯದ ಸುತ್ತ ಒಂದು ಸುತ್ತು ಎಳೆದು ತಂದು ಸ್ವಸ್ಥಾನಕ್ಕೆ ನಿಲ್ಲಿಸಿದರು. ರಥೋತ್ಸವದ ವೇಳೆ ನವ ದಂಪತಿಗಳು ಸೇರಿದಂತೆ ಎಲ್ಲಾ ಭಕ್ತರು ಹಣ್ಣು ಜವನ ಎಸೆದು ಸ್ವಾಮಿ ಕೃಪೆಗೆ ಪಾತ್ರರಾದರು.

ಜಾತ್ರೆಗೆ ಬೆಳಗ್ಗೆಯಿಂದಲೇ ಜನರು ಸಾರಿಗೆ ಬಸ್, ಕಾರು, ಆಟೋ, ಟ್ರ್ಯಾಕ್ಟರ್, ಎತ್ತಿನಗಾಡಿ, ಸ್ಕೂಟರ್ ಸೇರಿದಂತೆ ವಿವಿಧ ವಾಹನಗಳಲ್ಲಿ ಆಗಮಿಸಿ ರಥೋತ್ಸವದ ವೇಳೆಗೆ ಇಡೀ ಜಾತ್ರಾಮಾಳ ಭರ್ತಿಯಾಗಿತ್ತು

ದೂರದ ಊರುಗಳಿಂದ ಹರಕೆ ಹೊತ್ತವರು ಹಿಂದಿನ ದಿನವೇ ಜಾತ್ರಾ ಮಾಳದಲ್ಲಿ ಬೀಡು ಬಿಟ್ಟಿದ್ದರು. ಲಕ್ಷ್ಮಣ ತೀರ್ಥ ನದಿ ದಂಡೆಯಲ್ಲಿ ತಲೆ ಮುಡಿಕೊಟ್ಟು ಬಂದವರು, ಬಾಯಿಬೀಗ ಹಾಕಿಕೊಂಡು ನಡೆದು ಬಂದು ದೇವಾಲಯ ಸುತ್ತ ಉರುಳು ಸೇವೆ ಸಲ್ಲಿಸಿದರು. ನದಿ ದಂಡೆಯಲ್ಲೇ ಅಡುಗೆ ತಯಾರಿಸಿ ಊಟ ಮಾಡಿದರು. ಕೆಲ ಭಕ್ತರು ಮನೆಯಿಂದ ತಂದಿದ್ದ ತಿಂಡಿ–ಊಟವನ್ನು ನದಿ ದಂಡೆ, ಕೆರೆಯಂಗಳ ಹಾಗೂ ಗದ್ದೆ ಬಯಲಲ್ಲಿ ಪರಸ್ಪರ ಹಂಚಿಕೊಂಡು ಊಟ ಮಾಡಿದರು.

ಜಾತ್ರಾ ಮಹೋತ್ಸವದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಮಲೆ ಮಹದೇಶ್ವರ ಬೆಟ್ಟ ಪ್ರಾಧಿಕಾರ ಕಾರ್ಯನಿರ್ವಾಹಣಾಧಿಕಾರಿ ರಘು, ಹುಣಸೂರು ನಗರ ಅಭಿವೃದ್ಧಿ ಯೋಜನೆ ಪ್ರಾಧಿಕಾರ ಅಧ್ಯಕ್ಷ ಎಚ್.ಪಿ.ಅಮರ್‌ನಾಥ್, ಗ್ರಾಪಂ ಅಧ್ಯಕ್ಷೆ ಅಂಬಿಕ, ಉಪಾಧ್ಯಕ್ಷ ವೆಂಕಟೇಶ್, ಹುಣಸೂರು ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಕಲ್ಕುಣಿಕೆ ರಘು, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಗರನಹಳ್ಳಿ ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಕಿರಂಗೂರು ಬಸವರಾಜ್, ಮುದಗನೂರು ಸುಭಾಷ್, ಮಾಜಿ ಅಧ್ಯಕ್ಷ ದಾ.ರಾ. ಮಹೇಶ್, ದೇವಾಲಯ ಸಮಿತಿ ಅಧ್ಯಕ್ಷ ಶೇಖರೇಗೌಡ, ಕಾರ್ಯದರ್ಶಿ ನಟರಾಜ್, ಉದ್ಯಮಿ ರಾಜುಶಿವರಾಜೇಗೌಡ ಸೇರಿದಂತೆ ಇತರೆ ಗಣ್ಯರು ಹಾಜರಿದ್ದು, ರಥೋತ್ಸವದಲ್ಲಿ 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಜಾತ್ರಾ ಸಮಿತಿಯ ಸದಸ್ಯರುಗಳು ಸೇರಿದಂತೆ 16 ಹಳ್ಳಿಯ ಗ್ರಾಮಸ್ಥರು ಜಾತ್ರಾ ಯಶಸ್ಸಿಗೆ ಶ್ರಮಿಸಿದರು. ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಸರಗೂರು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ.ವೈ.ಡಿ. ರಾಜಣ್ಣರಿಗೆ ಅಧಿಕೃತ ಆಹ್ವಾನ



ಇಂದು ಸರಗೂರು ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಸಂಬಂಧ ಸಮ್ಮೇಳನ ಅಧ್ಯಕ್ಷರಿಗೆ ಶಿಷ್ಟಾಚಾರದಂತೆ ಆಮಂತ್ರಿಸಲಾಯಿತು.

ಸರಗೂರು, ಜ.15– ಸರಗೂರು ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಸಮ್ಮೇಳನ ಸರ್ವಾಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ ಅವರಿಗೆ ಅಧಿಕೃತವಾಗಿ ಶಿಷ್ಟಾಚಾರದಂತೆ ಆಹ್ವಾನಿಸಲಾಯಿತು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ಶಾಸಕರಾದ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ ಸಮ್ಮೇಳನ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ ಅವರ ಮೈಸೂರಿನ ನಿವಾಸದಲ್ಲಿ ಭೇಟಿ ಮಾಡಿ ಆಹ್ವಾನ ನೀಡಲಾಯಿತು. ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನೂತನ ಸರಗೂರು ತಾಲೂಕು ರಚನೆಯಾದ ನಂತರ ನಡೆಯಲಿರುವ ಪ್ರಥಮ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆಗಳು ಸಾಗಿವೆ. ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಎಂದರು.

ಡಾ.ವೈ.ಡಿ.ರಾಜಣ್ಣ ಅವರು ಸರಗೂರು ತಾಲೂಕಿನಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿದ್ದ ಅವಧಿಯಲ್ಲಿ ಎಚ್.ಡಿ.ಕೋಟೆ, ಸರಗೂರು ಹಾಗೂ ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಸಾಹಿತ್ಯ ಸಮ್ಮೇಳನಗಳು, ಕನ್ನಡ ವಿಚಾರಗೋಷ್ಠಿಗಳು–ಸಾಹಿತ್ಯ ಕಮ್ಮಟಗಳು–ತರಬೇತಿ ಶಿಬಿರಗಳು.... ಹೀಗೆ ತಮ್ಮದೇ ರೀತಿಯಲ್ಲಿ ಕನ್ನಡವನ್ನು ಕಟ್ಟಿ ಬೆಳೆಸಿರುವ ಹಾಗೂ ಸಾಹಿತಿಯಾಗಿಯೂ ಹಲವು ಕೃತಿಗಳನ್ನು ರಚಿಸಿರುವ ಡಾ.ವೈ.ಡಿ.ರಾಜಣ್ಣ ಅವರನ್ನು ಸರಗೂರು ತಾಲೂಕು ಜನತೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆ ಮಾಡಿರುವ ಹಿನ್ನೆಲೆಯಲ್ಲಿ ಅವರ ನಿವಾಸದಲ್ಲಿ ಆಹ್ವಾನಿಸಲಾಗುತ್ತಿದೆ ಎಂದರು.

ಸಮ್ಮೇಳನ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿ, ಸಮ್ಮೇಳನವು ನೂತನ ತಾಲೂಕು ಕೇಂದ್ರವಾಗಿ ರೂಪುಗೊಂಡ ನಂತರ ಸರಗೂರಿನಲ್ಲಿ ಜರುಗುತ್ತಿರುವ ಮೊದಲ ಸಮ್ಮೇಳನ ಕಾರಣಕ್ಕೆ ಐತಿಹಾಸಿಕ ಮಹತ್ವ ಹೊಂದಿದೆ. ಹೇರಳ ಅರಣ್ಯ ಸಂಪತ್ತು, ನುಗು– ಕಬಿನಿ ಜಲಾಶಯಗಳ ಜಲಸಂಪತ್ತು, ತಾಲೂಕಿನ ಅಧಿದೇವತೆ ಚಿಕ್ಕದೇವಮ್ಮ ತಾಯಿ ಹಾಗೂ ಬೇಲದ ಕುಪ್ಪೆ ಮಹದೇಶ್ವರ ಸನ್ನಿಧಿಯ ನೆಲೆ ನೆಲವೀಡಾಗಿದೆ. ಇಂತಹ ತಾಣದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ತಾಲೂಕಿನ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿಚಾರ ವಿನಿಮಯಗಳ ಮೂಲಕ ತಾಲೂಕಿನ ಸಂಸ್ಕೃತಿ ಪ್ರಜ್ಞೆಯನ್ನು ಸಾಕ್ಷೀಕರಿಸಲಿದೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಂ ಚಂದ್ರಶೇಖರ್, ನಗರ ಘಟಕದ ಅಧ್ಯಕ್ಷ ಕೆ ಎಸ್ ಶಿವರಾಮ್, ಮೂಗೂರು ನಂಜುಂಡ ಸ್ವಾಮಿ, ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ.ಲತಾ ಮೋಹನ್ ಹಾಗೂ ಸರಗೂರು ತಾಲೂಕಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಎಂ.ಕೆಂಡಗಣ್ಣಸ್ವಾಮಿ, ಕಾರ್ಯದರ್ಶಿ ನಿಂಗರಾಜು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಪಿ ರವಿ, ಸಮ್ಮೇಳನದ ಕಾರ್ಯನಿರ್ವಾಹಕ ಸದಸ್ಯರಾದ ಎಸ್ ಎನ್ ನಾಗರಾಜು ರಾಜನಹಳ್ಳಿ ರಾಜನಾಯಕ, ಶಿವಶಂಕರ್, ಸತೀಶ್, ಮಲ್ಲೇಶ್, ಶಿವರಾಜ್ ಕನ್ನಡ ಪ್ರಮೋದ್ ಸುಧೀರ್, ಸಕಲೇಶ್ ಸಾಗರೆ. ರಘುರಾಮ್ ಇತರರು ಉಪಸ್ಥಿತರಿದ್ದರು

ರಾಷ್ಟ್ರೀಯ ಸೇವಾ ದಿನದ ವಿಶೇಷ ಕಾರ್ಯಕ್ರಮ



ರಾಷ್ಟ್ರೀಯ ಸೇವಾ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ ನಡೆಯಿತು.

ಹುಣಸೂರು, ಜ.15– ರಾಷ್ಟ್ರೀಯ ಸೇವಾ ದಿನದ ಅಂಗವಾಗಿ ನಗರದ ಮಾಧವ ವಿದ್ಯಾ ಸಂಸ್ಥೆಯಲ್ಲಿ ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮವನ್ನು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಮಾಧವ್ ಬಾಗಲ್ ಉದ್ಘಾಟಿಸಿ ಮಾತನಾಡಿದರು.

ಸಂಸ್ಥೆಯ ವ್ಯವಸ್ಥಾಪಕರಾದ ರಘು ವೀರ್ ಜೀ ಮಾತನಾಡಿ, ಸೇವಾ ದಿನದ ಮಹತ್ವ ಹಾಗೂ ಅಜಿತ್ ಜೀರವರ ಜೀವನ ಹಾಗೂ ಅವರ ಹೋರಾಟಗಳ ಕುರಿತು ಮಕ್ಕಳಿಗೆ ತಿಳಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯ ಶಿಕ್ಷಕ ವೆಂಕಟೇಶ್ ಎಚ್.ಕೆ ಮಾತನಾಡಿ, ಶಾಲಾ ದಿನಗಳಿಂದಲೇ ಮಕ್ಕಳು ದೇಶಸೇವೆ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಬಿರೇಶ್ ಜೀ, ಚಂದ್ರು ಜೀ, ಜ್ಯೋತಿ, ಪ್ರಿಯ, ಹೇಮಾ ಭಾಯಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ತಿ ನರಸೀಪುರ ಹೊಸ ತಿರುಮಕೊಡಲಿನಲ್ಲಿ ಸಂಜೆ ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ರೈತರು, ಯುವಕರು ಜಾನುವಾರುಗಳಿಗೆ ಕಿಚ್ಚು ಹಾಯಿಸಿ ಮೆರವಣಿಗೆ ನಡೆಸಿದರು. ಎತ್ತಿನಗಾಡಿ ಮರಳು ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷ ತಿರುಮಕೊಡಲು ಪುಟ್ಟು, ಪ್ರಸಾದ್, ಮಹೇಶ್, ಚಂದ್ರ, ಪಾಪು, ಲೋಕೇಶ್, ಚಂದ್ರಶೇಖರ್, ನಾಗಣ್ಣ, ಡಾ. ಮೂರ್ತಿ, ಮಧು, ಅಣ್ಣ ರಮೇಶ್, ಪುಟ್ಟಿಮಾದು ಗ್ರಾಮಸ್ಥರು ಹಾಜರಿದ್ದರು.

ಕಿಚ್ಚು ಹಾಯಿಸಿ ಮೆರವಣಿಗೆ



ಜ.31ರಿಂದ ವೈಭವದ ಮುಡುಕುತೊರೆ ಜಾತ್ರೆ ಆರಂಭ

ಭಕ್ತಾದಿಗಳಿಗೆ, ರಾಸುಗಳಿಗೆ ಯಾವುದೇ ತೊಂದರೆಯಾಗದಂತೆ ಸಿದ್ಧತೆ ಕೈಗೊಳ್ಳಲು ಸೂಚನೆ



ತಿ.ನರಸೀಪುರ, ಜ.15– ಮುಡುಕುತೊರೆ ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ಬ್ರಹ್ಮರಥೋತ್ಸವ ಜಾತ್ರಾ ಮಹೋತ್ಸವ ಜ.31ರಿಂದ ಆರಂಭವಾಗಲಿದ್ದು, ಫೆ.16ರವರೆಗೆ ನಡೆಯಲಿದೆ. ಆಗಮಿಸುವ ಭಕ್ತಾದಿಗಳು ಹಾಗೂ ರಾಸುಗಳಿಗೆ ಯಾವುದೇ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮ ವಹಿಸಬೇಕೆಂದು ಸಂಸದ ಸುನೀಲ್ ಬೋಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕಿನ ಮುಡುಕುತೊರೆ ಗ್ರಾಮದ ಜೆಎಸ್‌ಎಸ್ ಅತಿಥಿಗೃಹದಲ್ಲಿ ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಕೈಗೊಳ್ಳಬೇಕಾದ ಸಿದ್ಧತಾ ಕ್ರಮಗಳ ಕುರಿತಂತೆ ಕರೆಯಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭ್ರಮರಾಂಭ ಸಮೇತ ಶ್ರೀಮಲ್ಲಿಕಾರ್ಜುನ ಸ್ವಾಮಿಯವರ ದೇವಾಲಯದ ಜೀರ್ಣೋದ್ಧಾರದ ಅಂಗವಾಗಿ ಮೂಲದೇವತೆಗಳನ್ನು ಹೊರತುಪಡಿಸಿ ದೇವಾಲಯವನ್ನು ಸಂಪೂರ್ಣವಾಗಿ ಕಲಾಕರ್ಷಣೆ ಮಾಡಿ ಗರ್ಭ ಗೃಹವನ್ನು ಬಾಲಸ್ಥಾಪನೆ ಮಾಡಿದ್ದು, ದೇವಾಲಯ ಪೂರ್ಣ ನಿರ್ಮಾಣವಾಗುವವರೆಗೆ ಬ್ರಹ್ಮ ರಥೋತ್ಸವ, ಮಹೋತ್ಸವ ನಡೆಸಲು ಅವಕಾಶ ಇಲ್ಲದ್ದರಿಂದ ದನಗಳ ಜಾತ್ರೆ ಹಾಗೂ ಭಕ್ತರು ನಡೆಸುವ ಅರವಟ್ಟಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಬಾರಿಯ ಜಾತ್ರೆಗೆ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಆಗಮಿಸಲಿದ್ದು ಭಕ್ತಾದಿಗಳಿಗೆ ಯಾವುದೇ ಸಮಸ್ಯೆ ಆಗದಂತೆ ಮೂಲ ಸೌಲಭ್ಯ ಒದಗಿಸಿ ಅನುಕೂಲ ಕಲ್ಪಿಸಿಕೊಡುವ ಜೊತೆಗೆ ಜಾತ್ರೆಯಲ್ಲಿ ಯಾವುದೇ ಅಚಾತುರ್ಯ ನಡೆಯದಂತೆ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.



ತಿ.ನರಸೀಪುರ ತಾಲೂಕು ಮುಡುಕುತೊರೆಯಲ್ಲಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿರುವ ಹಿನ್ನೆಲೆಯಲ್ಲಿ ಬುಧವಾರ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಸಂಸದ ಸುನೀಲ್ ಬೋಸ್ ಮಾತನಾಡಿದರು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ಜಾತ್ರಾ ಮಹೋತ್ಸವ ಜನವರಿ 31 ರಿಂದ ಫೆಬ್ರವರಿ 16 ರವರೆಗೆ ನಡೆಯಲಿದ್ದು, ತಿರುಮಕೂಡಲಿನ ತ್ರಿವೇಣಿ ಸಂಗಮದಲ್ಲಿ ಇದೇ ಸಮಯದಲ್ಲಿ ಕುಂಭಮೇಳಸಹ ನಡೆಯುವುದರಿಂದ ಮಹಿಳೆಯರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಬರುವ ನಿರೀಕ್ಷೆ ಇದ್ದು, ನಿರೀಕ್ಷೆಗೆ ತಕ್ಕಂತೆ ಅಗತ್ಯ ಮೂಲಸೌಕರ್ಯ ಒದಸಿಕೊಡಬೇಕಿದೆ. ಫೆ.7 ಕ್ಕೆ ರಥೋತ್ಸವ ಇದ್ದರೂ ದೇವಸ್ಥಾನದ ಕಾಮಗಾರಿ ಚಾಲನೆಯಲ್ಲಿರುವುದರಿಂದ ಉತ್ಸವ ಕಾರ್ಯಕ್ರಮ ಇರುವುದಿಲ್ಲ ಎಂದು ತಿಳಿಸಿದರು.

ಜಾತ್ರಾ ಮಹೋತ್ಸವದಲ್ಲಿ ಪ್ರತಿ ಬಾರಿಯಂತೆ ಈ ಬಾರಿಯೂ ವಿವಿಧ ಕಲಾ ಸಾಂಸ್ಕೃತಿಕ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಬರುವ ಭಕ್ತ ಸಮೂಹಕ್ಕೆ ಮನರಂಜನೆ ನೀಡುವಂತೆ ಸುನೀಲ್ ಬೋಸ್ ಸಲಹೆ ನೀಡಿದರು.

ಆರೋಗ್ಯ ಇಲಾಖೆ ವತಿಯಿಂದ ಜಾತ್ರೆ ಆರಂಭಗೊಂಡ ದಿನದಿಂದ ಮುಕ್ತಾಯದ ದಿನದವರೆಗೂ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದು ಭಕ್ತಾದಿಗಳ ಆರೋಗ್ಯ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಲಾಗುತ್ತದೆಯಲ್ಲದೇ ಎಮರ್ಜೆನ್ಸಿಗಾಗಿ ಆಂಬುಲೆನ್ಸ್ ಅನ್ನು ಸ್ಥಳದಲ್ಲಿ ನಿಯೋಜನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಾಲೂಕು ಆಡಳಿತಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ರಾಮಸ್ವಾಮಿ ನಾಲೆಗೆ ಜನವರಿ 25 ರಿಂದಲೇ ಹೆಚ್ಚುವರಿ ನೀರು ಬಿಡುಗಡೆ ಮಾಡುವಂತೆ ಸೂಚನೆ ನೀಡಿದ ಸಂಸದರು, ಪಂಚಾಯತ್ ರಾಜ್ ಇಲಾಖೆಯವರು ಶೌಚಾಲಯ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ತಿಳಿಸಿದರು. ಆದರೆ ಇಲಾಖೆಯವರು ಸಮರ್ಪಕವಾಗಿ ಕೆಲಸ ಮಾಡುವುದಿಲ್ಲ ಎಂಬ ದೂರು ಕೇಳಿ ಬಂದಿದ್ದರಿಂದ ಪಂಚಾಯತ್ ರಾಜ್, ಮುಜರಾಯಿ ಹಾಗೂ ಸ್ಥಳೀಯ ಗ್ರಾಮ ಪಂಚಾಯತಿಯವರು ಸೇರಿ ನಿರ್ವಹಣೆ ಮಾಡುವಂತೆ ತಿಳಿಸಿದರು.

ಜಾತ್ರೆಯಲ್ಲಿ ಪೊಲೀಸ್ ಇಲಾಖೆಯವರ ಪಾತ್ರ ಅತಿ ಪ್ರಮುಖವಾಗಿದ್ದು, ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಭಕ್ತಾದಿಗಳು ಆಗಮಿಸುವುದರಿಂದ ಆಯಕಟ್ಟಿನ ಸ್ಥಳಗಳಲ್ಲಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ ಜಾತ್ರೆ ಸುಗಮವಾಗಿ ನಡೆಯಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ತಲಕಾಡು ಶ್ರೀ ವೈದ್ಯನಾಥೇಶ್ವರ ಸ್ವಾಮಿ ಹಾಗೂ ಸಮೂಹ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಬೆಟ್ಟಳ್ಳಿ ಎಂ.ನಾಗರಾಜು, ಎನ್.ಕೋಕಿಲಾ, ಕೆ.ನಾಗಮ್ಮ, ಟಿ.ಎಂ.ವಿಜಯಕುಮಾರ್, ಆರ್. ಮಾದೇಶ್, ಸಿ.ಶಾಂತಕುಮಾರ್, ಟಿ.ಎನ್.ಲೋಕೇಶ್, ಟಿ.ಎಸ್.ಗೋವಿಂದರಾಜು, ಉಪ್ಪಾರ ಮಹಾಸಭಾದ ಅಧ್ಯಕ್ಷ ಕಾವೇರಿಪುರ ಮಹದೇವ ಶೆಟ್ಟಿ, ತಾಪಂ ಮಾಜಿ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಸ್ವಾಮಿ, ಸದಸ್ಯರಾದ ನರಸಿಂಹಮಾದನಾಯ್ಕ, ಕುಕ್ಕೂರು ಗಣೇಶ್, ಮಲ್ಲಾಜಮ್ಮ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಎನ್. ಮಹದೇವಸ್ವಾಮಿ, ಮಾಜಿ ಉಪಾಧ್ಯಕ್ಷ ರಾಘವೇಂದ್ರ, ತಹಸೀಲ್ದಾರ್ ಸುರೇಶಾಚಾರ್, ದೇವಸ್ಥಾನದ ವ್ಯವಸ್ಥಾಪಕ ವೆಂಕಟೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಲೋಕೋಪ ಯೋಗಿ ಎಇಇ ಸತೀಶ್ ಚಂದ್ರ, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಶಾಂತ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಹೆಡಿಯಾಲ ಸಮೀಪ ಕಾಡಾನೆಗಳ ದಾಂದಲೆ

ಹುರಳಿ, ಬಾಳೆ, ತರಕಾರಿ ಬೆಳೆಗಳು ನಾಶ

ನಂಜನಗೂಡು, ಜ.15– ತಾಲೂಕಿನ ಕಾಡಂಚಿನ ಪ್ರದೇಶ ಹೆಡಿಯಾಲ ಸಮೀಪದ ಮಡುವಿನಹಳ್ಳಿ ಗ್ರಾಮದ ಹೊರವಲಯದಲ್ಲಿ ಬುಧವಾರ ಮುಂಜಾನೆ ಪ್ರತ್ಯಕ್ಷವಾದ ಮೂರು ಕಾಡಾನೆಗಳು ರೈತರ ಜಮೀನಿಗೆ ನುಗ್ಗಿ ದಾಂದಲೆ ನಡೆಸಿ ಬೆಳೆ ನಾಶಪಡಿಸಿವೆ.



ಗ್ರಾಮದ ಹೊರವಲಯದ ರೈತನೋರ್ವರ ಜಮೀನಿನಲ್ಲಿ ಬೆಳಗ್ಗೆ 4ರ ಸಮಯದಲ್ಲಿ ಪ್ರತ್ಯಕ್ಷವಾದ ಮೂರು ಕಾಡಾನೆಗಳು ಸುತ್ತಲಿನ ಪ್ರದೇಶದಲ್ಲೆಲ್ಲಾ ಸಂಚರಿಸಿ ರೈತರ ಜಮೀನಿನಲ್ಲಿ ಬೆಳೆದಿದ್ದ ಹುರುಳಿ, ಬಾಳೆ ಹಾಗೂ ತರಕಾರಿ ಬೆಳೆಗಳನ್ನು ನಾಶಪಡಿಸಿವೆ. ಇನ್ನು ರೈತರ ಜಮೀನಿಗೆ ಆನೆಗಳು ದಾಳಿಯಿಟ್ಟಿರುವ ಕುರಿತು ಮಾಹಿತಿ ಪಡೆದು ಸ್ಥಳಕ್ಕಾಗಮಿಸಿದ ನೂರಾರು ಸಂಖ್ಯೆಯ ಜನರು ಆನೆಗಳನ್ನು ಕಾಡಿನತ್ತ ಓಡಿಸಲು ಮುಂದಾದರಾದರೂ ಸಾಧ್ಯವಾಗಲಿಲ್ಲ. ಬಳಿಕ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಆನೆಗಳನ್ನು ಈರೇಗೌಡನಹುಂಡಿ ಹಾಗೂ ಗಣೇಶಪುರ ಮೂಲಕ ವಾಪಸ್ ಕಾಡಿಗೆ ಅಟ್ಟುವಲ್ಲಿ ಯಶಸ್ವಿಯಾದರು. ಈ ಸಂದರ್ಭ ಎಸಿಎಫ್ ಸತೀಶ್, ಆರ್‌ಎಫ್‌ಓ ಮುನಿರಾಜು ಮತ್ತಿತರರು ಉಪಸ್ಥಿತರಿದ್ದರು.

ಇನ್ನು ರೈತರ ಜಮೀನಿನಲ್ಲಿ ಬೆಳೆದಿರುವ ಹುರುಳಿ ಬೆಳೆ ಕಟಾವಿಗೆ ಬಂದಿರುವುದರಿಂದ ಒಕ್ಕಣೆ ಮಾಡಲೆಂದು ರೈತರು ಮುಂಜಾನೆಯೇ ತಮ್ಮ ಜಮೀನಿಗೆ ತೆರಳುತ್ತಾರೆ ಇಂತಹ ಸಮಯದಲ್ಲಿ ಆನೆಗಳ ಹಾವಳಿ ಹೆಚ್ಚಾಗಿರುವುದರಿಂದ ಕೃಷಿ ಚಟುವಟಿಕೆ ಕೈಗೊಳ್ಳಲು ತೊಡಕಾಗುತ್ತಿದ್ದು ಅರಣ್ಯ ಇಲಾಖೆಯವರು ಕಾಡುಪ್ರಾಣಿಗಳ ಉಪಟಳ ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಮೊಳ್ಳ ಶಿವಣ್ಣಭೋವಿ ನಿಧನ



ಹೆಚ್.ಡಿ.ಕೋಟೆ, ಜ.15– ನಂದಿನಾಥಪುರ ಗ್ರಾಮದ ನಾಡ ಯಜಮಾನರಾದ ಮೊಳ್ಳ ಶಿವಣ್ಣಭೋವಿ (78) ನಿಧನರಾಗಿದ್ದಾರೆ. ಮೃತರು ಪತ್ನಿ ಮುದ್ದಮ್ಮ, ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಬುಧವಾರ ಅವರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ವರ್ಣರಂಜಿತ ಚಾಲನೆ

● ನಾಟಕೋತ್ಸವ ಉದ್ಘಾಟಿಸಿದ ಬಹುಭಾಷಾ ನಟ ಅತುಲ್ ಕುಲಕರ್ಣಿ ● ಕಲಾಮಂದಿರದ ಆವರಣದಲ್ಲಿ ಹಬ್ಬದ ವಾತಾವರಣ




ಬಹುರೂಪಿ ನಾಟಕೋತ್ಸವಕ್ಕೆ ಬಹುಭಾಷಾ ನಟ ಅತುಲ್ ಕುಲಕರ್ಣಿ ಚಾಲನೆ ನೀಡಿದರು. ಬಲಚಿತ್ರದಲ್ಲಿ ಭಟ್ಕಳದ ಕೊಂಕಣಿ ಖಾರ್ವಿ ಕಲಾಮಾಂಡ್ ತಂಡದ ಕಲಾವಿದರಿಂದ ಕೊಂಕಣಿ ಖಾರ್ವಿ ಜಾನಪದ ಕಲಾನೃತ್ಯ

ಮೈಸೂರು, ಜ.15(ಎಂಟಿವೈ)– ಪ್ರತಿಷ್ಠಿತ ಮೈಸೂರಿನ ರಂಗಾಯಣದಲ್ಲಿ 'ಬಿಡುಗಡೆ' ಘೋಷಣೆಯೊಂದಿಗೆ ಆಯೋಜಿಸಿರುವ ಆರು ದಿನಗಳ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಮಂಗಳವಾರ ವರ್ಣರಂಜಿತ ಚಾಲನೆ ದೊರೆಯಿತು.

ವಿಶೇಷ ರೀತಿ ಅಲಂಕಾರಗೊಂಡಿರುವ ರಂಗಾಯಣದ ಆವರಣದಲ್ಲಿ ಹಬ್ಬದ ವಾತಾವರಣ ಕಳೆಕಟ್ಟಿತ್ತು. ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ ಬಹುರೂಪಿಗೆ ವಿಶೇಷ ಮೆರುಗು ನೀಡಿತು. ಈ ನಡುವೆ ವನರಂಗದಲ್ಲಿ ಮಂಗಳವಾರ ಸಂಜೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಹುಭಾಷಾ ನಟ ಅತುಲ್ ಕುಲಕರ್ಣಿ ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ 'ಮಾನಸಿಕ ಬಿಡುಗಡೆಯೇ ನಿಜವಾದ ಸ್ವಾತಂತ್ರ್ಯ' ಮಾತನ್ನು ಅಕ್ಷರ ರೂಪದಲ್ಲಿ ಅನಾವರಣಗೊಳಿಸುವ ಮೂಲಕ ಈ ಬಾರಿಯ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಚಾಲನೆ ನೀಡಿದರು. ಈ ಸಂದರ್ಭ ಅತಿಥಿಗಳು ಸಂವಿಧಾನ ಹಾಗೂ ಅಂಬೇಡ್ಕರ್ ಅವರ ಭಾವಚಿತ್ರವನ್ನು ಪ್ರದರ್ಶಿಸುವ ಮೂಲಕ ಗಮನ ಸೆಳೆದರು.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಚಾಲನೆ ನೀಡಿದ ಬಳಿಕ ನಟ ಅತುಲ್ ಕುಲಕರ್ಣಿ ಮಾತನಾಡಿ, ಭಾರತೀಯ ರಂಗಭೂಮಿಗೆ ಕರ್ನಾಟಕ ಅಪಾರವಾದ ಕೊಡುಗೆ ನೀಡಿದೆ. ರಂಗಭೂಮಿ ಬೆಳವಣಿಗೆಯಲ್ಲಿ ನೀನಾಸಂ ಹಾಗೂ ರಂಗಾಯಣ ಸಾಕಷ್ಟು ಶ್ರಮಿಸಿವೆ. ರಂಗಾಯಣದ ಈ ಬಾರಿಯ ಬಹುರೂಪಿ ನಾಟಕೋತ್ಸವದ ಘೋಷವಾಕ್ಯ 'ಬಿಡುಗಡೆ' ಅರ್ಥಪೂರ್ಣವಾಗಿದೆ. ಈ ಪದಕ್ಕೆ ತನ್ನದೇ ಆದ ಮಹತ್ವವಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಈ ಪದವೇ ಕೆಟ್ಟ ಪದವಾಗಿ ಮಾರ್ಪಾಡು ಮಾಡುತ್ತಿರುವುದು ವಿಷಾದನೀಯ. 'ಬಿಡುಗಡೆ' ಪದದ ಕುರಿತು ಅಪಪ್ರಚಾರ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಸತ್ಯವನ್ನು ತಿಳಿಸುವ ಜವಾಬ್ದಾರಿ ರಂಗಭೂಮಿಯ ಮೇಲಿದೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ಸಿನಿಮಾರಂಗ ದುಬಾರಿ ಮಾಧ್ಯಮವಾಗಿ ಮಾರ್ಪಟ್ಟಿದೆ. ಸಿನಿಮಾ ತಯಾರಿಸಲು ಸಾಕಷ್ಟು ಹಣವನ್ನು ವಿನಿಯೋಗಿಸಬೇಕಾಗುತ್ತದೆ. ಸಿನಿಮಾದಲ್ಲಿ ಶೇ.20ರಷ್ಟು ಮಾತ್ರ ಕಲೆ ಇರುತ್ತದೆ. ಉಳಿದ ಶೇ.80ರಷ್ಟು ಹಣವೇ ತುಂಬಿಕೊಂಡಿರುತ್ತದೆ. ಹಾಗಾಗಿ ಸಮಾಜವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವ ಜವಾಬ್ದಾರಿ ರಂಗಭೂಮಿಯ ಮೇಲಿದೆ. ಉತ್ತಮ ವಿಚಾರಗಳನ್ನು ಬಿತ್ತಲು ಇಂತಹ ಬಹುರೂಪಿ ಉತ್ಸವ ಉತ್ತಮ ವೇದಿಕೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಬರೀ ಅಪಪ್ರಚಾರ: ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಬಹುಭಾಷಾ ನಟ ಪ್ರಕಾಶ್‌ರಾಜ್ ಮಾತನಾಡಿ, ಮಹಾತ್ಮಗಾಂಧೀಜಿ 1948ರಲ್ಲಿ ಕೋಮು ಸಾಮರಸ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಾಷಣ ಮಾಡಿದ 2 ದಿನಗಳಲ್ಲಿ ಮೃತಪಟ್ಟರು ಎಂದು ಮಾಧ್ಯಮವೊಂದು ಬರೆದಿತ್ತು. 'ಮಹಾತ್ಮಗಾಂಧಿ ಅವರು ಮೃತಪಡಲಿಲ್ಲ, ಅವರನ್ನು ಭಯೋತ್ಪಾದಕರು ಕೊಂದರು' ಎಂದು ನಾನು ಆ ಮಾಧ್ಯಮಕ್ಕೆ ಹೇಳಿದ್ದೆ. ದೇಶದಲ್ಲಿ ಹೇಗೆ ಅಪಪ್ರಚಾರ ಮಾಡಲಾಗುತ್ತಿದೆ ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ. ಮುಂದಿನ ತಲೆಮಾರಿಗೆ ಇತಿಹಾಸವನ್ನೇ ತಿರುಚುವ ಕಾರ್ಯ ನಡೆಯುತ್ತಿದೆ. ಭವಿಷ್ಯದಲ್ಲಿ ಇತಿಹಾಸ ಬರೆಯುವಾಗ ಮುಂದಿನ ತಲೆಮಾರು ತಪ್ಪು ಮಾಡಿದವರನ್ನು ಮರೆಯಬಹುದೇನೋ, ಆದರೆ ಮೌನವಾಗಿದ್ದವರನ್ನು ಎಂದಿಗೂ ಮರೆಯುವುದಿಲ್ಲ. ಮೌನವಾಗಿರುವವರನ್ನು ಮುಂದಿನ ತಲೆಮಾರು ಕ್ಷಮಿಸುವುದಿಲ್ಲ. ಅನ್ಯಾಯ ಕಂಡಾಗ ಮಾತನಾಡಬೇಕು ಹಾಗೂ ಪ್ರಶ್ನಿಸಬೇಕು ಎಂದು ಸಲಹೆ ನೀಡಿದರು.

ರಂಗಾಯಣ ಉಳಿಸಲೇಬೇಕು: ದೇಶಕ್ಕೆ ಅರಣ್ಯ ಹೇಗೋ ಹಾಗೆಯೇ ದೇಶಕ್ಕೆ ರಂಗಭೂಮಿಯೂ ಮುಖ್ಯ ಎನ್ನುವುದನ್ನು ಸಮಾಜಕ್ಕೆ ಹೇಳಬೇಕು. ಮೈಸೂರು ಅದ್ಭುತವಾದ ಸಾಂಸ್ಕೃತಿಕ ಕೇಂದ್ರವಾಗುತ್ತಿದೆ. ಇಂತಹ ಉತ್ಸವಗಳು ನಡೆಯಲು ರಂಗಾಸಕ್ತರು ಕಾರಣ. ಆದರೆ, ಈ ಸಂದರ್ಭದಲ್ಲಿ ರಂಗಾಯಣವನ್ನು ಉಳಿಸಿಕೊಳ್ಳಬೇಕಾದ ಸ್ಥಿತಿಯಲ್ಲಿ ಇದ್ದೇವೆ. ಹವ್ಯಾಸಿ ರಂಗಭೂಮಿ ಕಲಾವಿದರೂ ರಂಗಾಯಣವನ್ನು ಉಳಿಸಿಕೊಳ್ಳಬೇಕಾಗಿದೆ. ರಂಗಾಯಣದ ಹೆಸರಿನಲ್ಲಿ ಒಂದು ಕಟ್ಟಡ ಕಟ್ಟಲು ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಥವಾ ಜಿಲ್ಲಾಧಿಕಾರಿ ಹೆಸರಿನಲ್ಲಿ ಕಟ್ಟಡ ನಿರ್ಮಿಸಬೇಕಾಗುತ್ತದೆ. ರಂಗಾಯಣಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ಸರ್ಕಾರ ಅನುದಾನ ನೀಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯನ್ನು ಭೇಟಿಯಾಗಿ ರಂಗಾಯಣವನ್ನು ಉಳಿಸಿಕೊಳ್ಳುವ ಕುರಿತು ಚರ್ಚಿಸೋಣ ಎಂದರು.

ಕಾರ್ಯಕ್ರಮದಲ್ಲಿ ಡಿಸಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ನಟಿ ಭಾವನಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಉಪ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ರಂಗಸಮಾಜ ಸದಸ್ಯರಾದ ಹೆಚ್.ಎಸ್. ಸುರೇಶ್ ಬಾಬು, ರಾಜಪ್ಪ ದಳವಾಯಿ, ಯಕ್ಷರಂಗಾಯಣ ನಿರ್ದೇಶಕ ವೆಂಕಟರಮಣ ಐತಾಳ್ ಇತರರು ಉಪಸ್ಥಿತರಿದ್ದರು.


ಗಮನ ಸೆಳೆದ ಜಾನಪದ ಉತ್ಸವ: ಬಹುರೂಪಿ ನಾಟಕೋತ್ಸವದ ಅಂಗವಾಗಿ ಕಲಾಮಂದಿರುವ ಕಿಂದರಿಜೋಗಿ ಮುಂಭಾಗ ಆಯೋಜಿಸಿದ್ದ ಜನಪದ ಉತ್ಸವ ನೋಡುಗರ ಮನಸೂರೆಗೊಂಡಿತು. ಭಟ್ಕಳದ ಕೊಂಕಣಿ ಖಾರ್ವಿ ಕಲಾಮಾಂಡ್ ತಂಡದ ಕಲಾವಿದರಿಂದ ಕೊಂಕಣಿ ಖಾರ್ವಿ ಜಾನಪದ ಕಲಾನೃತ್ಯ ಹಾಗೂ ಮಂಗಳೂರಿನ ಕಲಾವಿದರಿಂದ ದಫ್ ಎಂಬ ವಾದ್ಯನೃತ್ಯ ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಕರಕುಶಲ ವಸ್ತುಪ್ರದರ್ಶನ

ಕಲಾಮಂದಿರದ ಆವರಣದಲ್ಲಿ ಬಹುರೂಪಿ ನಾಟಕೋತ್ಸವದ ಅಂಗವಾಗಿ ಆಯೋಜಿಸಿರುವ ಕರಕುಶಲ ಮೇಳ, ಪುಸ್ತಕ ಮೇಳದಲ್ಲಿ ಹಲವು ಮಳಿಗೆಗಳಿದ್ದು, ಅದರಲ್ಲಿ ಗುಡಿ ಕೈಗಾರಿಕಾ ವಸ್ತುಗಳು, ವಿವಿಧ ವಿನ್ಯಾಸದ ಉಡುಪುಗಳು, ಅಲಂಕಾರಿಕ ವಸ್ತುಗಳು, ಪತ್ರಿಕಾ ಛಾಯಾಗ್ರಾಹಕ ಎಸ್.ಆರ್.ಮಧುಸೂದನ್, ಜಿ.ಎಸ್.ರವಿಶಂಕರ್ ಅವರ ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನ, ಕ್ಯಾಲೆಂಡರ್, ಸ್ಟಿಕ್ಕರ್, ಟೇಬಲ್ ಕ್ಯಾಲೆಂಡರ್ ಮಾರಾಟಕ್ಕಿಟ್ಟಿದ್ದು, ವನ್ಯಜೀವಿ ಪ್ರೇಮಿಗಳ ಗಮನ ಸೆಳೆಯುತ್ತಿದೆ. ಇದರೊಂದಿಗೆ ಮಣ್ಣಿನ ಅಲಂಕಾರಿ ದೀಪ, ಮಣ್ಣಿನ ಅಡುಗೆ ಪಾತ್ರೆ, ಕಿವಿ ಓಲೆ, ಖಾದಿ ಶರ್ಟ್ ಸೇರಿದಂತೆ ಇನ್ನಿತರ ಮಳಿಗೆಗಳು ರಂಗಾಸಕ್ತರಿಗೆ ಮುದ ನೀಡುತ್ತಿವೆ.

ಆಹಾರ ಮಳಿಗೆಗೆ ಡಿಮ್ಯಾಂಡ್

ಪ್ರತಿವರ್ಷದಂತೆ ಈ ಬಾರಿಯೂ ಬಹುರೂಪಿ ನಾಟಕೋತ್ಸವದಲ್ಲಿ ಏರ್ಪಡಿಸಿರುವ ಆಹಾರ ಮೇಳದ ಮಳಿಗೆಗಳಿಗೆ ಜನಜಾತ್ರೆ ಹರಿದು ಬರುತ್ತಿದೆ. ಉತ್ತರ ಕರ್ನಾಟಕ ಶೈಲಿ ಮಾತ್ರವಲ್ಲದೆ, ದಕ್ಷಿಣ ಕರ್ನಾಟಕದ ಶೈಲಿಯ ವಿವಿಧ ಬಗೆಯ ತಿನಿಸು, ಪಾನೀಯ ಸೇವನೆಗಾಗಿ ಜನ ಮುಗಿ ಬೀಳುತ್ತಿದ್ದಾರೆ.



ಪುಸ್ತಕ ಮೇಳದಲ್ಲಿ ನಟ ಪ್ರಕಾಶ್ ರಾಜ್ ಪುಸ್ತಕ ವೀಕ್ಷಿಸುತ್ತಿರುವುದು.



ಕರಕುಶಲ ಮೇಳದಲ್ಲಿ ಜನರ ದಂಡು.



ಬಹುರೂಪಿ ಚಲನಚಿತ್ರೋತ್ಸವಕ್ಕೆ ನಟಿ ಭಾವನ ಚಾಲನೆ ನೀಡಿದರು.

ಸತ್ಯವನ್ನೇ ಹೇಳುತ್ತೇನೆ ಎಂದು ಬರೀ ಸುಳ್ಳು ಹೇಳಲಾಗುತ್ತಿದೆ; ಅಡ್ಡಂಡ ಕಾರ್ಯಪ್ಪಗೆ ಟಾಂಗ್

ಕಾರ್ಯಕ್ರಮದಲ್ಲಿ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಅಪಪ್ರಚಾರ ಹೆಚ್ಚಾಗುತ್ತಿದೆ. ಜನರಿಗೆ ಸುಳ್ಳು ಹೇಳುವುದು, ತಪ್ಪು ಮಾಹಿತಿ ನೀಡುವ ಸಂಚು ನಡೆಯುತ್ತಿದೆ. ಸುಳ್ಳನ್ನೇ ಬಿತ್ತುತ್ತಿರುವ ಈ ಕಾಲಘಟ್ಟದಲ್ಲಿ ನಾವು ರಂಗಭೂಮಿ ಮೂಲಕ ಸತ್ಯವನ್ನು ಜನರಿಗೆ ತಿಳಿಸುವ ಕಾರ್ಯವಾಗಬೇಕು. ಸುಳ್ಳನ್ನು ಬಿತ್ತಿ, ಬೆಳೆ ಮಾಡಿ ಹಸನಾಗಿ ಹಂಚುತ್ತಿರುವ ಕಾಲದಲ್ಲಿ ನಾವು ಸತ್ಯವನ್ನು ಹೇಳಲೇಬೇಕು. 'ಸತ್ಯವನ್ನೇ ಹೇಳುತ್ತೇನೆ' ಎಂದು ಸುಳ್ಳನ್ನು ಹೇಳುತ್ತಿರುವ ಕಾಲದಲ್ಲಿ ನಾವು ಸತ್ಯವನ್ನು ಮಾತಾಡಲೇಬೇಕು ಎಂದು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಹೆಸರು ಪ್ರಸ್ತಾಪಿಸದೆ ಅವರ ಇತ್ತೀಚಿನ ನಾಟಕ 'ಸತ್ಯವನ್ನೇ ಹೇಳುತ್ತೇನೆ' ಪ್ರಸ್ತಾಪಿಸಿ ಟಾಂಗ್ ನೀಡಿದರು.

ಗುತ್ತಿಗೆದಾರರೇ ಒಂದು ವರ್ಷ ಕೆಲಸ ಮಾಡಬೇಡಿ



ಕುಮಾರಸ್ವಾಮಿ

ಬೆಂಗಳೂರು, ಜ.15–ಗುತ್ತಿಗೆದಾರರೇ, ಒಂದು ವರ್ಷ ಕೆಲಸ ಮಾಡಬೇಡಿ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಲಹೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸರ್ಕಾರದಲ್ಲಿ ಸಾರ್ವಜನಿಕರ ಹಣ ಲೂಟಿ ಆಗುತ್ತಿದೆ. ಈ ರಾಜ್ಯ ಉಳಿಸಬೇಕು ಅಂತ ಇದ್ದರೆ, ಗುತ್ತಿಗೆದಾರರಲ್ಲಿ ಒಗ್ಗಟ್ಟು ಇದ್ದರೆ ಒಂದು ವರ್ಷ ಯಾರೂ ಕೆಲಸ ಮಾಡಬೇಡಿ. ಈ ಸರ್ಕಾರದವರು ಆಂಧ್ರದವರನ್ನೋ, ಯಾರನ್ನೋ ಕರೆದುಕೊಂಡು ಮಾಡಿಸಿಕೊಂಡು ಬರ್ತಾರೋ, ಪ್ಯಾಕೇಜ್ ಕೊಟ್ಟು ಮಾಡಿಸ್ತಾರೋ ನೋಡೋಣ. ಯಾರು ಬಂದು ಮಾಡ್ತಾರೋ ಮಾಡಲಿ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದಲ್ಲಿ ಕೆಟ್ಟ ಆಡಳಿತ ನಡೆಯುತ್ತಿದೆ. ಗುತ್ತಿಗೆದಾರರಿಗೆ ಕೈ ಜೋಡಿಸಿ ಮನವಿ ಮಾಡುತ್ತೇನೆ. ನೀವು ನಿಮ್ಮಲ್ಲಿ ಗುಂಪು ಮಾಡಿಕೊಂಡು, ನಿಮ್ಮಲ್ಲಿ ಒಡಕು ಬಂದರೆ ಅದನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ನೀವು ಕಷ್ಟ ಅನುಭವಿಸುತ್ತಿದ್ದೀರಾ. ಇದೆಲ್ಲ ಕ್ಲೀನ್ ಆಗಬೇಕಾದರೆ ಒಂದು ವರ್ಷ ಯಾರೂ ಗುತ್ತಿಗೆ ತೆಗೆದುಕೊಳ್ಳಬೇಡಿ, ಯಾರೂ ಕೆಲಸ ಮಾಡಬೇಡಿ, ನಿಲ್ಲಿಸಿಬಿಡಿ. ಹೇಗೂ ಸರ್ಕಾರ ಹೊಸ ಕೆಲಸ ಕೊಡುತ್ತಿಲ್ಲ. ಹಿಂದಿನ ಸರ್ಕಾರದಲ್ಲಿ ಮಾಡಿರುವ ಕೆಲಸಕ್ಕೆ ಬಿಲ್ ಕೇಳುತ್ತಿದ್ದೀರಿ. ಹೀಗಾಗಿ ಹಣ ಬರೋವರೆಗೂ ಶಾಂತಿಯುತವಾಗಿ ಪ್ರತಿಭಟನೆ ಮಾಡಿ ಎಂದು ಸಲಹೆ ನೀಡಿದರು.

ಇದಕ್ಕಿಂತ ದಾಖಲಾತಿ ಬೇಕಾ: ಕಿಯೋನಿಕ್ಸ್ ವೆಂಡರ್ಸ್‌ಗಳು ದಯಾಮರಣಕ್ಕೆ ಪತ್ರ ಬರೆದಿರುವ ವಿಚಾರವಾಗಿ ಮಾತನಾಡಿದ ಅವರು, ನಾನು 60% ಕಮಿಷನ್ ಆರೋಪ ಮಾಡಿದಾಗ ಸರ್ಕಾರ, ಸಿಎಂ, ದಾಖಲೆ ಕೊಡಿ ಎಂದು ಹೇಳಿದರು. ಹಂಗಾಮಿ ಕಂಟ್ರಾಕ್ಟರ್ ಅಸೋಸಿಯೇಷನ್ ಅಧ್ಯಕ್ಷರು ಪರ್ಸೆಂಟೇಜ್ ಎಷ್ಟು ಇದೆ ಎಂದು ಹೇಳಿದ್ದಾರೆ. ಇದಕ್ಕಿಂತ ದಾಖಲಾತಿ, ಸಾಕ್ಷಿ ಬೇಕಾ ಎಂದು ಸಿಎಂಗೆ ತಿರುಗೇಟು ನೀಡಿದರು. ದಯಾ ಮರಣಕ್ಕೆ ಯಾಕೆ ಅರ್ಜಿ ಹಾಕ್ತೀರಾ, ಯಾಕೆ ಆತ್ಮಹತ್ಯೆ ಮಾಡಿಕೊಳ್ತೀರಾ. ನೀವು ತಪ್ಪು ಮಾಡಿದ್ದೀರಾ, ತಪ್ಪು ಮಾಡಿರುವುದು ಈ ಸರ್ಕಾರ. ಅದರ ವಿರುದ್ಧ ಹೋರಾಟ ಮಾಡಿ. ದೃಢ ನಿರ್ಧಾರ ಮಾಡಿ ಹೋರಾಟ ಮಾಡಿ. ನೀವೇನು ಭಿಕ್ಷುಕರಲ್ಲ. ಕೆಲಸ ಮಾಡಿದ್ದೀರಾ, ಹಣ ಕೇಳುತ್ತಿದ್ದೀರಾ. ಅದಕ್ಕೆ ಯಾಕೆ ದಯಾಮರಣ ಕೇಳ್ತೀರಾ ಎಂದು ಧೈರ್ಯ ಹೇಳಿದರು.

ಪ್ರಿಯಾಂಕ್ ಖರ್ಗೆ ಅವರೇ ನಿಮ್ಮ ಉಡಾಫೆ ಹೇಳಿಕೆ ಬಿಡಿ. ಏನೇನು ಆಗಿದೆ, ಅದನ್ನು ಸರಿ ಮಾಡೋಕೆ ಪ್ರಯತ್ನ ಮಾಡಿ. ಎಷ್ಟೋ ಕುಟುಂಬದಲ್ಲಿ ಹೆಣ್ಣು ಮಕ್ಕಳ ಒಡವೆ ತಗೊಂಡು ಹೋಗಿ ಬ್ಯಾಂಕ್‌ನಲ್ಲಿ ಇಟ್ಟು ಗುತ್ತಿಗೆದಾರರು ಕೆಲಸ ಮಾಡಿದ್ದಾರೆ. ಸಾವಿರಾರು ಗುತ್ತಿಗೆದಾರರು ಬೀದಿಗೆ ಬಂದಿದ್ದಾರೆ. ಯಾರ ಹತ್ರ ಹೇಳುವ ಹಾಗಿಲ್ಲ ಬಿಡುವ ಆಗಿಲ್ಲ. ಈ ಸರ್ಕಾರದ 6 ತಿಂಗಳಿಂದ ಎಲ್‌ಒಸಿ ಬಿಡುಗಡೆ ಮಾಡಿಲ್ಲ. ಗ್ಯಾರಂಟಿಯಿಂದ ನುಡಿದಂತೆ ನಡೆದಿದ್ದೇವೆ ಅಂತಾರೆ. ನಿಮ್ಮನ್ನು ಬಿಟ್ರೆ ಇನ್ಯಾರು ಇಲ್ಲ ನುಡಿದಂತೆ ನಡೆದವರು. ನೀವು ಒಬ್ಬರೇ. ಈ ಸರ್ಕಾರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ತೆರಿಗೆ ಸಂಗ್ರಹ ಆಗಿಲ್ಲ ಎಂದು ಆರೋಪಿಸಿದರು.

ಕಿಯೋನಿಕ್ಸ್‌ನಲ್ಲಿ ಬಿಲ್ ಪಾವತಿಗೆ ಕಿರುಕುಳ

ದಯಾಮರಣ ಕೋರಿ ರಾಷ್ಟ್ರಪತಿಗೆ 500 ವೆಂಡರ್ಸ್ ಪತ್ರ



ಶರತ್ ಬಚ್ಚೇಗೌಡ ಪ್ರಿಯಾಂಕ್ ಖರ್ಗೆ

ಬೆಂಗಳೂರು, ಜ.15– ಬಾಕಿ ಬಿಲ್ ಪಾವತಿಸದೆ ನಿತ್ಯ ಕಿರುಕುಳ ನೀಡಿ, 450ರಿಂದ 500 ಮಂದಿ ವೆಂಡರ್‌ಗಳ ಜತೆಗೆ ಕೆಲಸ ಮಾಡುವ 6 ಸಾವಿರಕ್ಕೂ ಹೆಚ್ಚು ಕುಟುಂಬಗಳನ್ನು ಸರ್ವನಾಶ ಮಾಡಿದ್ದು, ಎಲ್ಲರಿಗೂ ಒಂದೇ ಬಾರಿಗೆ ಸಾಯಲು ದಯಾಮರಣ ನೀಡಿ ಎಂದು ಕಿಯೋನಿಕ್ಸ್ ವೆಂಡರ್ಸ್ ಅಸೋಸಿಯೇಷನ್ ರಾಷ್ಟ್ರಪತಿಗಳಿಗೆ ಪತ್ರ ಬರೆದಿದೆ.

ಬಾಕಿ ಬಿಲ್‌ಗೆ ಸತಾಯಿಸುತ್ತಿರುವುದರಿಂದ ಬೇಸತ್ತು ವೆಂಡರ್‌ಗಳು ಆತ್ಮಹತ್ಯೆ ಮಾಡಿಕೊಂಡರೆ ಅದಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಶಾಸಕ ಶರತ್ ಬಚ್ಚೇಗೌಡ ಅವರೇ ಕಾರಣ ಎಂದು ಕಿಯೋನಿಕ್ಸ್ ವೆಂಡರ್ಸ್ ಅಸೋಸಿಯೇಷನ್ ಅಧ್ಯಕ್ಷ ವಸಂತ ಬಗೇರ ಹಾಗೂ ಸದಸ್ಯರು ಪತ್ರದಲ್ಲಿ ದೂರಿದ್ದಾರೆ.

2023ರಲ್ಲಿ ಸರ್ಕಾರ ಬದಲಾದ ತಕ್ಷಣ ವೆಂಡರ್‌ಗಳ ಬಾಕಿ ಬಿಲ್ ತಡೆ ಹಿಡಿಯಲಾಗಿದೆ. ಮೂರ್ನಾಲ್ಕು ತಿಂಗಳು ಅಧಿಕಾರಿಗಳು ಹಾಗೂ ಸಚಿವರಲ್ಲಿ ಸಂಯಮದಿಂದ ಮನವಿ ಮಾಡಿದರೂ ಬಿಲ್ ಪಾವತಿಸಿಲ್ಲ. ಈ ಹಿಂದೆ ಕಿಯೋನಿಕ್ಸ್‌ನ ಮುಖ್ಯ ಕಾರ್ಯನಿರ್ವಾಹಕರಾಗಿದ್ದ ಸಂಗಪ್ಪ ಅವರು ಕಮಿಷನ್ ರೂಪದಲ್ಲಿ ಶೇ. 12ರಷ್ಟು ಲಂಚ ಕೇಳಿ ಕಿರುಕುಳ ಕೊಟ್ಟಿದ್ದರು. ಲಂಚ ಕೊಡಲು ಒಪ್ಪದಿದ್ದಾಗ ಬಾಕಿ ಬಿಲ್ ಪಾವತಿಸದೆ ತಡೆಹಿಡಿದಿದ್ದರು. ಪ್ರತಿಭಟನೆ ಸಹ ಮಾಡಿದ್ದೆವು ಎಂದು ಅವರು ಹೇಳಿದ್ದಾರೆ.

ಇಲ್ಲ–ಸಲ್ಲದ ಆರೋಪ: ನಾವು ಪ್ರತಿಭಟನೆ ಮಾಡಿದ್ದರಿಂದ ಸಚಿವ ಪ್ರಿಯಾಂಕ್ ಖರ್ಗೆ ಕೋಪಗೊಂಡು ಅಧಿಕಾರಿಗಳ ಜತೆ ಸೇರಿ ಇಲ್ಲ–ಸಲ್ಲದ ಆರೋಪ ಮಾಡಿ ವೈಯಕ್ತಿಕ ದ್ವೇಷ ಸಾಧಿಸುತ್ತಿದ್ದಾರೆ. ನಿಗಮದಲ್ಲಿ ಯಾರೋ ನಾಲ್ಕು ಜನ ವೆಂಡರ್‌ಗಳು ಮಾಡಿದ ತಪ್ಪನ್ನೇ ಮುಂದಿಟ್ಟುಕೊಂಡು ಬಿಲ್‌ನ ಕಡತಗಳನ್ನು ತಡೆ ಹಿಡಿದಿದ್ದಾರೆ. ಒಂದೂವರೆ ವರ್ಷ ಕಳೆದರೂ ತನಿಖೆ ನೆಪದಲ್ಲಿ ನಮ್ಮ ಬದುಕನ್ನೇ ಸರ್ವನಾಶ ಮಾಡಿದ್ದಾರೆ ಎಂದು ವಸಂತ ಬಗೇರ ದೂರಿದ್ದಾರೆ. ವೆಂಡರ್‌ಗಳ ಸಮಸ್ಯೆಗಳನ್ನು ಮುಖ್ಯಮಂತ್ರಿಗಳು, ಅಧಿಕಾರಿಗಳು ಹಾಗೂ ರಾಜ್ಯಪಾಲರ ಗಮನಕ್ಕೆ ತಂದರೂ ಪರಿಹಾರ ಸಿಕ್ಕಿಲ್ಲ. ಪ್ರಿಯಾಂಕ್ ಖರ್ಗೆ ಅವರು ಕಿಯೋನಿಕ್ಸ್ ಸಂಸ್ಥೆಯನ್ನು ಸ್ವಂತ ಆಸ್ತಿಯಾಗಿ ಮಾಡಿಕೊಂಡು ವ್ಯವಹಾರ ನಡೆಸುತ್ತಿದ್ದಾರೆ. ಅವರಿಂದ ನಮಗೆ ನ್ಯಾಯ ಸಿಗುವುದಿಲ್ಲ ಎಂದು ಅರಿತು ತಮ್ಮ ಬಳಿ ನ್ಯಾಯ ಸಿಗುವ ಭರವಸೆಯೊಂದಿಗೆ ಪತ್ರ ಬರೆಯುತ್ತಿದ್ದೇವೆ ಎಂದು ಉಲ್ಲೇಖಿಸಿದ್ದಾರೆ.

ಈಗಾಗಲೇ ಅತಿಯಾದ ಕಷ್ಟ, ನೋವು ಅನುಭವಿಸಿದ್ದೇವೆ. ಒಂದು ವಾರದೊಳಗೆ ಬಿಲ್ ಬಿಡುಗಡೆ ಮಾಡದಿದ್ದರೆ ಸಹಿಸಿಕೊಳ್ಳುವ ಶಕ್ತಿ ಉಳಿದಿಲ್ಲ. ಬಿಲ್ ಪಾವತಿಗೆ ವಿಳಂಬ ನೀತಿ ಅನುಸರಿಸಿ ವೆಂಡರ್‌ಗಳು ಆತ್ಮಹತ್ಯೆಯ ದಾರಿ ಹಿಡಿದರೆ ಅದಕ್ಕೆ ಪ್ರಿಯಾಂಕ್ ಖರ್ಗೆ, ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪವನ್‌ಕುಮಾರ್ ಮಲ್ಲಪಟ್ಟಿ ಮತ್ತು ನಿರ್ದೇಶಕ (ಹಣಕಾಸು) ನಿಶ್ಚಿಸ್ ನೇರ ಹೊಣೆ ಎಂದು ವಸಂತ ಬಗೇರ ಪತ್ರದಲ್ಲಿ ತಿಳಿಸಿದ್ದಾರೆ.

ಬ್ಲ್ಯಾಕ್‌ಮೇಲ್: ದಯಾಮರಣ ಪತ್ರದ ವಿಚಾರವಾಗಿ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಹಿಂದಿನ ಬಿಜೆಪಿ ಸರ್ಕಾರದವರು ಸಾಲ ಮಾಡಿ ತುಪ್ಪ ತಿಂದಿದ್ದಾರೆ. ಅವರು ಮಾಡಿದ ಸಾಲವನ್ನು ನಮ್ಮ ಸರಕಾರ ತೀರಿಸುತ್ತಿದೆ. ಅಶ್ವಥ್ ನಾರಾಯಣ ಅವರು ಸಚಿವರಾಗಿದ್ದಾಗ ಕಿಯೋನಿಕ್ಸ್‌ನಲ್ಲಿ ನಡೆದಿರುವ ಅವ್ಯವಹಾರಗಳಿಗೆ ನಾನು ಜವಾಬ್ದಾರನೇ ಎಂದು ಪ್ರಶ್ನಿಸಿದ್ದಾರೆ.

ಯಾವುದೇ ಮಾನದಂಡ ಪಾಲಿಸದೆ ಖರೀದಿ ಬಿಲ್ಲಿಂಗ್ ಟೆಂಡರ್ ಮಾಡಲಾಗಿದೆ. ಅಂದಾಜು 500 ಕೋಟಿ ರೂ. ಅವ್ಯವಹಾರ ಕಂಡುಬಂದಿದೆ. ಆಡಿಟ್ ವರದಿಯಲ್ಲಿ 300 ಕೋಟಿ ರೂ.ಗೆ ಆಕ್ಷೇಪಣೆ ಇದೆ. ನಾಲ್ಕು ವರ್ಷದ ಆಡಿಟ್ ವರದಿ ಮಾಡಬೇಕಿದೆ. ಇದಕ್ಕೆ ಕಾಲಾವಕಾಶ ಬೇಕಿದ್ದು, ವರದಿ ಆಧಾರದಲ್ಲಿ ಬಿಲ್ ಪಾವತಿಸಲಾಗುತ್ತದೆ. ಈ ಮಧ್ಯೆ ವೆಂಡರ್‌ಗಳು ಬ್ಲ್ಯಾಕ್‌ಮೇಲ್ ಮಾಡುವುದು ಎಷ್ಟು ಸರಿ. ಕೆಲವರಿಗೆ ತೊಂದರೆಯಾದರೂ ನಿಯಮಾವಳಿ ಪಾಲಿಸಲೇಬೇಕಿದೆ ಎಂದರು.

ಕಿಯೋನಿಕ್ಸ್ ಹಗರಣದಿಂದ ಸರ್ಕಾರದ ಖಜಾನೆಗೆ ನೂರಾರು ಕೋಟಿ ನಷ್ಟವಾಗಿದೆ. ಮಹೇಶ್ವರ್‌ರಾವ್ ಕಮಿಟಿ ವರದಿ ಪಡೆದು ಶೀಘ್ರವೇ ಬಾಕಿ ಬಿಲ್ ಪಾವತಿಸುತ್ತೇವೆ. 2021, 2022, 2023ನೇ ಸಾಲಿನ ಮೂರು ವರ್ಷದ ಖರ್ಚು ವೆಚ್ಚಗಳ ಪರಿಶೀಲನೆ ನಡೆಯುತ್ತಿದೆ. ಹಗರಣದಲ್ಲಿ ಭಾಗಿಯಾದವರ ವಿರುದ್ಧ ಶಿಸ್ತು ಕ್ರಮ ಜರುಗಿಸುತ್ತೇವೆ ಎಂದು ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಹೇಳಿದ್ದಾರೆ.

ಹಸುಗಳ ಕೆಚ್ಚಲು ಕತ್ತರಿಸಿದ ಪ್ರಕರಣ

ಪಶು ಸಂಗೋಪನಾ ಸಚಿವರ ಮನೆ ಬಳಿ ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ



ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಅವರ ನಿವಾಸದ ಬಳಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಜ.15(ಎಸ್‌ಪಿಎನ್)– ಬೆಂಗಳೂರಿನಲ್ಲಿ ಹಸುಗಳ ಕೆಚ್ಚಲು ಕೊಯ್ದ ಪ್ರಕರಣದಲ್ಲಿ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಮೌನವಾಗಿ ರುವುದನ್ನು ಪ್ರಶ್ನಿಸಿ, ಮೈಸೂರಿನ ಅವರ ನಿವಾಸದ ಬಳಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ಈ ಪ್ರತಿಭಟನೆಯ ನೇತೃತ್ವವನ್ನು ಬಿಜೆಪಿ ಶಾಸಕ ಟಿ.ಎಸ್.ಶ್ರೀವತ್ಸ ವಹಿಸಿದ್ದರು. ಈ ವೇಳೆ ಬಿಜೆಪಿ ಮುಖಂಡರು, ಕಾರ್ಯಕರ್ತರು, ಸಚಿವರ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಸರ್ಕಾರದ ವಿರುದ್ಧ 'ಲಜ್ಜೆಗೇಡಿ ಸರ್ಕಾರಕ್ಕೆ ಧಿಕ್ಕಾರ', 'ದೇಶದ್ರೋಹಿ ಸರ್ಕಾರಕ್ಕೆ ಧಿಕ್ಕಾರ', 'ಬೇಕೇ ಬೇಕು ನ್ಯಾಯ ಬೇಕು', 'ನೀತಿಗೆಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯಗೆ' ಕೋಮುವಾದಿ ಸಚಿವ ಜಮೀರ್ ಅಹಮದ್ ಖಾನ್, ವೆಂಕಟೇಶ್‌ಗೆ ಧಿಕ್ಕಾರ' ಹಾಗೂ ಗೋಮಾತೆ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ' ಮೊದಲಾದ ಘೋಷಣೆ ಕೂಗಿದರು.

ಈ ವೇಳೆ 'ಗೋಮಾತೆಯ ಕೆಚ್ಚಲು ಕೊಯ್ದ ಆರೋಪಿಗಳಿಗೆ ಕಠಿಣ ಶಿಕ್ಷೆ ಆಗುವಂತೆ ರಾಜ್ಯ ಸರ್ಕಾರ ಕ್ರಮವಹಿಸಬೇಕು ಎಂದು ಬಿಜೆಪಿ ಕಾರ್ಯಕರ್ತರು ಆಗ್ರಹಿಸಿದರು. ಬಿಜೆಪಿ ಕಾರ್ಯಕರ್ತರು ಗೋಣಿಚೀಲದಲ್ಲಿ ಸಗಣಿಯೊಂದಿಗೆ ಸಚಿವರ ಮನೆಯತ್ತ ಸಾಗಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಸಚಿವರ ಮನೆಗೆ ಅನತಿ ದೂರದಲ್ಲೇ ತಡೆದರು. ಆಗ ಪ್ರತಿಭಟನಾಕಾರರು–ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಆಗ ಕಾರ್ಯಕರ್ತರು ಸಗಣಿಯನ್ನು ರಸ್ತೆಯಲ್ಲೇ ಚೆಲ್ಲಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಪೊಲೀಸರು ಮತ್ತು ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ಹೊರಹಾಕಿದರು. ಈ ವೇಳೆ ಬಿಜೆಪಿ ನಗರ ಘಟಕದ ಅಧ್ಯಕ್ಷ ಎಲ್. ನಾಗೇಂದ್ರ, ಬಿಜೆಪಿ ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ರಾಜ್ಯ ಅಲ್ಪಸಂಖ್ಯಾತರ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್, ಮಾಜಿ ಮೇಯರ್ ಶಿವಕುಮಾರ್, ಮುಖಂಡರಾದ ಮಿರ್ಲೆ ಶ್ರೀನಿವಾಸಗೌಡ, ಜೋಗಿಮಂಜು, ಜೆ.ಎಸ್. ಜಗದೀಶ್, ಗಿರಿಧರ್ ಇದ್ದರು.

ದೇಶಿಗೌಡ ನಿಧನ



ಮೈಸೂರು, ಜ.15– ಮೈಸೂರಿನ ಕೆ.ಜಿ.ಕೊಪ್ಪಲು 3ನೇ ಕ್ರಾಸ್ ನಿವಾಸಿ, ದಿವಂಗತ ಕೋಟೆಗೌಡರ ಪುತ್ರ ದೇಶಿಗೌಡ(74) ಅವರು ಇಂದು (ಬುಧವಾರ) ರಾತ್ರಿ ನಿಧನರಾದರು.

ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಯನಾಡ್ ಭೂಕುಸಿತ: ಕಾಣೆಯಾದವರು ಮೃತರೆಂದು ಘೋಷಿಸಲು ನಿರ್ಧಾರ

ತಿರುವನಂತಪುರ, ಜ.15– ಕಳೆದ ವರ್ಷ ವಯನಾಡ್‌ನಲ್ಲಿ ಸಂಭವಿಸಿದ ಭೂಕುಸಿತ ದುರಂತದಲ್ಲಿ ಕಣ್ಮರೆಯಾಗಿ, ಇದುವರೆಗೂ ಪತ್ತೆಯಾಗದವರನ್ನು ಮೃತರು ಎಂದು ಘೋಷಿಸಲು ಕೇರಳ ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ಸರ್ಕಾರದ ಈ ನಿರ್ಧಾರವು ಸಂತ್ರಸ್ತರ ಕುಟುಂಬಗಳು ಪರಿಹಾರ ಪಡೆಯಲು ನೆರವಾಗಲಿದೆ.

ಕಾಣೆಯಾದವರ ಪಟ್ಟಿಯನ್ನು ಪರಿಶೀಲಿಸಲು ಕಂದಾಯ ಇಲಾಖೆ ಅಧಿಕಾರಿಗಳನ್ನು ಒಳಗೊಂಡಂತೆ ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲಾಗುತ್ತಿದೆ. ಈ ಸಮಿತಿಗಳು ಸಲ್ಲಿಸುವ ಪಟ್ಟಿಯನ್ನು ಪರಿಶೀಲಿಸಿ ರಾಜ್ಯ ಸರ್ಕಾರವು, ಕಾಣೆಯಾದವರನ್ನು ಮೃತರೆಂದು ಘೋಷಿಸಿ, ಅವರ ನಿಕಟ ಸಂಬಂಧಿಗಳಿಗೆ ಪರಿಹಾರ ನೀಡಲಿದೆ ಎಂದು ರಾಜ್ಯ ಸರ್ಕಾರವು ಮಂಗಳವಾರ ಹೊರಡಿಸಿರುವ ಆದೇಶದಲ್ಲಿ ಹೇಳಿದೆ. ಅಧಿಕೃತ ದಾಖಲೆಯ ಪ್ರಕಾರ, ಕಳೆದ ವರ್ಷ ಜು.30 ರಂದು ಸಂಭವಿಸಿದ ಭೂಕುಸಿತದಲ್ಲಿ 263 ಜನರು ಮೃತಪಟ್ಟಿದ್ದಾರೆ. 35 ಜನ ಕಾಣೆಯಾಗಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀಮತಿ ಧನಲಕ್ಷ್ಮಿ ರವರು

ನಿಧನ: 15.01.2025

ದುಃಖತಪ್ತರು: ತಂದೆ, ತಾಯಿ, ತಮ್ಮ, ಅಕ್ಕ, ತಂಗಿ ಹಾಗೂ ಕುಟುಂಬಸ್ಥರು

ಭಾವಪೂರ್ಣ ಶ್ರದ್ಧಾಂಜಲಿ



ಮೈಸೂರಿನ ಕೆ.ಜಿ.ಕೊಪ್ಪಲು, 3ನೇ ಕ್ರಾಸ್‌ನಲ್ಲಿ ವಾಸವಿದ್ದ ದಿವಂಗತ ಕೋಟೆಗೌಡರ ಪುತ್ರ **ದೇಶಿಗೌಡ** ಅವರು ಇಂದು (ಬುಧವಾರ) ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಯುತರ ಅಂತ್ಯಕ್ರಿಯೆ ನಾಳೆ (16–1–2025) ಬೆಳಗ್ಗೆ 11 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ (ಕಾವೇರಿ ಸ್ಕೂಲ್ ಪಕ್ಕ) ನೆರವೇರಲಿದೆ.

ದೇಶಿಗೌಡರು

ಜನನ: 1-1-1951 ಮರಣ: 15-1-2025

–ದುಃಖತಪ್ತರು ಕುಟುಂಬ ವರ್ಗ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ: ಮೈಸೂರು ನಗರ, ಜಯನಗರ, 5ನೇ ಮೇನ್, 1ನೇ ಕ್ರಾಸ್, ಮನೆ ನಂ–7/6 ಎ ರಲ್ಲಿ ವಾಸವಾಗಿರುವ ಶ್ರೀಮತಿ ಕನ್ಯಾ ಕೋಂ ಮಹದೇವ ಇವರು ತಮ್ಮ ಸ್ವಯಾರ್ಜಿತ ಆಸ್ತಿಯಾದ ಮೈಸೂರು ತಾಲ್ಲೂಕು, ಮಂಡಕಳ್ಳಿ ಗ್ರಾಮದ ಸರ್ವೆ ನಂಬರ್ 168/5–6ರ 02 ಎಕರೆ 24 ಗುಂಟೆ ಪ್ರದೇಶದಲ್ಲಿ ಮೈಸೂರು ಜಿಲ್ಲಾಧಿಕಾರಿಗಳವರಿಂದ ಭೂ ಪರಿವರ್ತನೆ ಆದೇಶ ಪಡೆದು ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರದಿಂದ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮತಿ ಮತ್ತು ಕಾರ್ಯಾದೇಶ ಪಡೆದು ಸದರಿ ಪ್ರದೇಶದಲ್ಲಿ ಶೇಕಡಾ 100 ರಷ್ಟು ಕಾಮಗಾರಿ ಮುಗಿಸಿರುತ್ತಾರೆ.

ಸದರಿ ಬಡಾವಣೆಯಲ್ಲಿ ನಿರ್ಮಿಸಿರುವ ಬಹು ನಿವೇಶನಗಳ ಅಂತಿಮ ನಕ್ಷೆ ಮತ್ತು ನಿವೇಶನ ಪಟ್ಟಿಯು MUDA ಪ್ರಾಧಿಕಾರದಿಂದ ಬಿಡುಗಡೆಯಾದ ನಂತರ ಮಾರಾಟ ಮಾಡಿಸಲು ನನ್ನ ಕಕ್ಷಿದಾರರಾದ ಶ್ರೀ.ಜಿ.ವಿ.ನಾಗೇಶ್ ಮೈಸೂರು ರವರು ಮುಂದೆ ಬಂದಿರುತ್ತಾರೆ.

ಮೇಲ್ಕಂಡ ಸ್ವತ್ತಿನ ಬಗ್ಗೆ ಯಾರಿಗಾದರೂ ಹಕ್ಕು, ಅಧಿಕಾರ, ಆಕ್ಷೇಪಣೆ ಇದ್ದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟವಾದ 15 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಯನ್ನು ಸೂಕ್ತ ದಾಖಲಾತಿಗಳೊಂದಿಗೆ ಲಿಖಿತ ರೂಪದಲ್ಲಿ ನಮ್ಮ ಕಛೇರಿಗೆ ಸಲ್ಲಿಸುವುದು. ನಂತರ ಬಂದ ಅರ್ಜಿಗಳಿಗೆ ಮಾನ್ಯತೆ ಇರುವುದಿಲ್ಲ.

ಸಹಿ/– ಎನ್.ಪಿ. ಕಮಲಾದೇವಿ, ವಕೀಲರು ಮತ್ತು ನೋಟರಿ, ಕಛೇರಿ ವಿಳಾಸ: ನಂ–683. 1ನೇ ಮಹಡಿ, ಶಾಪ್ ನಂ–2, ನೃಪತುಂಗ ರಸ್ತೆ, 'ಎಂ' ಬ್ಲಾಕ್, ಕುವೆಂಪುನಗರ, ಮೈಸೂರು. ಮೊ: 9480194798.



ಶಿವಕುಮಾರ (ಪಾಂಡು) ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು

ಶುಭಕೋರುವವರು ಗಿರಿಯಾಭೋವಿ ಪಾಳ್ಯದ ಗೆಳೆಯರು, ಮೈಸೂರು

ಎರಡನೇ ವರ್ಷದ ಪುಣ್ಯಸ್ಮರಣೆ



ಜವರಯ್ಯ. ಆರ್

(ಖಾಸಗಿ ಬಸ್ ಏಜೆಂಟ್)

ನೀವು ನಮ್ಮನ್ನಗಲಿ 2 ವರ್ಷವಾಯಿತು ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಖಾಸಗಿ ಬಸ್ ಏಜೆಂಟ್ ಸಂಘದ ಕಾರ್ಯದರ್ಶಿ ರಾಜ್ಯಣ್ಣ, ತಾಯಿ ಜಯಮ್ಮ, ಪತ್ನಿ ತಾರಾ, ಪುತ್ರಿ ಆರ್.ಚಿತ್ರಾ, ಪುತ್ರ ಆರ್.ಪ್ರಜ್ವಲ್, ಅತ್ತೆ ಆರ್.ಆಶಾ, ಎಸ್.ಡಿ ನಾಯಕ್, ಎಸ್. ಮಿಥುನ್ ನಾಯಕ್, ಸಹೋದರ ಮಂಜುನಾಥ್, ಲಕ್ಷ್ಮಿ ಹಾಗೂ ಕುಟುಂಬವರ್ಗ, ಆಲಗೂಡು, ತಿ.ನರಸೀಪುರ

ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಕೆಳಗೆ A, B ಮತ್ತು C ಷೆಡ್ಯೂಲ್‌ಗಳಲ್ಲಿ ವಿವರಿಸಿರುವ ಸ್ವತ್ತುಗಳನ್ನು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮಾಲೀಕರಾದ ಶ್ರೀಮತಿ. ನಾಗರತ್ನಮ್ಮ.ಪಿ, ಕೋಂ. ಶ್ರೀ. ಗೋವಿಂದಯ್ಯ, ವಾಸ: ನಂ. 66, ಹೊಸಕೇರಿ, ವಾರ್ಡ್ ನಂ. 12, ಬನ್ನೂರು ಟೌನ್, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ–571101 ರವರ ಸಂಪೂರ್ಣ ಹಕ್ಕು, ಮಾಲೀಕತ್ವಕೊಳಪಟ್ಟ ಹಾಗೂ ಯಾವುದೇ ಋಣ ಭಾರಗಳಿಲ್ಲದ A, B ಮತ್ತು C ಷೆಡ್ಯೂಲ್ ಸ್ವತ್ತುಗಳನ್ನು ಸದರಿ ಶ್ರೀಮತಿ. ನಾಗರತ್ನಮ್ಮ.ಪಿ ರವರಿಂದ ಕ್ರಯಕ್ಕೆ ಪಡೆಯಲು ಹೊರಟಿರುತ್ತಾರೆ. ಸದರಿ ಸ್ವತ್ತುಗಳ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳೇನಾದರೂ ಇದ್ದ ಪಕ್ಷದಲ್ಲಿ ಸದರಿ ಹಕ್ಕು, ಬಾಧ್ಯತೆ, ಆಕ್ಷೇಪಣೆಗಳನ್ನು ಪುಷ್ಟೀಕರಿಸುವಂತಹ ಸೂಕ್ತ ದಾಖಲೆಗಳೊಂದಿಗೆ ಈ ನೋಟೀಸು ಪ್ರಕಟವಾದ 10 (ಹತ್ತು) ದಿನಗಳ ಒಳಗೆ ಕೆಳಕಂಡ ವಕೀಲರ ಕಛೇರಿಗೆ ಸಲ್ಲಿಸತಕ್ಕದ್ದು, ನಂತರ ಬರುವ ಆಕ್ಷೇಪಣೆಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಶೃತಪಡಿಸಿರುತ್ತದೆ.

"A" **ಷೆಡ್ಯೂಲ್ ಸ್ವತ್ತಿನ ವಿವರ**": ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಾರ್ಯ ಗ್ರಾಮದ ಸರ್ವೆ ನಂ. 125/3 ರ ವಿಸ್ತೀರ್ಣ 30 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ. 125/4 ರ ಜಮೀನು, ಪಶ್ಚಿಮಕ್ಕೆ : ಸರ್ವೆ ನಂ. 125/1ಬಿ1 ರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸರ್ವೆ ನಂ. 125/5 ರ ಜಮೀನು.

"B" **ಷೆಡ್ಯೂಲ್ ಸ್ವತ್ತಿನ ವಿವರ**": ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಾರ್ಯ ಗ್ರಾಮದ ಸರ್ವೆ ನಂ. 125/4 ರ ವಿಸ್ತೀರ್ಣ 1 ಎಕರೆ 22 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಯೂಸಫ್ ಸಾಬ್ ರವರ ಮನೆ ಮತ್ತು ಸರ್ವೆ ನಂ 124ರ ಜಮೀನು, ಪಶ್ಚಿಮಕ್ಕೆ : ಸರ್ವೇ ನಂ 125/3ರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಸರ್ವೆ ನಂ 125/5 ಜಮೀನು

"C" **ಷೆಡ್ಯೂಲ್ ಸ್ವತ್ತಿನ ವಿವರ**": ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಾರ್ಯ ಗ್ರಾಮದ ಸರ್ವೆ ನಂ. 125/5 ರ ವಿಸ್ತೀರ್ಣ 28 ಗುಂಟೆ ಜಮೀನಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಸರ್ವೆ ನಂ. 124 ರ ಜಮೀನು, ಪಶ್ಚಿಮಕ್ಕೆ : ರಸ್ತೆ ಮತ್ತು ಸರ್ವೆ ನಂ. 125/2ಎ ರ ಜಮೀನು, ಉತ್ತರಕ್ಕೆ : ಸರ್ವೆ ನಂ. 125/3, 125/4 ಮತ್ತು ಸರ್ವೆ ನಂ. 125/1ಬಿ1 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ. 125/2ಎ ರ ಜಮೀನು.

ಸಹಿ/– ಎ.ಸಿ.ನಟರಾಜ್., ಬಿ.ಎಸ್ಸಿ.,ಎಂ.ಎಲ್

ಸಹಿ/– ಎ.ಎನ್.ಲಿಂಗರಾಜೇ ಅರಸ್, ಬಿ.ಎಸ್ಸಿ., ಬಿ.ಎಲ್.

ವಕೀಲರು, ಲಾ ಛೇಂಬರ್ಸ್ #33/1,2&3, ಜೆಎಸ್‌ಬಿ ರಸ್ತೆ, ತಗಡೂರು ರಾಮಚಂದ್ರರಾವ್ ವೃತ್ತ, ವಿದ್ಯಾರಣ್ಯಪುರಂ, ಮೈಸೂರು 570008, ಸಂಖ್ಯೆ : 9448439192

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

Mysore Silk

ರೇಷ್ಮೆ ನೂಲು ತೆಗೆಯುವ ಘಟಕ: ತಿ.ನರಸೀಪುರ

ಮೈಸೂರು ಜಿಲ್ಲೆ – 571124, ಫೋನ್: 08227–261226

ಸಂಖ್ಯೆ: ಕೆಎಸ್‌ಐಸಿ:ರೇನೂಘ:ತಿನಪು:2024–25/488 ದಿನಾಂಕ: 11.01.2025

ಟೆಂಡರು ಹಾಗು ಹರಾಜು ಪ್ರಕಟಣೆ

ಸಮಸ್ತ ಟೆಂಡರುದಾರರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಕಾರ್ಖಾನೆಯಲ್ಲಿ ದಿನಾಂಕ: 01.03.2025 ರಿಂದ 28.02.2026ರ ವರೆಗೆ ಬೇಸಿನ್‌ಗಳಿಂದ ಶೇಖರಿಸಲ್ಪಡುವ ಡೆಡ್ ಪ್ಯೂಪ ಮಾರಾಟ ಮಾಡಲು ಮೆ॥ ಕೆ.ಎಸ್.ಪಿ.ಸಿ.ಬಿ, ಮೈಸೂರು ಇವರಿಂದ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಲು ದೃಢೀಕೃತ ಪ್ರಮಾಣ ಪತ್ರ ಹೊಂದಿರುವವರಿಂದ ಮೊಹರಾದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇಷ್ಟವುಳ್ಳ ಟೆಂಡರುದಾರರು ರೂ.25,000 (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ನಗದು ಠೇವಣಿ ಇಡಬೇಕಾಗುತ್ತದೆ. ಹಾಗೂ ಟೆಂಡರುದಾರರು ನಿಬಂಧನೆ ಹಾಗೂ ಹೆಚ್ಚಿನ ವಿವರಗಳನ್ನೊಳಗೊಂಡ ಕರಾರು ಹಾಗು ನಿಬಂಧನೆಗಳ ಪಟ್ಟಿಯನ್ನು ರೂ.50.00 (ತೆರಿಗೆ ಪ್ರತ್ಯೇಕ)ಗಳನ್ನು ನಗದುರೂಪದಲ್ಲಿ ಪಾವತಿಸಿ ದಿ: 20.01.2025 ರಿಂದ ಪಡೆದುಕೊಳ್ಳಬಹುದಾಗಿದೆ. ಕಾರ್ಖಾನೆಯ ಯಾವುದೇ ಕೆಲಸದ ದಿನಗಳಂದು ಅಂದರೆ ಬೆಳಿಗ್ಗೆ 9.00 ಗಂಟೆಯಿಂದ 4.00 ಗಂಟೆಯವರೆಗೆ ಖುದ್ದಾಗಿ ಅಥವಾ ಪತ್ರದ ಮೂಲಕ ಸಂಪರ್ಕಿಸಬಹುದು. ಅರ್ಜಿ ಪಡೆಯಲು ಕೊನೆಯ ದಿ: 29.01.2025 ಬೆಳಿಗ್ಗೆ 10.00 ಗಂಟೆ. ಮೊಹರಾದ ಟೆಂಡರುಗಳನ್ನು ಸ್ವೀಕರಿಸಲು ಕೊನೆಯ ದಿ: 29.01.2025 ಬೆಳಿಗ್ಗೆ 11.00 ಗಂಟೆ. ಅದೇ ದಿನ ಬೆಳಿಗ್ಗೆ 12.00 ಗಂಟೆಗೆ ಹರಾಜನ್ನು ನಡೆಸಿ ನಂತರ ಟೆಂಡರುಗಳನ್ನು ತೆರೆಯಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು

DIPR/DDMYS//KSMCA/747/2024-25

ಮೊದಲನೇ ವರ್ಷದ ಸವಿನೆನಪು



ಎಸ್.ಮಹಾದೇವಸ್ವಾಮಿ


ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು ನಿಧನ: 15.01.2024

ಜೀವನದಲ್ಲಿ ಶ್ರೇಷ್ಠವಾದ ಶಿಸ್ತು ಮತ್ತು ಸಂಸ್ಕಾರಯುತ ಬದುಕನ್ನು ನಡೆಸಿ ಪ್ರೀತಿ ವಾತ್ಸಲ್ಯದ ಪ್ರತಿರೂಪವಾಗಿ ಎಲ್ಲರಿಗೂ ಪ್ರೀತಿಯ ಚಿಲುಮೆಯಾಗಿ ಸದಾಕಾಲ ಎಲ್ಲರ ಒಳಿತನ್ನು ಬಯಸುತ್ತಿದ್ದ ನಿಮ್ಮ ಅಗಲಿಕೆ ನಮಗೆ ಅತೀವ ದುಃಖವನ್ನುಂಟು ಮಾಡಿದೆ ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಪ್ರಾರ್ಥಿಸುವ

ದುಃಖತಪ್ತರು: ಪತ್ನಿ ಎಸ್.ಪ್ರವಾವತಿ ಕುಟುಂಬಸ್ಥರು ಹಾಗೂ ಬಂಧುಮಿತ್ರರು ಟಿ.ಕೆ.ಲೇಔಟ್ ಮೈಸೂರು

ಮತ್ತೆ ಹುಟ್ಟಿ ಬನ್ನಿ ಎಂದು ಆಶಿಸುತ್ತೇವೆ

21ನೇ ವರ್ಷದ ಸವಿನೆನಪು



ಶ್ರೀ ಎಸ್.ನೀಲಯ್ಯನವರು

ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರು

ನೀವು ನಮ್ಮನ್ನಗಲಿ ಇಂದಿಗೆ 21 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಇಂತಿ ದುಃಖತಪ್ತರು: ಶ್ರೀಮತಿ ಎಸ್.ಶಕುಂತಲಮ್ಮ ಮತ್ತು ಕುಟುಂಬವರ್ಗದವರು NGSP, No. 3462, 15ನೇ ಕ್ರಾಸ್, ಶ್ರೀಕಂಠಪುರಿ ಬಡಾವಣೆ, ನಂಜನಗೂಡು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ. ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು, ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಪುರಸಭಾ ಕಾರ್ಯಾಲಯ, ತಿ.ನರಸೀಪುರ

ಮೈಸೂರು ಜಿಲ್ಲೆ – 571124

Email: ka.tnarasipura.tmc@gmail.com

Website : www.tnarasipuratown.mrc.gov.in

Phone: 08227-261232

ಸಂ:ಪುಸ/ತಿನಪು/ಕು.ನೀ/ಟೆಂಡರ್–01/2024–25 ದಿನಾಂಕ: 10.01.2025

ಟೆಂಡರ್ ಪ್ರಕಟಣೆ

ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಕುಡಿಯುವ ನೀರಿನ ಅನುದಾನದಲ್ಲಿ ಅರ್ಹ ಗುತ್ತಿಗೆದಾರರಿಂದ, KW-1 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಇಂಡೆಂಟ್ ಸಂಖ್ಯೆ:DMA/2024-25/WS/WORK_INDENT34525 ಟೆಂಡರ್ ಗಿಟ್ಟ ಮೊತ್ತ ರೂ.1.34 ಲಕ್ಷಗಳು ಆಸಕ್ತಿಯುಳ್ಳ ಗುತ್ತಿಗೆದಾರರು ಕೆಪಿಪಿ ಪೋರ್ಟಲ್ ಮೂಲಕ http://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ನ್ನು ಸಲ್ಲಿಸಬಹುದು. 1) ಟೆಂಡರ್ ಸಲ್ಲಿಸಲು ಕೊನೆಯ ದಿ: 27.01.2025 ಸಂಜೆ 5.30 ಗಂಟೆವರೆಗೆ 2) ಟೆಂಡರ್ ತೆರೆಯುವ ದಿ: 29.01.2025 ಬೆಳಿಗ್ಗೆ 11.00 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು /ಏಜೆನ್ಸಿದಾರರು http://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. **2)** 18.00% GST will be added Separately.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ತಿ.ನರಸೀಪುರ

DIPR/DDMYS/1099/KSMCA/744/2024-25

ಹುಲ್ಲಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ.

ಹುಲ್ಲಹಳ್ಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ–571314 E-Mail – Hullahalligp11@gmail.com

ನಂ.ಹು.ಗ್ರಾ.ಪಂ :141/2024–25 ದಿನಾಂಕ : 15/01/2025

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ದಿನಾಂಕ : 31/01/2025 ರ ಶುಕ್ರವಾರ ದಂದು ಬೆಳಿಗ್ಗೆ 11.00 ಗಂಟೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 1993 ಪ್ರಕರಣ 209 ನೇದ್ದಂತೆ ಈ ಕೆಳಕಂಡ ಗ್ರಾಮ ಪಂಚಾಯಿತಿಯ ಸ್ವತ್ತುಗಳ ಹರಾಜನ್ನು ಕಛೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಭಾಗವಹಿಸಲು ಈ ಮೂಲಕ ತಿಳಿಸಿದೆ.

ಕ್ರಸಂ	ಅಂಗಡಿ ಮಳಿಗೆಗಳ ಸ್ಥಳ	ಮಳಿಗೆ ಸಂಖ್ಯೆ	ಅವಧಿ	ಠೇವಣಿ
1	ರಾಂಪುರ ರಸ್ತೆಯಲ್ಲಿರುವ ಗ್ರಾ.ಪಂ. ಅಂಗಡಿ ಮಳಿಗೆಗಳು	1, 2, 3, 4, 5, 6, 8, 10	33 ತಿಂಗಳು	20,000/– (ಪ್ರತೀ ಅಂಗಡಿಗೆ)
2	ಶ್ರೀಕಂಠ ಜೋಯಿಸ್ ವೃತ್ತದ ಹತ್ತಿರದ ಗ್ರಾ.ಪಂ. ಅಂಗಡಿ ಮಳಿಗೆಗಳು	11, 12, 13, 14	33 ತಿಂಗಳು	20,000/– (ಪ್ರತೀ ಅಂಗಡಿಗೆ)
3	ಅಂಗಡಿ ಬೀದಿ (ಹಾಲಿನ ಡೈರಿ ಹತ್ತಿರ) ಯಲ್ಲಿರುವ ಗ್ರಾ.ಪಂ. ಅಂಗಡಿ ಮಳಿಗೆಗಳು	16	33 ತಿಂಗಳು	20,000/– (ಪ್ರತೀ ಅಂಗಡಿಗೆ)

- ಗ್ರಾ.ಪಂ. ವ್ಯಾಪ್ತಿಯ ಸಾರ್ವಜನಿಕರು ಮಾತ್ರ ಭಾಗವಹಿಸತಕ್ಕದ್ದು.
- ಮಳಿಗೆ ಸಂಖ್ಯೆ 01 ಮತ್ತು 11 ನ್ನು ಪರಿಶಿಷ್ಟ ಪಂಗಡ ಜನಾಂಗಕ್ಕೆ ಹಾಗೂ ಮಳಿಗೆ ಸಂಖ್ಯೆ 03 ಮತ್ತು 14 ನ್ನು ಪರಿಶಿಷ್ಟ ಜಾತಿಯ ಜನಾಂಗದವರಿಗೆ ಮೀಸಲಿರಿಸಿದೆ.
- ಗ್ರಾ.ಪಂ. ತೀರ್ಮಾನವೇ ಅಂತಿಮ ತೀರ್ಮಾನ.
- ಷರತ್ತುಗಳು ಅನ್ವಯ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಮೋ. 9164044741, 845386223, 8095032546.

ಸಹಿ/– ಶ್ರೀಮತಿ ದೇವಮ್ಮ, ಅಧ್ಯಕ್ಷರು, ಗ್ರಾ.ಪಂ.ಹುಲ್ಲಹಳ್ಳಿ

ಸಹಿ/– ಶ್ರೀ ಹೆಚ್.ಪಿ.ಲೋಕೇಶ್, ಉಪಾಧ್ಯಕ್ಷರು, ಗ್ರಾ.ಪಂ. ಹುಲ್ಲಹಳ್ಳಿ

ಸಹಿ/– ಶ್ರೀ ಶ್ರೀಧರ.ಹೆಚ್.ಬಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ. ಹುಲ್ಲಹಳ್ಳಿ

ಸಹಿ/– ಶ್ರೀ ಸೋಮಸುಂದರ್, ಕಾರ್ಯದರ್ಶಿ ಗ್ರೇಡ್–1, ಗ್ರಾ.ಪಂ. ಹುಲ್ಲಹಳ್ಳಿ

ಸಹಿ/– ಶ್ರೀ ಬಸವಣ್ಣ.ಕೆ, ದ್ವಿ.ದ.ಲೆ.ಸಹಾಯಕರು, ಗ್ರಾ.ಪಂ. ಹುಲ್ಲಹಳ್ಳಿ